**Re.No. D. 221**

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

| | |
|---|---|
| **भाग IX** | **अनुभाग 1** |
| **PART IX** | **SECTION 1** |
| **ಭಾಗ IX** | **ವಿಭಾಗ 1** |

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | |
|---|---|---|
| सं 1, नई दिल्ली, बुधवार , 07 जून, 2023 | ज्येष्ठ 19, 1945 (शक) | खंड.53 |
| No.1, New Delhi, Wednesday, June 07, 2023 | Jyeshtha 19, 1945 (saka) | Vol. 53 |
| ನಂ.1, ನವದೆಹಲಿ, ಬುಧವಾರ, ಜೂನ್ 07, 2023 | ಜ್ಯೇಷ್ಠ 19, 1945 (ಶಕ) | ಸಂಪುಟ.53 |


**Ministry of Law and Justice**
(Legislative Department)
New Delhi, 07th June, 2023

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 07ನೇ ಜೂನ್, 2023**

The Translation in Kannada of the following Acts, namely:- (1) THE EMIGRATION ACT, 1983 (NO.31 OF 1983) (2) THE FOOD SAFETY AND STANDARDS ACT, 2006 (NO.34 OF 2006) (3) THE PAYMENT AND SETTLEMENT SYSTEMS ACT, 2007 (NO.51 OF 2007) (4) THE NATIONAL JUTE BOARD ACT, 2008 (NO.12 OF 2009) (5) THE NATIONAL GREEN TRIBUNAL ACT, 2010 (NO.19 OF 2010) (6) THE RIGHT TO FAIR COMPENSATION AND TRANSPARENCY IN LAND ACQUISITION, REHABILITATION AND RESETTLEMENT ACT, 2013 (NO.30 OF 2013) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

## ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ ಅಧಿನಿಯಮ, 2006

## (2006ರ ಸಂಖ್ಯೆ 34)

[23ನೇ ಆಗಸ್ಟ್, 2006.]

ಆಹಾರಕ್ಕೆ ಸಂಬಂಧಿಸಿದ ಕಾನೂನುಗಳನ್ನು ಕ್ರೋಡೀಕರಿಸಲು ಮತ್ತು ಆಹಾರ ಪದಾರ್ಥಗಳಿಗೆ ವೈಜ್ಞಾನಿಕ ಆಧಾರಿತ ಗುಣಮಟ್ಟಗಳನ್ನು ನಿಗದಿಪಡಿಸಲು ಮತ್ತು ಭಾರತ ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ ಪ್ರಾಧಿಕಾರವನ್ನು ಸ್ಥಾಪಿಸಲು ಮತ್ತು ಆಹಾರ ಪದಾರ್ಥಗಳ ತಯಾರಿಕೆ, ದಾಸ್ತಾನು, ವಿತರಣೆ, ಮಾರಾಟ ಮತ್ತು ಆಮದನ್ನು ವಿನಿಯಮಿಸಲು, ಮಾನವ ಬಳಕೆಗಾಗಿ ಸುರಕ್ಷಿತ ಮತ್ತು ಆರೋಗ್ಯಕರ ಆಹಾರದ ಲಭ್ಯತೆಯನ್ನು ಸುನಿಶ್ಚಿತಪಡಿಸಿಕೊಳ್ಳಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ, ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತೇಳನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ ಅಧಿನಿಯಮ, 2006 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1]ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿದ ಅಂಥ ಯಾವುದೇ ಉಪಬಂಧದಲ್ಲಿನ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

2. **ಒಕ್ಕೂಟದಿಂದ ನಿಯಂತ್ರಣದ ವಿಹಿತತೆಗೆ ಸಂಬಂಧಿಸಿದಂತೆ ಘೋಷಣೆ.-** ಒಕ್ಕೂಟವು, ಸಾರ್ವಜನಿಕ ಹಿತದೃಷ್ಟಿಯಿಂದ ಆಹಾರ ಉದ್ಯಮವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ವಿಹಿತ ಎಂದು ಈ ಮೂಲಕ ಘೋಷಿಸಲಾಗಿದೆ.

3. **ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

---

[1] 15, ಅಕ್ಟೋಬರ್ 2007. ನೋಡಿ: ಪ್ರಕರಣಗಳು 4 ರಿಂದ 10 (ಎರಡೂ ಸೇರಿ) ಪ್ರಕರಣಗಳು 87, 88, 91 ಮತ್ತು 101 2007 ರ ಅಕ್ಟೋಬರ್ 15 ರಿಂದ ಜಾರಿಗೆ ಬಂದಿವೆ. ನೋಡಿ: ಅಧಿಸೂಚನೆ ಸಂಖ್ಯೆ ಎಸ್.ಒ 1758 (ಇ). ಭಾರತ ರಾಜಪತ್ರ, ಅಸಾಧಾರಣ ಭಾಗ-II, ವಿಭಾಗ 3 (ii).

28, ಮೇ 2008. (ಉಪ ಪ್ರಕರಣ 3 ಮತ್ತು 30) ನೋಡಿ: ಅಧಿಸೂಚನೆ ಸಂಖ್ಯೆ ಎಸ್.ಒ 1246 (ಇ), ದಿನಾಂಕ:28ನೇ ಮೇ 2008. ನೋಡಿ, ಭಾರತ ರಾಜಪತ್ರ, ಅಸಾಧಾರಣ, ಭಾಗ-II, ವಿಭಾಗ 3 (ii).

28, ಆಗಸ್ಟ್ 2008. (ಪ್ರಕರಣ 90) ನೋಡಿ: ಅಧಿಸೂಚನೆ ಸಂಖ್ಯೆ ಎಸ್.ಒ 2127 (ಇ), ದಿನಾಂಕ:28ನೇ ಆಗಸ್ಟ್ 2008. ನೋಡಿ, ಭಾರತ ರಾಜಪತ್ರ, ಅಸಾಧಾರಣ, ಭಾಗ-II, ವಿಭಾಗ 3 (ii).

18, ನವೆಂಬರ್ 2008. (ಉಪ ಪ್ರಕರಣ 16, 17, 18, 81, 82, 83, 84, 85, 86, 92 ಮತ್ತು 93) ನೋಡಿ: ಅಧಿಸೂಚನೆ ಸಂಖ್ಯೆ ಎಸ್.ಒ 2678 (ಇ), ದಿನಾಂಕ:18ನೇ ನವೆಂಬರ್ 2008. ನೋಡಿ, ಭಾರತ ರಾಜಪತ್ರ, ಅಸಾಧಾರಣ, ಭಾಗ-II, ವಿಭಾಗ 3 (ii).

09, ಮಾರ್ಚ್ 2009. (ಉಪ ಪ್ರಕರಣ 11, 12, 13, 14 ಮತ್ತು 15) ನೋಡಿ: ಅಧಿಸೂಚನೆ ಸಂಖ್ಯೆ ಎಸ್.ಒ 650 (ಇ), ದಿನಾಂಕ:09ನೇ ಮಾರ್ಚ್ 2009. ನೋಡಿ, ಭಾರತ ರಾಜಪತ್ರ, ಅಸಾಧಾರಣ, ಭಾಗ-II, ವಿಭಾಗ 3 (ii).

31, ಜುಲೈ 2009. ಪ್ರಕರಣ 36 ರಿಂದ 47. ನೋಡಿ: ಅಧಿಸೂಚನೆ ಸಂಖ್ಯೆ ಎಸ್.ಒ 1868 (ಇ), ದಿನಾಂಕ:31ನೇ ಜುಲೈ 2009 ರಿಂದ. ನೋಡಿ, ಭಾರತ ರಾಜಪತ್ರ, ಅಸಾಧಾರಣ, ಭಾಗ-II, ವಿಭಾಗ 3 (ii).

29, ಜೂನ್ 2009. ಪ್ರಕರಣ 99 ನೋಡಿ: ಅಧಿಸೂಚನೆ ಸಂಖ್ಯೆ ಎಸ್.ಒ 1575(ಇ), ದಿನಾಂಕ:29ನೇ ಜೂನ್ 2009 ರಿಂದ. ನೋಡಿ, ಭಾರತ ರಾಜಪತ್ರ, ಅಸಾಧಾರಣ, ಭಾಗ-II, ವಿಭಾಗ 3 (ii).

(ಎ) "ಕಲಬೆರಕೆಕಾರಕ" ಎಂದರೆ, ಆಹಾರವನ್ನು ಸುರಕ್ಷಿತವಲ್ಲದ್ದನ್ನಾಗಿಸಲು ಅಥವಾ ಕಳಪೆ ಗುಣಮಟ್ಟದ್ದನ್ನಾಗಿಸಲು, ಅಥವಾ ತಪ್ಪು ಮುದ್ರೆ ಉಳ್ಳದ್ದನ್ನಾಗಿಸಲು ಅಥವಾ ಬಾಹ್ಯ ವಸ್ತುವನ್ನು ಒಳಗೊಂಡಿರುವಂತೆ ಮಾಡುವುದಕ್ಕಾಗಿ ಬಳಸಿದ ಅಥವಾ ಬಳಸಬಹುದಾದ ಯಾವುದೇ ವಸ್ತು;

(ಬಿ) "ಜಾಹೀರಾತು" ಎಂದರೆ, ಯಾವುದೇ ಬೆಳಕು, ಶಬ್ದ, ಹೊಗೆ, ಅನಿಲ, ಮುದ್ರಣ, ವಿದ್ಯುನ್ಮಾನ ಮಾಧ್ಯಮ, ಅಂತರ್ಜಾಲ ಅಥವಾ ವೆಬ್‌ಸೈಟ್ ಮೂಲಕ ಮಾಡಿದ ಯಾವುದೇ ಶ್ರವ್ಯ ಅಥವಾ ದೃಶ್ಯ ಪ್ರಚಾರ, ನಿರೂಪಣೆ ಅಥವಾ ಘೋಷಣೆ ಮತ್ತು ಇದರಲ್ಲಿ ಯಾವುದೇ ಸೂಚನಾ ಪತ್ರ, ಸುತ್ತೋಲೆ, ಲೇಬಲ್, ಹೊದಿಕೆ, ದರಪಟ್ಟಿ ಅಥವಾ ಇತರ ದಸ್ತಾವೇಜುಗಳ ಮೂಲಕ ಮಾಡುವ ಜಾಹೀರಾತು ಸೇರುತ್ತದೆ;

(ಸಿ) "ಅಧ್ಯಕ್ಷ" ಎಂದರೆ, ಆಹಾರ ಪ್ರಾಧಿಕಾರದ ಅಧ್ಯಕ್ಷ;

(ಡಿ) "ಕ್ಲೇಮು" ಎಂದರೆ, ಆಹಾರವು, ಅದರ ಮೂಲಕ್ಕೆ, ಪೋಷಕಾಂಶಗಳಿಗೆ, ಸ್ವರೂಪಕ್ಕೆ, ಸಂಸ್ಕರಣೆಗೆ, ಸಂಯೋಜನೆಗೆ ಸಂಬಂಧಿಸಿದಂತೆ ಅಥವಾ ಅನ್ಯಥಾ ನಿರ್ದಿಷ್ಟ ಗುಣಮಟ್ಟಗಳನ್ನು ಹೊಂದಿರಬೇಕು ಎಂದು ಹೇಳುವ, ಸೂಚಿಸುವ ಅಥವಾ ಹಾಗೆ ಧ್ವನಿತವಾಗುವ ಯಾವುದೇ ನಿರೂಪಣೆ;

(ಇ) "ಆಹಾರ ಸುರಕ್ಷತಾ ಆಯುಕ್ತ" ಎಂದರೆ, ಪ್ರಕರಣ 30ರ ಮೇರೆಗೆ ನೇಮಕಗೊಂಡ ಆಹಾರ ಸುರಕ್ಷತಾ ಆಯುಕ್ತ;

(ಎಫ್) "ಬಳಕೆದಾರ" ಎಂದರೆ, ತಮ್ಮ ವೈಯಕ್ತಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಆಹಾರವನ್ನು ಖರೀದಿಸುವ ಮತ್ತು ಸ್ವೀಕರಿಸುವ ವ್ಯಕ್ತಿಗಳು ಮತ್ತು ಕುಟುಂಬಗಳು;

(ಜಿ) "ಮಾಲಿನ್ಯಕಾರಕ" ಎಂದರೆ, ಆಹಾರಕ್ಕೆ ಸೇರಿಸಿರಲಿ ಅಥವಾ ಸೇರಿಸದಿರಲಿ, ಆದರೆ ಉತ್ಪಾದನೆ, (ಬೆಳೆ ಪೋಷಣೆ, ಪಶುಸಂಗೋಪನೆ ಅಥವಾ ಪಶುವೈದ್ಯಕೀಯ ಔಷಧಿಯಲ್ಲಿ ಪಾಲಿಸುವ ಕಾರ್ಯಾಚರಣೆಗಳು ಒಳಗೊಂಡಂತೆ) ತಯಾರಿಕೆ, ಸಂಸ್ಕರಣೆ, ಸಿದ್ಧತೆ, ಉಪಚಾರ, ಪ್ಯಾಕಿಂಗ್, ಪ್ಯಾಕೇಜಿಂಗ್, ಸಾಗಣೆ ಅಥವಾ ಅಂಥ ಆಹಾರವನ್ನು ಹೊಂದಿರುವುದರ ಪರಿಣಾಮವಾಗಿ ಅಥವಾ ಪರಿಸರ ಮಾಲಿನ್ಯದ ಪರಿಣಾಮವಾಗಿ ಅಂಥ ಆಹಾರದಲ್ಲಿ ಇರುವ ಯಾವುದೇ ವಸ್ತು, ಆದರೆ ಕೀಟಗಳ ಅವಶೇಷಗಳು, ಇಲಿಗಳಂಥ ಪ್ರಾಣಿಗಳ ಕೂದಲುಗಳು ಮತ್ತು ಇತರ ಬಾಹ್ಯ ವಸ್ತುವನ್ನು ಒಳಗೊಳ್ಳುವುದಿಲ್ಲ;

(ಹೆಚ್) "ಗೊತ್ತುಪಡಿಸಿದ ಅಧಿಕಾರಿ" ಎಂದರೆ, ಪ್ರಕರಣ 36ರ ಮೇರೆಗೆ ನೇಮಕಗೊಂಡ ಅಧಿಕಾರಿ;

(ಐ) "ಬಾಹ್ಯ ವಸ್ತು" ಎಂದರೆ, ಆಹಾರ ಪದಾರ್ಥದ ತಯಾರಿಕೆಗಾಗಿ ಬಳಸಲಾಗುವ ಕಚ್ಚಾ ವಸ್ತುಗಳಿಂದ, ಪ್ಯಾಕೇಜಿಂಗ್ ವಸ್ತುಗಳಿಂದ ಅಥವಾ ಸಂಸ್ಕರಣಾ ಪದ್ಧತಿಗಳಿಂದ ಅದಕ್ಕೆ ಸೇರಿಕೊಳ್ಳಬಹುದಾದ ಅಥವಾ ಅದಕ್ಕೆ ಸೇರಿಸಿದ, ಆಹಾರ ಪದಾರ್ಥದಲ್ಲಿ ಒಳಗೊಂಡ ಯಾವುದೇ ವಸ್ತು, ಆದರೆ, ಅಂಥ ವಸ್ತುವು ಅಂಥ ಆಹಾರ ಪದಾರ್ಥವನ್ನು ಸುರಕ್ಷಿತವಲ್ಲದ್ದನ್ನಾಗಿ ಮಾಡುವುದಿಲ್ಲ;

(ಜೆ) "ಆಹಾರ" ಎಂದರೆ, ಮಾನವ ಬಳಕೆಗೆ ಉದ್ದೇಶಿಸಿದ, ಸಂಸ್ಕರಿಸಿರುವ, ಭಾಗಶಃ ಸಂಸ್ಕರಿಸಿರುವ ಅಥವಾ ಸಂಸ್ಕರಿಸದಿರುವ ಯಾವುದೇ ವಸ್ತು ಮತ್ತು ಇದರಲ್ಲಿ "ಝಡ್‌ಕೆ" ಖಂಡದಲ್ಲಿ ಪರಿಭಾಷಿಸಿರುವಷ್ಟರ ಮಟ್ಟಿಗೆ

ಮೂಲ ಆಹಾರ, ತಳಿವಿಜ್ಞಾನದ ಮೂಲಕ ಮಾರ್ಪಾಟು ಮಾಡಿದ ಅಥವಾ ತಯಾರಿಸಿದ ಆಹಾರ ಅಥವಾ ಅಂಥ ಘಟಕಾಂಶಗಳನ್ನು ಒಳಗೊಂಡಿರುವ ಆಹಾರ, ಶಿಶು ಆಹಾರ, ಪ್ಯಾಕ್ ಮಾಡಿದ ಕುಡಿಯುವ ನೀರು, ಮದ್ಯಸಾರ ಯುಕ್ತ ಪಾನೀಯ, ಚೂಯಿಂಗ್ ಗಮ್ ಮತ್ತು ಆಹಾರವನ್ನು ತಯಾರಿಸುವಾಗ, ಸಿದ್ಧಪಡಿಸುವಾಗ ಅಥವಾ ಸಂಸ್ಕರಿಸುವಾಗ ಅದಕ್ಕೆ ಬಳಸಿದ ನೀರು ಒಳಗೊಂಡಂತೆ ಯಾವುದೇ ವಸ್ತು ಸೇರುತ್ತದೆ, ಆದರೆ, ಯಾವುದೇ ಪ್ರಾಣಿ ಆಹಾರ, ಸಜೀವ ಪ್ರಾಣಿಗಳನ್ನು ಮಾನವ ಬಳಕೆಗಾಗಿ ಮಾರುಕಟ್ಟೆಯಲ್ಲಿಡಲು ಸಿದ್ಧಪಡಿಸಿದ ಅಥವಾ ಸಂಸ್ಕರಿಸಿದ ಹೊರತು ಆ ಸಜೀವ ಪ್ರಾಣಿಗಳು, ಕೊಯ್ಲು ಮಾಡುವ ಮುಂಚಿನ ಸಸಿಗಳು, ಔಷಧಗಳು ಅಥವಾ ಔಷಧೀಯ ಉತ್ಪನ್ನಗಳು, ಸೌಂದರ್ಯವರ್ಧಕಗಳು, ನಿದ್ರಾಜನಕ ಅಥವಾ ಮನಸ್ಸಿನ ಮೇಲೆ ಪರಿಣಾಮ ಬೀರುವ ವಸ್ತುಗಳು ಒಳಗೊಳ್ಳುವುದಿಲ್ಲ:

ಪರಂತು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಯಾವುದೇ ಇತರ ವಸ್ತುವನ್ನು ಅದರ ಬಳಕೆ, ಸ್ವರೂಪ, ಸತ್ವ ಅಥವಾ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಆಹಾರ ಪದಾರ್ಥವೆಂದು ಘೋಷಿಸಬಹುದು;

(ಕೆ) "ಆಹಾರ ಸಂಯೋಜಕ" ಎಂದರೆ, ಯಾವುದೇ ವಸ್ತು ತಾನೇ ಸಾಮಾನ್ಯವಾಗಿ ಸ್ವತಃ ಆಹಾರವನ್ನಾಗಿ ಸೇವಿಸದಂಥ ಅಥವಾ ಆಹಾರವನ್ನು ತಯಾರಿಸುವ, ಸಂಸ್ಕರಿಸುವ, ಸಿದ್ಧಪಡಿಸುವ, ಕೆಡದಂತೆ ಇಡುವ, ಅದರ ಪ್ಯಾಕಿಂಗ್, ಪ್ಯಾಕೇಜಿಂಗ್, ಸಾಗಣೆ ಅಥವಾ ಅದನ್ನು ಇಟ್ಟುಕೊಳ್ಳುವ ಕಾರ್ಯದಲ್ಲಿ ತಾಂತ್ರಿಕ (ಇಂದ್ರಿಯ ಪರಿಣಾಮಿ) ಉದ್ದೇಶಕ್ಕಾಗಿ, ಆಹಾರಕ್ಕೆ ಉದ್ದೇಶಪೂರ್ವಕವಾಗಿ ಸೇರಿಸುವುದರಿಂದ ಅಂಥ ಆಹಾರದಲ್ಲಿ ಅಥವಾ ಅದು ಆಹಾರದ ಒಂದು ಘಟಕಾಂಶವಾಗುವ ಮೂಲಕ (ನೇರವಾಗಿ ಅಥವಾ ಪರೋಕ್ಷವಾಗಿ) ಪರಿಣಾಮ ಉಂಟು ಮಾಡುವಂಥ ಅಥವಾ ಪರಿಣಾಮ ಉಂಟು ಮಾಡುತ್ತದೆಂದು ನಿರೀಕ್ಷಿಸಬಹುದಾದ ಅಥವಾ ಅಂಥ ಆಹಾರದ ಗುಣಲಕ್ಷಣಗಳಿಗೆ ಅನ್ಯಥಾ ಬಾಧಕವುಂಟು ಮಾಡುವಂಥ, ಪೌಷ್ಟಿಕ ಮೌಲ್ಯವನ್ನು ಹೊಂದಿರುವ ಅಥವಾ ಹೊಂದಿರದ, ಆಹಾರದ ವಿಶಿಷ್ಟ ಘಟಕಾಂಶವಾಗಿ ಬಳಸದಂಥ ಯಾವುದೇ ವಸ್ತು. ಆದರೆ "ಮಾಲಿನ್ಯಕಾರಕಗಳು" ಅಥವಾ ಪೌಷ್ಟಿಕ ಗುಣಮಟ್ಟಗಳನ್ನು ಕಾಪಾಡಿಕೊಂಡು ಬರುವ ಅಥವಾ ಉತ್ತಮಪಡಿಸುವ ಸಲುವಾಗಿ ಆಹಾರಕ್ಕೆ ಸೇರಿಸಿದ ವಸ್ತುಗಳು ಇದರಲ್ಲಿ ಸೇರುವುದಿಲ್ಲ;

(ಎಲ್) "ಆಹಾರ ವಿಶ್ಲೇಷಕ" ಎಂದರೆ, ಪ್ರಕರಣ 45ರ ಮೇರೆಗೆ ನೇಮಕಗೊಂಡ ವಿಶ್ಲೇಷಕ;

(ಎಂ) "ಆಹಾರ ಪ್ರಾಧಿಕಾರ" ಎಂದರೆ, ಪ್ರಕರಣ 4ರ ಮೇರೆಗೆ ಸ್ಥಾಪಿಸಿದ ಭಾರತ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ;

(ಎನ್) "ಆಹಾರ ವ್ಯವಹಾರ" ಎಂದರೆ, ಆಹಾರದ ತಯಾರಿಕೆಯ, ಸಂಸ್ಕರಣೆಯ, ಪ್ಯಾಕೇಜಿಂಗ್‌ನ, ದಾಸ್ತಾನಿನ, ಸಾಗಣೆಯ, ವಿತರಣೆಯ, ಆಮದಿನ ಯಾವುದೇ ಹಂತಕ್ಕೆ ಸಂಬಂಧಿಸಿದ ಯಾವುವೇ ಕಾರ್ಯಚಟುವಟಿಕೆಗಳನ್ನು ಲಾಭಕ್ಕಾಗಿಯಾಗಲಿ ಅಥವಾ ಅಲ್ಲದಿರಲಿ ನಡೆಸುವ ಮತ್ತು ಸಾರ್ವಜನಿಕವಾದುದಾಗಿರುವ ಅಥವಾ ಖಾಸಗಿಯಾದುದಾಗಿರುವ, ಯಾವುದೇ ಉದ್ಯಮ, ಮತ್ತು ಇದರಲ್ಲಿ ಆಹಾರ ಸೇವೆಗಳು, ಕೇಟರಿಂಗ್ ಸೇವೆಗಳು, ಆಹಾರದ ಅಥವಾ ಆಹಾರ ಘಟಕಾಂಶಗಳ ಮಾರಾಟವೂ ಸೇರುತ್ತದೆ;

(ಒ) ಆಹಾರ ವ್ಯವಹಾರದ ಸಂಬಂಧದಲ್ಲಿ "ಆಹಾರ ವ್ಯವಹಾರ ನಿರ್ವಾಹಕ" ಎಂದರೆ, ವ್ಯವಹಾರವನ್ನು ನಡೆಸುವ, ಅಥವಾ ಒಡೆತನವನ್ನು ಹೊಂದಿರುವ ಮತ್ತು ಈ ಅಧಿನಿಯಮದ ಹಾಗೂ ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಅನುಪಾಲನೆಯನ್ನು ಸುನಿಶ್ಚಿತಗೊಳಿಸುವುದಕ್ಕೆ ಜವಾಬ್ದಾರನಾಗಿರುವ ವ್ಯಕ್ತಿ;

(ಪಿ) "ಆಹಾರ ಪ್ರಯೋಗಾಲಯ" ಎಂದರೆ, ಕೇಂದ್ರ ಅಥವಾ ರಾಜ್ಯ ಸರ್ಕಾರವು ಅಥವಾ ಇತರ ಯಾವುದೇ ಏಜೆನ್ಸಿಯು ಸ್ಥಾಪಿಸಿದ ಮತ್ತು ಪರೀಕ್ಷಾ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳಿಗೆ ಮಾನ್ಯತೆ ನೀಡಿಕೆ ರಾಷ್ಟ್ರೀಯ ಮಂಡಳಿಯಿಂದ ಅಥವಾ ಸಮಾನ ಮಾನ್ಯತೆ ನೀಡಿಕೆ ಏಜೆನ್ಸಿಯಿಂದ ಮಾನ್ಯತೆ ಪಡೆದ ಮತ್ತು ಪ್ರಕರಣ 43ರ ಮೇರೆಗೆ ಆಹಾರ ಪ್ರಾಧಿಕಾರದಿಂದ ಮನ್ನಣೆ ಪಡೆದ ಯಾವುದೇ ಆಹಾರ ಪ್ರಯೋಗಾಲಯ ಅಥವಾ ಸಂಸ್ಥೆ;

(ಕ್ಯೂ) "ಆಹಾರ ಸುರಕ್ಷತೆ" ಎಂದರೆ, ಆಹಾರವು, ಅದರ ಉದ್ದೇಶಿತ ಬಳಕೆಗೆ ಅನುಸಾರವಾಗಿ ಮಾನವ ಬಳಕೆಗೆ ಸ್ವೀಕಾರಯೋಗ್ಯವಾಗಿದೆ ಎಂಬ ಭರವಸೆ;

(ಆರ್) "ಆಹಾರ ಸುರಕ್ಷತಾ ಪರಿಶೋಧನೆ" ಎಂದರೆ, ತಯಾರಿಕಾ ಘಟಕಗಳು ಅಳವಡಿಸಿಕೊಂಡಿರುವ ಆಹಾರ ಸುರಕ್ಷತಾ ಕ್ರಮಗಳು ಮತ್ತು ತತ್ಸಂಬಂಧೀ ಪರಿಣಾಮಗಳು ಆಹಾರ ಸುರಕ್ಷತೆಯ ಮತ್ತು ಆ ಬಗ್ಗೆ ಮಾಡಲಾದ ಕ್ಲೇಮುಗಳ ಉದ್ದೇಶಗಳನ್ನು ನೆರವೇರಿಸುತ್ತವೆಯೇ ಎಂಬುದನ್ನು ನಿರ್ಧರಿಸುವ ಸಲುವಾಗಿ ಅಂಥ ಆಹಾರ ಸುರಕ್ಷತಾ ಕ್ರಮಗಳ ಕುರಿತು ವ್ಯವಸ್ಥಿತವಾಗಿ ಮತ್ತು ಕಾರ್ಯತಃ ಸ್ವತಂತ್ರವಾಗಿ ನಡೆಸುವ ಪರೀಕ್ಷೆ;

(ಎಸ್) "ಆಹಾರ ಸುರಕ್ಷತೆ ನಿರ್ವಹಣಾ ಪದ್ಧತಿ" ಎಂದರೆ, ಆಹಾರ ವ್ಯವಹಾರಕ್ಕಾಗಿ, ವಿನಿಯಮದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಉತ್ತಮ ತಯಾರಕಾ ಪದ್ಧತಿಗಳನ್ನು, ಉತ್ತಮ ಆರೋಗ್ಯಕರ ಪದ್ಧತಿಗಳನ್ನು, ಅಪಾಯ ವಿಶ್ಲೇಷಣೆಯನ್ನು ಮತ್ತು ವಿಷಮ ಪರಿಸ್ಥಿತಿಗಳ ನಿಯಂತ್ರಣ ಪದ್ಧತಿಯನ್ನು ಮತ್ತು ಅಂಥ ಇತರ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು;

(ಟಿ) "ಆಹಾರ ಸುರಕ್ಷತಾ ಅಧಿಕಾರಿ" ಎಂದರೆ, ಪ್ರಕರಣ 37ರ ಮೇರೆಗೆ ನೇಮಕಗೊಂಡ ಅಧಿಕಾರಿ;

(ಯು) "ಹಾನಿಕರ" ಎಂದರೆ, ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಸಾಮರ್ಥ್ಯ ಹೊಂದಿರುವ ಆಹಾರದಲ್ಲಿನ ಅಥವಾ ಆಹಾರ ಸ್ಥಿತಿಯಲ್ಲಿನ ಜೈವಿಕ, ರಾಸಾಯನಿಕ ಅಥವಾ ಭೌತಿಕ ವಸ್ತು;

(ವಿ) "ಆಮದು" ಎಂದರೆ, ಯಾವುದೇ ಆಹಾರ ಪದಾರ್ಥವನ್ನು ಭೂ, ಜಲ ಅಥವಾ ವಾಯು ಮಾರ್ಗದ ಮೂಲಕ ಭಾರತಕ್ಕೆ ತರುವುದು;

(ಡಬ್ಲ್ಯೂ) "ಸುಧಾರಣೆಗಾಗಿ ನೋಟೀಸು" ಎಂದರೆ, ಈ ಅಧಿನಿಯಮದ ಪ್ರಕರಣ 32ರ ಮೇರೆಗೆ ನೀಡಿದ ನೋಟೀಸು;

(ಎಕ್ಸ್) "ಶಿಶು ಆಹಾರ" ಮತ್ತು "ಶಿಶು ಹಾಲಿನ ಬದಲಿ ಉತ್ಪನ್ನಗಳು" ಪದಾವಳಿಗಳು ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಗಳ (ಉತ್ಪಾದನೆ, ಸರಬರಾಜು ಮತ್ತು

ವಿನಿಯಮ, ನಿಯಂತ್ರಣ) ಅಧಿನಿಯಮ, 1992 (1992ರ 41)ರ ಪ್ರಕರಣ 2ರ ಉಪಪ್ರಕರಣ (1)ರ (ಎಫ್) ಮತ್ತು (ಜಿ) ಖಂಡಗಳಲ್ಲಿ ಅನುಕ್ರಮವಾಗಿ ಅವುಗಳಿಗೆ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು;

(ವೈ) "ಘಟಕಾಂಶ" ಎಂದರೆ, ಆಹಾರದ ತಯಾರಿಕೆಯಲ್ಲಿ ಅಥವಾ ಸಿದ್ಧತೆಯಲ್ಲಿ ಬಳಸುವ ಮತ್ತು ಅಂತಿಮ ಉತ್ಪನ್ನದಲ್ಲಿ ಪ್ರಾಯಶಃ ಮಾರ್ಪಾಟಾದ ರೂಪದಲ್ಲಿ ಇರುವ ಆಹಾರ ಸಂಯೋಜಕ ಪದಾರ್ಥವು ಒಳಗೊಂಡಂತೆ ಯಾವುದೇ ವಸ್ತು;

(ಝಡ್) "ಲೇಬಲ್" ಎಂದರೆ, ಯಾವುದೇ ಆಹಾರ ಪ್ಯಾಕೇಜಿನ ಧಾರಕದ, ಹೊದಿಕೆಯ, ಮುಚ್ಚಳದ ಅಥವಾ ಅಗ್ರಭಾಗದ ಮೇಲೆ ಬರೆದಿರುವ, ಮುದ್ರಿಸಿರುವ, ಸ್ಟೆನ್ಸಿಲ್ ಮಾಡಿರುವ, ಗುರುತು ಹಾಕಿರುವ, ಉಬ್ಬಚ್ಚು ಮಾಡಿರುವ, ಗ್ರಾಫ್ ಮಾಡಿರುವ, ರಂದ್ರ ಕೊರೆದಿರುವ, ಮುದ್ರೆ ಹಾಕಿರುವ ಅಥವಾ ಮೊಹರು ಹಾಕಿರುವ ಅಥವಾ ಅದಕ್ಕೆ ಲಗತ್ತಿಸಿರುವ ಯಾವುದೇ ಟ್ಯಾಗು, ವ್ಯಾಪಾರ ಚಿಹ್ನೆ, ಗುರುತು, ಚಿತ್ರರೂಪದ ಅಥವಾ ಇತರ ಬಗೆಯ ವಿಷಯ ಮತ್ತು ಸೇರ್ಪಡೆಗೊಂಡಿರುವ ಉತ್ಪನ್ನವು ಒಳಗೊಳ್ಳುತ್ತದೆ;

(ಝಡ್ಎ) "ಲೈಸೆನ್ಸ್" ಎಂದರೆ, ಪ್ರಕರಣ 31ರ ಮೇರೆಗೆ ಮಂಜೂರು ಮಾಡಿದ ಲೈಸೆನ್ಸ್;

(ಝಡ್ಬಿ) "ಸ್ಥಳೀಯ ಪ್ರದೇಶ" ಎಂದರೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಆಹಾರ ಸುರಕ್ಷತಾ ಆಯುಕ್ತನು, ಸ್ಥಳೀಯ ಪ್ರದೇಶವೆಂದು ಅದು ನಗರ ಪ್ರದೇಶವಾಗಿರಲಿ ಅಥವಾ ಗ್ರಾಮೀಣ ಪ್ರದೇಶವಾಗಿರಲಿ, ಅಧಿಸೂಚಿಸಿದ ಯಾವುದೇ ಪ್ರದೇಶ;

(ಝಡ್ಸಿ) "ತಯಾರಿಕೆ" ಎಂದರೆ, ಘಟಕಾಂಶಗಳನ್ನು ಆಹಾರ ಪದಾರ್ಥವನ್ನಾಗಿ ಪರಿವರ್ತಿಸುವುದಕ್ಕಾಗಿನ ಪ್ರಕ್ರಿಯೆ ಅಥವಾ ಪರಿವರ್ತನಾ ಕ್ರಿಯೆ ಅಥವಾ ಯಾವುದೇ ಸಂಸ್ಕರಣೆ, ಇದರಲ್ಲಿ ಆಹಾರ ಪದಾರ್ಥದ ತಯಾರಿಕೆಗೆ ಪ್ರಾಸಂಗಿಕವಾದ ಅಥವಾ ಸಹಾಯಕವಾದ ಯಾವುದೇ ಒಳ ಪ್ರಕ್ರಿಯೆಯೂ ಸೇರುತ್ತದೆ;

(ಝಡ್ಡಿ) "ತಯಾರಕ" ಎಂದರೆ, ಮಾರಾಟ ಮಾಡುವುದಕ್ಕಾಗಿ ಯಾವುದೇ ಆಹಾರ ಪದಾರ್ಥವನ್ನು ತಯಾರಿಸುವ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿ ಮತ್ತು ಇದರಲ್ಲಿ ಬೇರೆ ವ್ಯಕ್ತಿಯಿಂದ ಅಂಥ ಪದಾರ್ಥವನ್ನು ಪಡೆದು ಮಾರಾಟ ಮಾಡುವುದಕ್ಕಾಗಿ ಅದನ್ನು ಪ್ಯಾಕ್ ಮಾಡುವ ಮತ್ತು ಅದಕ್ಕೆ ಲೇಬಲ್ ಹಚ್ಚುವ ಅಥವಾ ಅಂಥ ಉದ್ದೇಶಗಳಿಗಾಗಿ, ಅದಕ್ಕೆ ಲೇಬಲನ್ನು ಮಾತ್ರವೇ ಹಚ್ಚುವ ಯಾರೇ ವ್ಯಕ್ತಿಯೂ ಸೇರುತ್ತಾನೆ;

(ಝಡ್ಇ) "ಸದಸ್ಯ" ಎಂಬುದರಲ್ಲಿ, ಆಹಾರ ಪ್ರಾಧಿಕಾರದ ಅರೆಕಾಲಿಕ ಸದಸ್ಯನು ಹಾಗೂ ಅದರ ಅಧ್ಯಕ್ಷನು ಒಳಗೊಳ್ಳುತ್ತಾನೆ;

(ಝಡ್ಎಫ್) "ತಪ್ಪು ಮುದ್ರೆ ಹಾಕಿರುವ ಆಹಾರ" ಎಂದರೆ, ಆಹಾರ ಪದಾರ್ಥವು,–

(ಎ) ಆಹಾರ ಪದಾರ್ಥವನ್ನು,–

(i) (ಎ) ಪ್ಯಾಕೇಜಿನ ಲೇಬಲ್ ಮೇಲಾಗಲಿ; ಅಥವಾ

(ಬಿ) ಜಾಹೀರಾತು ಮೂಲಕವಾಗಲಿ

– ಸುಳ್ಳಾದ, ತಪ್ಪುದಾರಿಗೆಳೆಯುವ, ಅಥವಾ ಮೋಸದ ಕ್ಲೇಮುಗಳೊಂದಿಗೆ ಮಾರಾಟಕ್ಕೆ ಇಡಲಾಗಿದೆ ಅಥವಾ ಪ್ರಚುರಪಡಿಸಲಾಗಿದೆ ಎಂದು; ಅಥವಾ

(ii) ಬೇರೊಂದು ಆಹಾರ ಪದಾರ್ಥದ ಹೆಸರಿನಿಂದ ಮಾರಾಟ ಮಾಡಲಾಗಿದೆ ಎಂದು; ಅಥವಾ

(iii) ಆಹಾರ ಪದಾರ್ಥವನ್ನು ಒಳಗೊಂಡಿರುವ ಪ್ಯಾಕೇಜಿನ ಮೇಲೆ ಅಥವಾ ಅಂಥ ಪ್ಯಾಕೇಜಿನ ಮೇಲಿರುವ ಲೇಬಲಿನ ಮೇಲೆ ಇರುವಂತೆ ಖೋಟಾ ವ್ಯಕ್ತಿಯನ್ನು ಅಥವಾ ಕಂಪನಿಯನ್ನು ಆಹಾರ ಪದಾರ್ಥದ ತಯಾರಕ ಅಥವಾ ಉತ್ಪಾದಕ ಎಂಬಂತೆ ತೋರಿಸಿ ಆ ಹೆಸರಿನಲ್ಲಿ ಅದನ್ನು ಮಾರಾಟಕ್ಕೆ ಇಡಲಾಗಿದೆ ಅಥವಾ ಪ್ರಚುರಪಡಿಸಲಾಗಿದೆ ಎಂದು

– ತಾತ್ಪರ್ಯವಾಗುವಂತಿದ್ದರೆ ಅಥವಾ ಕಂಡುಬರುತ್ತಿದ್ದರೆ ಅಥವಾ ಹಾಗೆ ಮಾರಾಟಕ್ಕೆ ಇಡಲಾಗುತ್ತಿದ್ದರೆ ಅಥವಾ ಪ್ರಚುರಪಡಿಸುತ್ತಿದ್ದರೆ: ಅಥವಾ

(ಬಿ) ತಯಾರಕನು ಅಥವಾ ಉತ್ಪಾದಕನು ಅಥವಾ ಅವನ ಸೂಚನೆಯಂತೆ ಮೊಹರು ಮಾಡಿದ ಅಥವಾ ಸಿದ್ಧಪಡಿಸಿದ, ಅವನ ಹೆಸರು ಮತ್ತು ವಿಳಾಸ ಹೊಂದಿರುವ ಪ್ಯಾಕೇಜುಗಳಲ್ಲಿ ಪದಾರ್ಥವನ್ನು ಮಾರಾಟ ಮಾಡಿದ್ದರೆ, ಆದರೆ,–

(i) ಪದಾರ್ಥವು, ಅದನ್ನು ಯಾವ ಮತ್ತೊಂದು ಆಹಾರ ಪದಾರ್ಥದ ಹೆಸರಿನಲ್ಲಿ ಮಾರಾಟ ಮಾಡಲಾಯಿತೋ ಆ ಪದಾರ್ಥದ ಅನುಕರಣೆಯಾಗಿದ್ದರೆ ಅಥವಾ ಅದಕ್ಕೆ ಬದಲಿಯಾದ್ದಾಗಿದ್ದರೆ ಅಥವಾ ವಂಚಿಸಬಹುದಾದ ರೀತಿಯಲ್ಲಿ ಅದನ್ನು ಹೋಲುತ್ತಿದ್ದರೆ ಮತ್ತು ಅದರ ನಿಜವಾದ ಗುಣವನ್ನು ಸೂಚಿಸುವ ಹಾಗೆ ಅದರ ಮೇಲೆ ಸ್ಫುಟವಾಗಿ ಮತ್ತು ಎದ್ದು ಕಾಣುವಂತೆ ಲೇಬಲ್ ಹಾಕಿರದಿದ್ದರೆ; ಅಥವಾ

(ii) ಪದಾರ್ಥವನ್ನು ಒಳಗೊಂಡ ಪ್ಯಾಕೇಜು ಅಥವಾ ಪ್ಯಾಕೇಜ್ ಮೇಲಿನ ಲೇಬಲ್ ಆ ಪ್ಯಾಕೇಜಿನಲ್ಲಿ ಒಳಗೊಂಡಿರುವ ಘಟಕಾಂಶಗಳಿಗೆ ಅಥವಾ ವಸ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಮುಖ್ಯ ವಿಷಯದಲ್ಲಿ ಸುಳ್ಳು ಅಥವಾ ತಪ್ಪುದಾರಿಗೆಳೆಯುವಂಥ ಯಾವುದೇ ನಿರೂಪಣೆಯನ್ನು, ರೇಖಾಕೃತಿಯನ್ನು ಅಥವಾ ಸೂಕ್ತಿಯನ್ನು ಹೊಂದಿದ್ದರೆ ಅಥವಾ ಪ್ಯಾಕೇಜು ಅದರ ಒಳಾಂಶಗಳಿಗೆ ಸಂಬಂಧಪಟ್ಟಂತೆ ಬೇರೆ ರೀತಿಯಲ್ಲಿ ವಂಚಿಸುವಂಥದದ್ದಾಗಿದ್ದರೆ; ಅಥವಾ

(iii) ಪದಾರ್ಥವನ್ನು ಸುಳ್ಳಾಗಿರುವ ಯಾವುದೇ ಸ್ಥಳದ ಅಥವಾ ದೇಶದ ಉತ್ಪನ್ನವೆಂಬಂತೆ ಬಿಂಬಿಸಿ, ಮಾರಾಟಕ್ಕೆ ಇಟ್ಟಿದ್ದರೆ; ಅಥವಾ

(ಸಿ) ಪ್ಯಾಕೇಜಿನಲ್ಲಿ ಒಳಗೊಂಡಿರುವ ಪದಾರ್ಥವು,–

(i) ಯಾವುದೇ ಕೃತಕ ರುಚಿಯನ್ನು, ಬಣ್ಣವನ್ನು ಅಥವಾ ರಾಸಾಯನಿಕ ರಕ್ಷಕದ್ರವ್ಯವನ್ನು ಒಳಗೊಂಡಿದ್ದರೆ ಮತ್ತು ಪ್ಯಾಕೇಜ್ ಮೇಲೆ ಆ ಸಂಗತಿಯನ್ನು ತಿಳಿಸುವ ಘೋಷಣಾತ್ಮಕ ಲೇಬಲ್ ಇಲ್ಲದಿದ್ದರೆ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ವಿನಿಯಮಗಳ ಅಗತ್ಯತೆಗಳಿಗೆ ಅನುಸಾರವಾಗಿ ಲೇಬಲ್‌ನ್ನು ಹಚ್ಚಿರದಿದ್ದರೆ ಅಥವಾ ಅವುಗಳನ್ನು ಉಲ್ಲಂಘಿಸಿದ್ದರೆ; ಅಥವಾ

(ii) ವಿಶೇಷ ಪಥ್ಯಾಹಾರದ ಬಳಕೆಗಾಗಿ ಅದರ ಮೌಲ್ಯಕ್ಕೆ ಸಂಬಂಧಿಸಿದಂತೆ, ಅದರ ಖರೀದಿದಾರನಿಗೆ ಸಾಕಷ್ಟು ಮಾಹಿತಿಯನ್ನು ತಿಳಿಸುವ ಸಲುವಾಗಿ ಅದರಲ್ಲಿನ ಜೀವಸತ್ವಗಳಿಗೆ, ಖನಿಜಗಳಿಗೆ ಅಥವಾ ಇತರ ಪಥ್ಯಾಹಾರದ ಅಂಶಗಳಿಗೆ ಸಂಬಂಧಿಸಿದಂತೆ, ವಿನಿಯಮದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಮಾಹಿತಿಯನ್ನು ಅದರ ಲೇಬಲ್ ಹೊಂದಿದ್ದ ಹೊರತು ಅಂಥ ವಿಶೇಷ ಪಥ್ಯಾಹಾರದ ಬಳಕೆಗಳಿಗಾಗಿ ಅದನ್ನು ಮಾರಾಟಕ್ಕಿಟ್ಟಿದ್ದರೆ; ಅಥವಾ

(iii) ಈ ಅಧಿನಿಯಮದ ಮೇರೆಗೆ ವಿಧಿಸಿರುವ ವ್ಯತ್ಯಾಸದ ಮಿತಿಗಳೊಳಗೆ ಆ ಪ್ಯಾಕೇಜಿನ ಹೊರಭಾಗದಲ್ಲಿ ಎದ್ದು ಕಾಣುವಂತೆ ಅಥವಾ ಸರಿಯಾಗಿ ಹೇಳಿರದಿದ್ದರೆ

– ಅಂಥ ಆಹಾರ ಪದಾರ್ಥ;

(ಝಡ್‌ಜಿ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಝಡ್‌ಹೆಚ್) "ಪ್ಯಾಕೇಜ್" ಎಂದರೆ, ಆಹಾರ ಪದಾರ್ಥವನ್ನು ಯಾವುದರಲ್ಲಿ ಪ್ಯಾಕ್ ಮಾಡಲಾಗಿದೆಯೋ ಆ ಪ್ಯಾಕ್ ಮಾಡುವ ಮುಂಚಿನ ಪೆಟ್ಟಿಗೆ, ಬಾಟಲ್, ಸಣ್ಣ ಪೆಟ್ಟಿಗೆ, ಟಿನ್, ಬ್ಯಾರೆಲ್, ಸಣ್ಣ ಚೀಲ, ಕೋಶ, ಗೋಣಿಚೀಲ, ಕೈಚೀಲ, ಹೊದಿಕೆ ಅಥವಾ ಅಂಥ ಇತರ ವಸ್ತುಗಳು;

(ಝಡ್‌ಐ) "ಆವರಣ" ಎಂಬುದರಲ್ಲಿ ಯಾವುದೇ ಆಹಾರ ಪದಾರ್ಥವನ್ನು ಎಲ್ಲಿ ಮಾರಾಟ ಮಾಡಲಾಗುತ್ತಿದೆಯೋ ಅಥವಾ ಮಾರಾಟ ಮಾಡುವುದಕ್ಕಾಗಿ ತಯಾರಿಸಲಾಗುತ್ತಿದೆಯೋ ಅಥವಾ ಸಂಗ್ರಹಿಸಿಡಲಾಗಿದೆಯೋ ಆ ಯಾವುದೇ ಅಂಗಡಿ, ಮಳಿಗೆ, ಹೋಟೆಲ್, ರೆಸ್ಟೋರೆಂಟ್, ವಾಯುಯಾನ ಸೇವೆಗಳು ಮತ್ತು ಆಹಾರ ಕ್ಯಾಂಟೀನ್ ಸ್ಥಳಗಳು ಅಥವಾ ವಾಹನ ಅಥವಾ ನೌಕೆಯೂ ಒಳಗೊಳ್ಳುತ್ತವೆ;

(ಝಡ್‌ಜೆ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ಸಂದರ್ಭಾನುಸಾರ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಝಡ್‌ಕೆ) "ಮೂಲ ಆಹಾರ" ಎಂದರೆ, ರೈತ ಅಥವಾ ಮೀನುಗಾರರನ್ನು ಹೊರತುಪಡಿಸಿ, ಒಬ್ಬ ವ್ಯಕ್ತಿಯು ಸ್ವತಃ ಬೆಳೆಯುವ, ಬೆಳೆ ತೆಗೆಯುವ, ಸಾಗುವಳಿ ಮಾಡುವ, ಕೀಳುವ, ಕೊಯ್ಲು ಮಾಡುವ, ಸಂಗ್ರಹಿಸುವ ಅಥವಾ ಹಿಡಿಯುವ ಪರಿಣಾಮವಾಗಿ, ಅದರ ಸ್ವಾಭಾವಿಕ ರೂಪದಲ್ಲಿರುವ, ಕೃಷಿಯ ಅಥವಾ ತೋಟಗಾರಿಕೆಯ ಅಥವಾ ಪಶುಸಂಗೋಪನೆಯ ಮತ್ತು ಹೈನುಗಾರಿಕೆಯ ಅಥವಾ ಮತ್ಸ್ಯಕೃಷಿಯ ಉತ್ಪನ್ನವಾಗಿರುವ ಆಹಾರ ಪದಾರ್ಥ;

(ಝಡ್‌ಎಲ್) "ನಿಷೇಧಾಜ್ಞೆ" ಎಂದರೆ, ಈ ಅಧಿನಿಯಮದ ಪ್ರಕರಣ 33ರ ಮೇರೆಗೆ ಹೊರಡಿಸಿದ ಆದೇಶ;

(ಝಡ್‌ಎಂ) ಯಾವುದೇ ಆಹಾರ ಪದಾರ್ಥದ ಸಂಬಂಧದಲ್ಲಿ "ಅಪಾಯ" ಎಂದರೆ, ಅಂಥ ಆಹಾರವನ್ನು ಸೇವಿಸಿದ ವ್ಯಕ್ತಿಗಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವುಂಟಾಗುವ ಸಾಧ್ಯತೆ ಮತ್ತು ಆಹಾರದ ಹಾನಿಯ ಪರಿಣಾಮವಾಗಿ ಉಂಟಾಗಿರುವ ಆ ಪ್ರತಿಕೂಲ ಪರಿಣಾಮದ ತೀವ್ರತೆ;

(ಝಡ್ಎನ್) ಯಾವುದೇ ಆಹಾರ ಪದಾರ್ಥದ ಸಂಬಂಧದಲ್ಲಿ "ಅಪಾಯ ವಿಶ್ಲೇಷಣೆ" ಎಂದರೆ, ಅಪಾಯ ನಿರ್ಧರಣೆ, ಅಪಾಯ ನಿರ್ವಹಣೆ ಮತ್ತು ಅಪಾಯ ಸಂವಹನ, ಈ ಮೂರು ಅಂಶಗಳನ್ನು ಒಳಗೊಂಡಿರುವ ಪ್ರಕ್ರಿಯೆ;

(ಝಡ್ಓ) "ಅಪಾಯ ನಿರ್ಧರಣೆ" ಎಂದರೆ, ಈ ಮುಂದಿನ ಹಂತಗಳನ್ನು ಎಂದರೆ, (i) ಹಾನಿಯನ್ನು ಗುರುತಿಸುವುದು (ii) ಹಾನಿಯ ಸ್ವರೂಪವನ್ನು ವಿವರಿಸುವುದು (iii) ಅಪಾಯಕ್ಕೀಡಾಗುವುದರ ನಿರ್ಧರಣೆ (iv) ಅಪಾಯದ ಸ್ವರೂಪವನ್ನು ವಿವರಿಸುವುದು– ಈ ಹಂತಗಳನ್ನು ಒಳಗೊಂಡಿರುವ ವೈಜ್ಞಾನಿಕ ಆಧಾರಿತ ಪ್ರಕ್ರಿಯೆ;

(ಝಡ್ಪಿ) "ಅಪಾಯದ ಸಂವಹನ" ಎಂದರೆ, ಅಪಾಯವನ್ನು ನಿರ್ಧರಣೆ ಮಾಡುವಾಗ ತೆಗೆದುಕೊಂಡ ನಿರ್ಣಯಗಳ ಕುರಿತ ವಿವರಣೆಯು ಮತ್ತು ಅಪಾಯವನ್ನು ನಿರ್ವಹಣೆ ಮಾಡುವಾಗ ತೆಗೆದುಕೊಂಡ ತೀರ್ಮಾನಗಳಿಗೆ ಆಧಾರವು ಒಳಗೊಂಡಂತೆ ಅಪಾಯ ನಿರ್ಧಾರಕರ, ಅಪಾಯ ನಿರ್ವಾಹಕರ, ಬಳಕೆದಾರರ, ಕೈಗಾರಿಕೆಯ, ಪರಿಣತ ಸಮುದಾಯದ ಮತ್ತು ಇತರ ಆಸಕ್ತ ಪಕ್ಷಕಾರರ ನಡುವೆ, ಅಪಾಯಕ್ಕೆ ಅಪಾಯ ಸಂಬಂಧಿ ಅಂಶಗಳಿಗೆ ಮತ್ತು ಅಪಾಯ ಗ್ರಹಿಕೆಗಳಿಗೆ ಸಂಬಂಧಿಸಿದಂತೆ ಅಪಾಯ ವಿಶ್ಲೇಷಣಾ ಪ್ರಕ್ರಿಯೆಯಾದ್ಯಂತ ಮಾಹಿತಿಯ ಮತ್ತು ಅಭಿಪ್ರಾಯಗಳ ಪರಸ್ಪರ ವಿನಿಮಯ;

(ಝಡ್ಕ್ಯೂ) "ಅಪಾಯ ನಿರ್ವಹಣೆ" ಎಂದರೆ, ಅಪಾಯ ನಿರ್ಧರಣೆ ಮತ್ತು ಬಳಕೆದಾರರ ಆರೋಗ್ಯದ ರಕ್ಷಣೆಗೆ ಮತ್ತು ನ್ಯಾಯೋಚಿತವಾದ ವ್ಯಾಪಾರ ಪದ್ಧತಿಗಳಿಗೆ ಉತ್ತೇಜನ ನೀಡುವುದಕ್ಕೆ ಸುಸಂಗತವಾದ ಇತರ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಎಲ್ಲಾ ಆಸಕ್ತ ಪಕ್ಷಕಾರರೊಂದಿಗೆ ಸಮಾಲೋಚಿಸಿ ಮತ್ತು ಅಗತ್ಯವಿದ್ದರೆ, ಸಮುಚಿತವಾದ ನಿವಾರಣಾ ಮತ್ತು ನಿಯಂತ್ರಣ ಕ್ರಮಗಳನ್ನು ಆಯ್ಕೆಗಳನ್ನು ಆಯ್ದುಕೊಂಡು, ಅಪಾಯ ನಿರ್ಧರಣೆಗೆ ಭಿನ್ನವಾದ ಕಾರ್ಯನೀತಿ ಪರ್ಯಾಯಗಳ ಮೌಲ್ಯ ನಿರ್ಧರಣೆ ಪ್ರಕ್ರಿಯೆ;

(ಝಡ್ಆರ್) ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ "ಮಾರಾಟ" ಎಂದರೆ, ಮಾನವ ಬಳಕೆಗಾಗಿ ಅಥವಾ ಉಪಯೋಗಕ್ಕಾಗಿ ಅಥವಾ ವಿಶ್ಲೇಷಣೆಗಾಗಿ ಯಾವುದೇ ಆಹಾರ ಪದಾರ್ಥವನ್ನು ನಗದು ಸಂದಾಯದ ಮೇಲಾಗಲಿ ಅಥವಾ ಸಾಲದ ಮೇಲಾಗಲಿ ಅಥವಾ ವಿನಿಮಯದ ಮೂಲಕವಾಗಲಿ ಮತ್ತು ಸಗಟಾಗಿಯಾಗಲೀ ಅಥವಾ ಚಿಲ್ಲರೆಯಾಗಿಯಾಗಲೀ ಯಾವುದೇ ಆಹಾರ ಪದಾರ್ಥದ ಮಾರಾಟ ಮತ್ತು ಇದರಲ್ಲಿ ಅಂಥ ಯಾವುದೇ ಪದಾರ್ಥದ ಮಾರಾಟಕ್ಕಾಗಿ ಒಪ್ಪಂದ, ಅದನ್ನು ಮಾರಾಟಕ್ಕೆ ಇಡುವುದು, ಅದನ್ನು ಮಾರಾಟಕ್ಕಾಗಿ ಪ್ರದರ್ಶಿಸುವುದು ಅಥವಾ ಅದನ್ನು ಮಾರಾಟಕ್ಕಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವುದೂ ಒಳಗೊಳ್ಳುತ್ತದೆ ಮತ್ತು ಅಂಥ ಯಾವುದೇ ಪದಾರ್ಥವನ್ನು ಮಾರಾಟ ಮಾಡುವ ಪ್ರಯತ್ನವೂ ಸಹ ಒಳಗೊಳ್ಳುತ್ತದೆ;

(ಝಡ್ಎಸ್) "ಮಾದರಿ" ಎಂದರೆ, ಈ ಅಧಿನಿಯಮದ ಉಪಬಂಧಗಳ ಅಥವಾ ಅಧಿನಿಯಮದ ಮೇರೆಗೆ ರಚಿಸಿದ ಯಾವುವೇ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ತೆಗೆದುಕೊಂಡ ಯಾವುದೇ ಆಹಾರ ಪದಾರ್ಥದ ಮಾದರಿ;

(ಝಡ್ಟಿ) "ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಿದ" ಎಂದರೆ, ಆಹಾರ ಪ್ರಾಧಿಕಾರವು ರಚಿಸಿದ ವಿನಿಯಮಗಳಿಂದ ನಿರ್ದಿಷ್ಟಪಡಿಸಲಾದುದು;

(ಝಡ್‌ಯು) ಯಾವುದೇ ಆಹಾರ ಪದಾರ್ಥಕ್ಕೆ ಸಂಬಂಧಿಸಿದಂತೆ, "ಗುಣಮಟ್ಟ" ಎಂದರೆ, ಆಹಾರ ಪ್ರಾಧಿಕಾರವು ಅಧಿಸೂಚಿಸಿದ ಗುಣಮಟ್ಟಗಳು;

(ಝಡ್‌ವಿ) ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, "ರಾಜ್ಯ ಸರ್ಕಾರ" ಎಂದರೆ, ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯಿಂದ ನೇಮಕಗೊಂಡ ಆ ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತಗಾರ;

(ಝಡ್‌ಡಬ್ಲ್ಯೂ) "ಪದಾರ್ಥ"ವು, ಅದು ಘನರೂಪದಲ್ಲಿರಲಿ ಅಥವಾ ದ್ರವರೂಪದಲ್ಲಿರಲಿ ಅಥವಾ ಅನಿಲ ಅಥವಾ ಆವಿಯ ರೂಪದಲ್ಲಿರಲಿ ಯಾವುದೇ ಸ್ವಾಭಾವಿಕ ಅಥವಾ ಕೃತಕ ಪದಾರ್ಥ ಅಥವಾ ಇತರ ವಸ್ತುವನ್ನು ಒಳಗೊಳ್ಳುತ್ತದೆ;

(ಝಡ್‌ಎಕ್ಸ್) "ಕಳಪೆ ಗುಣಮಟ್ಟ" ಎಂದರೆ, ಒಂದು ಆಹಾರ ಪದಾರ್ಥವು ನಿರ್ದಿಷ್ಟಪಡಿಸಿದ ಗುಣಮಟ್ಟಗಳನ್ನು ಹೊಂದಿರದಿದ್ದರೆ, ಆದರೆ ಆ ಆಹಾರ ಪದಾರ್ಥವನ್ನು ಸುರಕ್ಷಿತವಲ್ಲದನ್ನಾಗಿ ಮಾಡದಿದ್ದರೂ, ಅದನ್ನು ಕಳಪೆ ಗುಣಮಟ್ಟದ ಆಹಾರ ಪದಾರ್ಥವೆಂದು ಭಾವಿಸತಕ್ಕದ್ದು;

(ಝಡ್‌ವೈ) "ನ್ಯಾಯಾಧಿಕರಣ" ಎಂದರೆ, ಪ್ರಕರಣ 70ರ ಮೇರೆಗೆ ಸ್ಥಾಪಿಸಿದ ಆಹಾರ ಸುರಕ್ಷತಾ ಅಪೀಲು ನ್ಯಾಯಾಧಿಕರಣ;

(ಝಡ್‌ಝಡ್) "ಸುರಕ್ಷಿತವಲ್ಲದ ಆಹಾರ" ಎಂದರೆ, –

(i) ಆಹಾರ ಪದಾರ್ಥದಲ್ಲಿ ಅಥವಾ ಅದರ ಪ್ಯಾಕೇಜಿನಲ್ಲಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ವಿಷಕಾರಕ ಅಥವಾ ಹಾನಿಕಾರಕ ಪದಾರ್ಥಗಳನ್ನು ಒಳಗೊಂಡಿರುವಂತೆ ಮಾಡುವ ಮೂಲಕ; ಅಥವಾ

(ii) ಪದಾರ್ಥವು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಯಾವುದೇ ಹೊಲಸಾದ, ಕೊಳೆತು ನಾರುವ, ಹುಳುತು ಹೋದ, ಕೊಳೆತ ಅಥವಾ ಮೃತ ಜೀವಿಗಳ ಘಟಕಾಂಶಗಳು ಅಥವಾ ತರಕಾರಿಯ ಘಟಕಾಂಶಗಳನ್ನು ಒಳಗೊಂಡಿರುವುದರಿಂದ; ಅಥವಾ

(iii) ಅದನ್ನು ಅನಾರೋಗ್ಯಕರ ರೀತಿಯಲ್ಲಿ ಸಂಸ್ಕರಿಸಿರುವ ಕಾರಣದ ಅಥವಾ ಆ ಪದಾರ್ಥದಲ್ಲಿ ಯಾವುದೇ ಹಾನಿಕಾರಕ ಪದಾರ್ಥವು ಇರುವುದರಿಂದ; ಅಥವಾ

(iv) ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಯಾವುದೇ ಕಳಪೆ ಅಥವಾ ಕೆಳದರ್ಜೆಯ ಪದಾರ್ಥವನ್ನು ಬದಲಿಗೆ ಸೇರಿಸಿರುವುದರಿಂದ; ಅಥವಾ

(v) ಅನುಮತಿಸದಿರುವ ಪದಾರ್ಥವನ್ನು ನೇರವಾಗಿ ಅಥವಾ ಘಟಕಾಂಶವನ್ನಾಗಿ ಸೇರಿಸಿರುವುದರಿಂದ; ಅಥವಾ

(vi) ಪೂರ್ಣವಾಗಿ ಅಥವಾ ಭಾಗಶಃ ಅದರ ಯಾವುವೇ ಘಟಕಾಂಶಗಳನ್ನು ಬೇರ್ಪಡಿಸಿರುವುದರಿಂದ; ಅಥವಾ

(vii) ಪದಾರ್ಥವನ್ನು ಹಾನಿಗೊಳಿಸುವ ಅಥವಾ ಅದರ ಸ್ವರೂಪವನ್ನು ಮರೆಮಾಚುವ ಅಥವಾ ಅದು ಚೆನ್ನಾಗಿ ಕಾಣುವಂತೆ ಮಾಡುವ ಅಥವಾ ಅದನ್ನು ವಾಸ್ತವವಾಗಿ ಅದು ಹೊಂದಿರುವ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯದ್ದನ್ನಾಗಿಸುವ ಹಾಗೆ ಆ ಪದಾರ್ಥಕ್ಕೆ ಬಣ್ಣ ಹಾಕುವ, ರುಚಿಕಾರಕಗಳನ್ನು ಸೇರಿಸುವ ಅಥವಾ ಲೇಪಿಸುವ, ಪುಡಿ ಬೆರೆಸುವ ಅಥವಾ ಪಾಲಿಷ್ ಮಾಡುವ ಮೂಲಕ; ಅಥವಾ

(viii) ಆಹಾರ ಪದಾರ್ಥದ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದುದನ್ನು ಹೊರತುಪಡಿಸಿ, ಯಾವುದೇ ಬಣ್ಣಕಾರಕ ಪದಾರ್ಥವು ಅಥವಾ ಸುರಕ್ಷಕಾರಿಗಳು ಇರುವುದರಿಂದ; ಅಥವಾ

(ix) ಪದಾರ್ಥಕ್ಕೆ ಕ್ರಿಮಿಗಳಿಂದ, ದವಸಧಾನ್ಯಗಳನ್ನು ತಿಂದು ಹಾಳು ಮಾಡುವ ಹುಳುಗಳಿಂದ ಅಥವಾ ಕೀಟಗಳಿಂದ ಸೋಂಕು ತಗುಲಿರುವುದರಿಂದ ಅಥವಾ ವ್ಯಾಪಿಸಿರುವುದರಿಂದ; ಅಥವಾ

(x) ಅನೈರ್ಮಲ್ಯ ಪರಿಸ್ಥಿತಿಗಳಲ್ಲಿ ತಯಾರಿಸುವುದರಿಂದ, ಪ್ಯಾಕ್ ಮಾಡಿರುವುದರಿಂದ ಅಥವಾ ಇಟ್ಟಿರುವುದರಿಂದ;

(xi) ಅದಕ್ಕೆ ತಪ್ಪು ಮುದ್ರೆ ಹಾಕಿರುವುದರಿಂದ ಅಥವಾ ಕಳಪೆ ಗುಣಮಟ್ಟದ್ದನ್ನಾಗಿ ಮಾಡಿರುವುದರಿಂದ ಅಥವಾ ಆಹಾರದಲ್ಲಿ ಬಾಹ್ಯ ವಸ್ತುಗಳು ಒಳಗೊಂಡಿರುವುದರಿಂದ;

(xii) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಿದ ಹೆಚ್ಚಿನ ಪ್ರಮಾಣಗಳಿಗಿಂತ ಕೀಟನಾಶಕಗಳನ್ನು ಅಥವಾ ಇತರ ಮಾಲಿನ್ಯಕಾರಕಗಳನ್ನು ಅದು ಒಳಗೊಂಡಿರುವುದರಿಂದ

– ಯಾವ ಆಹಾರ ಪದಾರ್ಥದ ಸ್ವರೂಪವು, ಸತ್ವವು ಅಥವಾ ಗುಣಮಟ್ಟವು ಆರೋಗ್ಯಕ್ಕೆ ಹಾನಿಕಾರಕವಾಗುವ ಹಾಗೆ ಮಾಡುತ್ತದೆಯೋ ಆ ಆಹಾರ ಪದಾರ್ಥ.

(2) ಜಮ್ಮು ಮತ್ತು ಕಾಶ್ಮೀರ* ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖವನ್ನು, ಆ ರಾಜ್ಯಕ್ಕೆ ಸಂಬಂಧಿಸಿದಂತೆ, ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಅದಕ್ಕೆ ಮಾಡಿದ ಉಲ್ಲೇಖವೆಂಬಂತೆ ಅರ್ಥೈಸತಕ್ಕದ್ದು.

## ಅಧ್ಯಾಯ II

## ಭಾರತ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ

**4. ಭಾರತ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಸ್ಥಾಪನೆ.–** (1) ಕೇಂದ್ರ ಸರ್ಕಾರವು ಅಧಿಸೂಚನೆ ಮೂಲಕ, ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ ವಹಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು ಭಾರತ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ನಿಕಾಯವನ್ನು ಸ್ಥಾಪಿಸತಕ್ಕದ್ದು.

* ಅಧಿಸೂಚನೆ ಸಂಖ್ಯೆ ಎಸ್.ಓ 3912 (ಇ) ದಿನಾಂಕ: 30ನೇ ಅಕ್ಟೋಬರ್ 2019 ನೋಡಿ, ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶಕ್ಕೆ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಕ್ಕೆ ಅನ್ವಯವಾಗುವಂತೆ ಮಾಡಲಾಗಿದೆ.

(2) ಆಹಾರ ಪ್ರಾಧಿಕಾರವು, ಚರ ಮತ್ತು ಸ್ಥಿರಾಸ್ತಿಗಳೆರಡನ್ನೂ ಆರ್ಜಿಸುವ, ಹೊಂದುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕದ್ದು ಅಥವಾ ದಾವೆಗೆ ಗುರಿಯಾಗತಕ್ಕದ್ದು.

(3) ಆಹಾರ ಪ್ರಾಧಿಕಾರದ ಪ್ರಧಾನ ಕಛೇರಿಯು ದೆಹಲಿಯಲ್ಲಿ ಇರತಕ್ಕದ್ದು.

(4) ಆಹಾರ ಪ್ರಾಧಿಕಾರವು, ಭಾರತದ ಇತರ ಯಾವುದೇ ಸ್ಥಳದಲ್ಲಿ ಅದರ ಕಚೇರಿಗಳನ್ನು ಸ್ಥಾಪಿಸಬಹುದು.

**5. ಆಹಾರ ಪ್ರಾಧಿಕಾರದ ರಚನೆ ಮತ್ತು ಅದರ ಅಧ್ಯಕ್ಷ ಹಾಗೂ ಇತರ ಸದಸ್ಯರ ನೇಮಕಕ್ಕೆ ಅರ್ಹತೆಗಳು.–** (1) ಆಹಾರ ಪ್ರಾಧಿಕಾರವು ಒಬ್ಬ ಅಧ್ಯಕ್ಷನನ್ನು ಮತ್ತು ಇಪ್ಪತ್ತೆರಡು ಸದಸ್ಯರನ್ನು ಒಳಗೊಂಡಿರತಕ್ಕದ್ದು. ಅವರ ಪೈಕಿ ಮೂರನೇ ಒಂದು ಭಾಗದಷ್ಟು ಮಹಿಳೆಯರು ಇರತಕ್ಕದ್ದು. ಎಂದರೆ:–

(ಎ) ಈ ಮುಂದಿನವುಗಳನ್ನು, ಎಂದರೆ,–

(i) ಕೃಷಿ;

(ii) ವಾಣಿಜ್ಯ;

(iii) ಬಳಕೆದಾರರ ವ್ಯವಹಾರಗಳು;

(iv) ಆಹಾರ ಸಂಸ್ಕರಣೆ;

(v) ಆರೋಗ್ಯ;

(vi) ವಿಧಾಯೀ ವ್ಯವಹಾರಗಳು; ಮತ್ತು

(vii) ಸಣ್ಣ ಪ್ರಮಾಣದ ಕೈಗಾರಿಕೆಗಳು

– ಇವುಗಳನ್ನು ನೋಡಿಕೊಳ್ಳುವ ಅನುಕ್ರಮವಾಗಿ ಕೇಂದ್ರ ಸರ್ಕಾರದ ಮಂತ್ರಾಲಯಗಳನ್ನು ಅಥವಾ ಇಲಾಖೆಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ದರ್ಜೆಗೆ ಕಡಿಮೆಯಿಲ್ಲದ, ಏಳು ಸದಸ್ಯರು, ಅವರು ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

(ಬಿ) ಆಹಾರೋದ್ಯಮದ ಇಬ್ಬರು ಪ್ರತಿನಿಧಿಗಳು, ಅವರಲ್ಲಿ ಒಬ್ಬ ಸಣ್ಣ ಪ್ರಮಾಣದ ಕೈಗಾರಿಕೆಗಳ ಪ್ರತಿನಿಧಿಯಾಗಿರತಕ್ಕದ್ದು;

(ಸಿ) ಬಳಕೆದಾರ ಸಂಘಗಳಿಂದ ಇಬ್ಬರು ಪ್ರತಿನಿಧಿಗಳು;

(ಡಿ) ಮೂವರು ಶ್ರೇಷ್ಠ ಆಹಾರ ತಜ್ಞರು ಅಥವಾ ವಿಜ್ಞಾನಿಗಳು;

(ಇ) ರಾಜ್ಯಗಳನ್ನು ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳನ್ನು ಪ್ರತಿನಿಧಿಸಲು ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ವಲಯಗಳಿಂದ ಅನುಕ್ರಮವಾಗಿ ಒಬ್ಬರಂತೆ, ಪ್ರತಿ ಮೂರು ವರ್ಷಗಳಿಗೆ ಸರದಿ ಆಧಾರದ ಮೂಲಕ ನೇಮಕ ಮಾಡಲಾಗುವ ಐವರು ಸದಸ್ಯರು;

(ಎಫ್) ರೈತ ಸಂಘಗಳನ್ನು ಪ್ರತಿನಿಧಿಸುವ ಇಬ್ಬರು ವ್ಯಕ್ತಿಗಳು;

(ಜಿ) ಚಿಲ್ಲರೆ ವ್ಯಾಪಾರಿಗಳ ಸಂಘಗಳನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿ;

(2) ಸಕ್ಷಮತೆಯ ಅತ್ಯುನ್ನತ ಮಟ್ಟಗಳನ್ನು, ಸಂಬಂಧಪಟ್ಟ ಕ್ಷೇತ್ರದಲ್ಲಿ ಆಗಾದ ಪರಿಣತಿಯನ್ನು ಸುನಿಶ್ಚಿತಪಡಿಸುವಂಥ ರೀತಿಯಲ್ಲಿ ಆಹಾರ ಪ್ರಾಧಿಕಾರದ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ನೇಮಕ ಮಾಡತಕ್ಕದ್ದು ಮತ್ತು ಅವರು ದೇಶದೊಳಗಿನ ಇಡೀ ಭೌಗೋಳಿಕ ಪ್ರದೇಶವನ್ನು ಸಾಧ್ಯವಾದಷ್ಟು ಮಟ್ಟಿಗೆ ಪ್ರತಿನಿಧಿಸತಕ್ಕದ್ದು.

(3) ಕೇಂದ್ರ ಸರ್ಕಾರವು, ಆಹಾರ ವಿಜ್ಞಾನ ಕ್ಷೇತ್ರದಲ್ಲಿ ಸುಪ್ರಸಿದ್ಧರಾದ ವ್ಯಕ್ತಿಗಳ ಪೈಕಿಯಿಂದ ಅಥವಾ ವಿಷಯದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುವಂಥ ಮತ್ತು ಭಾರತ ಸರ್ಕಾರದ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ಸ್ಥಾನವನ್ನು ಹೊಂದಿರುವಂಥ ಅಥವಾ ಹೊಂದಿದ್ದಂಥ ಆಡಳಿತ ಕ್ಷೇತ್ರದಲ್ಲಿನ ವ್ಯಕ್ತಿಗಳ ಪೈಕಿ ಅಧ್ಯಕ್ಷನನ್ನು ನೇಮಕ ಮಾಡತಕ್ಕದ್ದು.

(4) ಆಹಾರ ಪ್ರಾಧಿಕಾರದ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಅಧ್ಯಕ್ಷನನ್ನು ಮತ್ತು ಸದಸ್ಯರನ್ನು ಆಯ್ಕೆ ಸಮಿತಿಯ ಶಿಫಾರಸುಗಳ ಮೇಲೆ ಕೇಂದ್ರ ಸರ್ಕಾರವು ನೇಮಕ ಮಾಡಬಹುದು.

(5) ಆಹಾರ ಪ್ರಾಧಿಕಾರದ ಅಧ್ಯಕ್ಷನು ಇತರ ಯಾವುದೇ ಪದವನ್ನು ಧಾರಣ ಮಾಡತಕ್ಕದ್ದಲ್ಲ.

**6. ಆಹಾರ ಪ್ರಾಧಿಕಾರದ ಅಧ್ಯಕ್ಷನ ಮತ್ತು ಸದಸ್ಯರ ಆಯ್ಕೆಗಾಗಿ ಆಯ್ಕೆ ಸಮಿತಿ.–** (1) ಕೇಂದ್ರ ಸರ್ಕಾರವು, ಆಹಾರ ಪ್ರಾಧಿಕಾರದ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ,–

| | | |
|---|---|---|
| (ಎ) | ಕ್ಯಾಬಿನೆಟ್ ಕಾರ್ಯದರ್ಶಿ | ಅಧ್ಯಕ್ಷ |
| (ಬಿ) | ಈ ಅಧಿನಿಯಮದ ಜಾರಿಗೆ ಜವಾಬ್ದಾರಿಯಾಗಿರುವ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರಿ ಕಾರ್ಯದರ್ಶಿ | ಸಂಚಾಲಕ ಸದಸ್ಯ |
| (ಸಿ) | ಆರೋಗ್ಯ, ಶಾಸನ ರಚನೆ ಮತ್ತು ಸಿಬ್ಬಂದಿ ವ್ಯವಹಾರವನ್ನು ನೋಡಿಕೊಳ್ಳುವ ಕೇಂದ್ರ ಸರ್ಕಾರದ ಮಂತ್ರಾಲಯಗಳ ಅಥವಾ ಇಲಾಖೆಗಳ ಪ್ರಭಾರದಲ್ಲಿರುವ ಕಾರ್ಯದರ್ಶಿ | ಸದಸ್ಯ |
| (ಡಿ) | ಸಾರ್ವಜನಿಕ ಉದ್ಯಮಗಳ ಆಯ್ಕೆ ಮಂಡಳಿಯ ಅಧ್ಯಕ್ಷ | ಸದಸ್ಯ |
| (ಇ) | ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ಒಬ್ಬ ಸುಪ್ರಸಿದ್ಧ ಆಹಾರ ತಜ್ಞ | ಸದಸ್ಯ |

– ಇವರನ್ನು ಒಳಗೊಂಡಿರುವ ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು.

**ವಿವರಣೆ.–** ಕೇಂದ್ರ ಸರ್ಕಾರವು (ಇ) ಖಂಡದ ಉದ್ದೇಶಗಳಿಗಾಗಿ ಯಾವುದೇ ರಾಷ್ಟ್ರೀಯ ಸಂಶೋಧನಾ ಅಥವಾ ತಾಂತ್ರಿಕ ಸಂಸ್ಥೆಯ ನಿರ್ದೇಶಕ ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಮುಖ್ಯಸ್ಥನ ಹುದ್ದೆಯನ್ನು ಹೊಂದಿರುವ ವ್ಯಕ್ತಿಗಳ ಪೈಕಿ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು, ಆಹಾರ ಪ್ರಾಧಿಕಾರದ ಅಧ್ಯಕ್ಷನ ಅಥವಾ ಸದಸ್ಯನ ಮರಣದ, ರಾಜೀನಾಮೆಯ ಅಥವಾ ಅವನನ್ನು ತೆಗೆದು ಹಾಕಿದ ಕಾರಣದಿಂದಾಗಿ ಯಾವುದೇ ಖಾಲಿಸ್ಥಾನವು ಉಂಟಾದ ದಿನಾಂಕದಿಂದ ಎರಡು

ತಿಂಗಳೊಳಗೆ ಮತ್ತು ಆ ಪ್ರಾಧಿಕಾರದ ಅಧ್ಯಕ್ಷನ ಅಥವಾ ಯಾರೇ ಸದಸ್ಯನ ವಯೋನಿವೃತ್ತಿಗೆ ಅಥವಾ ಪದಾವಧಿಯು ಪೂರ್ಣಗೊಳ್ಳುವ ಮೊದಲು ಮೂರು ತಿಂಗಳೊಳಗೆ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಆಯ್ಕೆ ಸಮಿತಿಗೆ ಪ್ರಸ್ತಾವವನ್ನು ಕಳುಹಿಸತಕ್ಕದ್ದು.

(3) ಆಯ್ಕೆ ಸಮಿತಿಯು, ಪ್ರಸ್ತಾವವನ್ನು ತನಗೆ ಸಲ್ಲಿಸಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ಆಹಾರ ಪ್ರಾಧಿಕಾರದ ಅಧ್ಯಕ್ಷನ ಮತ್ತು ಸದಸ್ಯರ ಆಯ್ಕೆಯನ್ನು ಅಂತಿಮಗೊಳಿಸತಕ್ಕದ್ದು.

(4) ಆಯ್ಕೆ ಸಮಿತಿಯು, ತನಗೆ ಸಲ್ಲಿಸಿದ ಪ್ರಸ್ತಾವದಲ್ಲಿ ತಿಳಿಸಿರುವ ಪ್ರತಿಯೊಂದು ಖಾಲಿಸ್ಥಾನಕ್ಕೆ ಎರಡು ಹೆಸರುಗಳ ಒಂದು ಪಟ್ಟಿಯನ್ನು ಶಿಫಾರಸು ಮಾಡತಕ್ಕದ್ದು.

(5) ಆಯ್ಕೆ ಸಮಿತಿಯು, ಆಹಾರ ಪ್ರಾಧಿಕಾರದ ಅಧ್ಯಕ್ಷನಾಗಿ ಅಥವಾ ಇತರ ಸದಸ್ಯನಾಗಿ ಯಾರೇ ವ್ಯಕ್ತಿಯನ್ನು ನೇಮಕ ಮಾಡುವುದಕ್ಕೆ ಶಿಫಾರಸು ಮಾಡುವ ಮೊದಲು, ಅಂಥ ವ್ಯಕ್ತಿಯು, ಸದಸ್ಯನಾಗಿ ತನ್ನ ಪ್ರಕಾರ್ಯಗಳ ನಿರ್ವಹಣೆಯ ಮೇಲೆ, ಪ್ರತಿಕೂಲ ಪರಿಣಾಮ ಬೀರುವ ಯಾವುದೇ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿಲ್ಲವೆಂಬುದನ್ನು ಸ್ವತಃ ಮನವರಿಕೆ ಮಾಡಿಕೊಳ್ಳತಕ್ಕದ್ದು.

(6) ಆಯ್ಕೆ ಸಮಿತಿಯಲ್ಲಿ ಖಾಲಿ ಸ್ಥಾನವು ಇರುವ ಕಾರಣ ಮಾತ್ರದಿಂದಲೇ ಆಹಾರ ಪ್ರಾಧಿಕಾರದ ಅಧ್ಯಕ್ಷನ ಅಥವಾ ಇತರ ಸದಸ್ಯರ ನೇಮಕವು ಅಸಿಂಧುವಾಗತಕ್ಕದ್ದಲ್ಲ.

**7. ಆಹಾರ ಪ್ರಾಧಿಕಾರದ ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ, ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು.–** (1) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಅಧ್ಯಕ್ಷನು ಮತ್ತು ಸದಸ್ಯರು, ತಮ್ಮ ಪದಗಳನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮುಂದಿನ ಮೂರು ವರ್ಷಗಳ ಅವಧಿಗಾಗಿ ಮರು ನೇಮಕಗೊಳ್ಳಲು ಅರ್ಹರಾಗಿರತಕ್ಕದ್ದು:

ಪರಂತು, ಅಧ್ಯಕ್ಷನು 65 ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದ ನಂತರ ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(2) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(3) ಅಧ್ಯಕ್ಷನು ಮತ್ತು ಪ್ರತಿಯೊಬ್ಬ ಸದಸ್ಯನು, ತಮ್ಮ ಪದವನ್ನು ವಹಿಸಿಕೊಳ್ಳುವ ಮೊದಲು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರಿಯ ಮುಂದೆ ಪದದ ಮತ್ತು ಗೌಪ್ಯತೆಯ ಪ್ರಮಾಣವಚನವನ್ನು ಸ್ವೀಕರಿಸತಕ್ಕದ್ದು ಮತ್ತು ಅದಕ್ಕೆ ಸಹಿ ಮಾಡತಕ್ಕದ್ದು.

(4) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಅಧ್ಯಕ್ಷನು ಅಥವಾ ಯಾರೇ ಸದಸ್ಯನು, ಮೂರು ತಿಂಗಳುಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಕೇಂದ್ರ ಸರ್ಕಾರಕ್ಕೆ ಲಿಖಿತದಲ್ಲಿ ನೀಡುವುದರ ಮೂಲಕ ತನ್ನ ಪದವನ್ನು ತ್ಯಜಿಸಬಹುದು; ಅಥವಾ

(ಬಿ) ಪ್ರಕರಣ 8ರ ಉಪಬಂಧಗಳಿಗನುಸಾರವಾಗಿ ಅಧ್ಯಕ್ಷನನ್ನು ಅಥವಾ ಯಾರೇ ಸದಸ್ಯನನ್ನು ಅವನ ಪದದಿಂದ ತೆಗೆದು ಹಾಕಬಹುದು.

(5) ಅಧ್ಯಕ್ಷನು ಅಥವಾ ಯಾರೇ ಸದಸ್ಯನು ಹಾಗೆ ಪದಧಾರಣ ಮಾಡಿರುವುದು ನಿಂತು ಹೋದ ಮೇಲೆ ಯಾವುದೇ ಆಹಾರ ಪ್ರಾಧಿಕಾರದ ಅಥವಾ ರಾಜ್ಯ ಪ್ರಾಧಿಕಾರದ ಮುಂದೆ ಯಾವುದೇ ರೀತಿಯಲ್ಲಿ ಯಾರೇ ವ್ಯಕ್ತಿಯನ್ನು ಪ್ರತಿನಿಧಿಸತಕ್ಕದ್ದಲ್ಲ.

**8. ಆಹಾರ ಪ್ರಾಧಿಕಾರದ ಅಧ್ಯಕ್ಷನನ್ನು ಮತ್ತು ಸದಸ್ಯರನ್ನು ತೆಗೆದುಹಾಕುವುದು.–** (1) ಪ್ರಕರಣ 7ರ ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು, ಅಧ್ಯಕ್ಷನು ಅಥವಾ ಸಂದರ್ಭಾನುಸಾರ, ಇತರ ಯಾರೇ ಸದಸ್ಯನು,–

(ಎ) ದಿವಾಳಿಯೆಂದು ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಬಿ) ಯಾವ ಅಪರಾಧವು ನೈತಿಕ ಅಧಃಪತನವನ್ನೊಳಗೊಳ್ಳುವ ಅಪರಾಧವಾಗಿದೆಯೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವುದೋ ಆ ಅಪರಾಧದ ಅಪರಾಧಿಯೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(ಸಿ) ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾಗಿದ್ದರೆ; ಅಥವಾ

(ಡಿ) ಸದಸ್ಯನಾಗಿ ಅವನ ಪ್ರಕಾರ್ಯಗಳ ನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂಥ ಹಣಕಾಸಿನ ಅಥವಾ ಇತರ ಹಿತಾಸಕ್ತಿಗಳನ್ನು ಆರ್ಜಿಸಿದ್ದರೆ; ಅಥವಾ

(ಇ) ಅವನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗ ಪಡಿಸಿಕೊಂಡಿದ್ದಾನೆ ಎಂದರೆ, ಅವನನ್ನು ಆ ಸ್ಥಾನದಲ್ಲಿ ಮುಂದುವರೆಸುವುದು ಸಾರ್ವಜನಿಕ ಹಿತಾಸಕ್ತಿಗೆ ಬಾಧಕವುಂಟು ಮಾಡಿದ್ದರೆ

– ಅವನನ್ನು ಆದೇಶದ ಮೂಲಕ ಪದದಿಂದ ತೆಗೆದು ಹಾಕಬಹುದು.

(2) ಯಾರೇ ಸದಸ್ಯನಿಗೆ ಸದರಿ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ಉಪಪ್ರಕರಣ (1)ರ (ಡಿ) ಮತ್ತು (ಇ) ಖಂಡದ ಮೇರೆಗೆ ಅವನನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

**9. ಆಹಾರ ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು.–** (1) ಆಹಾರ ಪ್ರಾಧಿಕಾರದಲ್ಲಿ ಒಬ್ಬ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಇರತಕ್ಕದ್ದು. ಅವನು ಭಾರತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯಾಗಿರತಕ್ಕದ್ದು ಅವನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು. ಅವನನ್ನು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು.

(2) ಆಹಾರ ಪ್ರಾಧಿಕಾರವು, ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ, ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ತನಗೆ ಅಗತ್ಯವಾದ ಇತರ ಅಧಿಕಾರಿಗಳ ಮತ್ತು ನೌಕರರ ಸಂಖ್ಯೆಯನ್ನು, ಬಗೆಯನ್ನು, ಮತ್ತು ಪ್ರವರ್ಗಗಳನ್ನು ನಿರ್ಧರಿಸಬಹುದು.

(3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ, ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳಗಳು ಮತ್ತು ಭತ್ಯೆಗಳು ಮತ್ತು ಅವರ ಸೇವೆಯ ಇತರ ಸೇವೆಯ ಷರತ್ತುಗಳು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಆಹಾರ ಪ್ರಾಧಿಕಾರವು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಪ್ರಕಾರ್ಯಗಳು.–** (1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಆಹಾರ ಪ್ರಾಧಿಕಾರದ ಕಾನೂನು ಸಮ್ಮತ ಪ್ರತಿನಿಧಿಯಾಗಿರತಕ್ಕದ್ದು ಮತ್ತು,–

(ಎ) ಆಹಾರ ಪ್ರಾಧಿಕಾರದ ದಿನನಿತ್ಯದ ಆಡಳಿತಕ್ಕೆ;

(ಬಿ) ಕೇಂದ್ರ ಸಲಹಾ ಸಮಿತಿಯೊಂದಿಗೆ ಸಮಾಲೋಚನೆ ನಡೆಸಿ ಆಹಾರ ಪ್ರಾಧಿಕಾರದ ಕಾರ್ಯಕ್ರಮಸೂಚಿಯ ಪ್ರಸ್ತಾವನೆಯನ್ನು ರೂಪಿಸುವುದಕ್ಕೆ;

(ಸಿ) ಆಹಾರ ಪ್ರಾಧಿಕಾರವು ಅಂಗೀಕರಿಸಿರುವ ಕಾರ್ಯಸೂಚಿಗಳ ಮತ್ತು ನಿರ್ಣಯಗಳ ಅನುಷ್ಠಾನಕ್ಕೆ;

(ಡಿ) ವೈಜ್ಞಾನಿಕ ಸಮಿತಿಗೆ ಮತ್ತು ವೈಜ್ಞಾನಿಕ ತಜ್ಞರ ತಂಡಕ್ಕೆ ಸೂಕ್ತ ವೈಜ್ಞಾನಿಕ, ತಾಂತ್ರಿಕ ಮತ್ತು ಆಡಳಿತಾತ್ಮಕ ನೆರವಿಗೆ ಅವಕಾಶ ಕಲ್ಪಿಸಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ;

(ಇ) ಆಹಾರ ಪ್ರಾಧಿಕಾರವು, ಅದರ ಬಳಕೆದಾರರ ಅಗತ್ಯಗಳಿಗೆ ಅನುಸಾರವಾಗಿ, ಅದರಲ್ಲೂ ಮುಖ್ಯವಾಗಿ, ಒದಗಿಸಿದ ಸೇವೆಗಳ ಸಮರ್ಪಕತೆಗೆ ಮತ್ತು ಆ ಸೇವೆಗಳನ್ನು ಒದಗಿಸಲು ತೆಗೆದುಕೊಂಡ ಸಮಯಕ್ಕೆ ಸಂಬಂಧಿಸಿದಂತೆ ಅದರ ಕಾರ್ಯಭಾರಗಳನ್ನು ನಿರ್ವಹಿಸಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ;

(ಎಫ್) ಆಹಾರ ಪ್ರಾಧಿಕಾರದ ಆದಾಯ ಮತ್ತು ವೆಚ್ಚದ ವಿವರಣಾಪಟ್ಟಿಯನ್ನು ಸಿದ್ಧಪಡಿಸುವುದಕ್ಕೆ ಮತ್ತು ಆಯವ್ಯಯವನ್ನು ಕಾರ್ಯಗತಗೊಳಿಸುವುದಕ್ಕೆ;

(ಜಿ) ಕೇಂದ್ರ ಸರ್ಕಾರದೊಡನೆ ಸಂಬಂಧವನ್ನು ಸಂವರ್ಧಿಸುವುದಕ್ಕೆ ಮತ್ತು ಅದನ್ನು ಹಾಗೆ ಉಳಿಸಿಕೊಂಡು ಬರುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಸಮಿತಿಗಳೊಡನೆ ನಿಯತ ಮಾತುಕತೆಯನ್ನು ಖಚಿತಪಡಿಸಿಕೊಳ್ಳುವುದಕ್ಕೆ

– ಜವಾಬ್ದಾರನಾಗಿರತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು,–

(ಎ) ಆಹಾರ ಪ್ರಾಧಿಕಾರದ ಹಿಂದಿನ ವರ್ಷದ ಎಲ್ಲಾ ಕಾರ್ಯಚಟುವಟಿಕೆಗಳನ್ನು ಒಳಗೊಂಡಿರುವ ಒಂದು ಸಾಮಾನ್ಯ ವರದಿಯನ್ನು;

(ಬಿ) ಕಾರ್ಯಸೂಚಿಗಳನ್ನು;

(ಸಿ) ಹಿಂದಿನ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು;

(ಡಿ) ಮುಂಬರುವ ವರ್ಷದ ಆಯವ್ಯಯಪತ್ರವನ್ನು

– ಪ್ರತಿ ವರ್ಷ ಅನುಮೋದನೆಗಾಗಿ ಆಹಾರ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಸಾಮಾನ್ಯ ವರದಿಯನ್ನು ಮತ್ತು ಕಾರ್ಯಸೂಚಿಗಳನ್ನು ಆಹಾರ ಪ್ರಾಧಿಕಾರವು ಅಂಗೀಕರಿಸಿದ ನಂತರ, ಅವುಗಳನ್ನು, ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ ಕಳುಹಿಸತಕ್ಕದ್ದು ಮತ್ತು ಅವುಗಳನ್ನು ಪ್ರಕಟಿಸತಕ್ಕದ್ದು.

(4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಆಹಾರ ಪ್ರಾಧಿಕಾರದ ಎಲ್ಲ ಹಣಕಾಸಿನ ವೆಚ್ಚಗಳನ್ನು ಅನುಮೋದಿಸತಕ್ಕದ್ದು ಮತ್ತು ಪ್ರಾಧಿಕಾರದ ಕಾರ್ಯಚಟುವಟಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

(5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಆಹಾರ ಪದಾರ್ಥಗಳ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವಾಗ ಆಹಾರ ಸುರಕ್ಷತಾ ಆಯುಕ್ತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(6) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಆಹಾರ ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ಮೇಲೆ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿರತಕ್ಕದ್ದು.

**11. ಕೇಂದ್ರ ಸಲಹಾ ಸಮಿತಿ.–** (1) ಆಹಾರ ಪ್ರಾಧಿಕಾರವು, ಅಧಿಸೂಚನೆ ಮೂಲಕ ಕೇಂದ್ರ ಸಲಹಾ ಸಮಿತಿ ಎಂದು ಕರೆಯಲಾಗುವ ಒಂದು ಸಮಿತಿಯನ್ನು ಸ್ಥಾಪಿಸತಕ್ಕದ್ದು.

(2) ಕೇಂದ್ರ ಸಲಹಾ ಸಮಿತಿಯು ಆಹಾರ ಉದ್ಯಮ, ಕೃಷಿ, ಬಳಕೆದಾರರು, ಸಂಬಂಧಪಟ್ಟ ಸಂಶೋಧನಾ ಸಂಸ್ಥೆಗಳ ಮತ್ತು ಆಹಾರ ಪ್ರಯೋಗಾಲಯಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ತಲಾ ಇಬ್ಬರು ಸದಸ್ಯರನ್ನು ಮತ್ತು ಎಲ್ಲ ಆಹಾರ ಸುರಕ್ಷತಾ ಆಯುಕ್ತರುಗಳನ್ನು ಒಳಗೊಂಡಿರತಕ್ಕದ್ದು, ಮತ್ತು ವೈಜ್ಞಾನಿಕ ಸಮಿತಿಯ ಅಧ್ಯಕ್ಷನು ಪದನಿಮಿತ್ತ ಸದಸ್ಯನಾಗಿರತಕ್ಕದ್ದು.

(3) ಕೃಷಿ, ಪಶು ಸಂಗೋಪನೆ ಮತ್ತು ಹೈನುಗಾರಿಕೆ, ಜೈವಿಕ ತಂತ್ರಜ್ಞಾನ, ವಾಣಿಜ್ಯ ಮತ್ತು ಕೈಗಾರಿಕೆ, ಬಳಕೆದಾರರ ವ್ಯವಹಾರಗಳು, ಪರಿಸರ ಮತ್ತು ಅರಣ್ಯಗಳು, ಆಹಾರ ಸಂಸ್ಕರಣಾ ಕೈಗಾರಿಕೆಗಳು, ಆರೋಗ್ಯ, ಪಂಚಾಯತ್ ರಾಜ್, ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಆಹಾರ ಮತ್ತು ಸಾರ್ವಜನಿಕ ವಿತರಣೆಗೆ ಸಂಬಂಧಪಟ್ಟ ಕೇಂದ್ರ ಸರ್ಕಾರದ ಮಂತ್ರಾಲಯಗಳು ಅಥವಾ ಇಲಾಖೆಗಳ ಪ್ರತಿನಿಧಿಗಳು ಅಥವಾ ಸರ್ಕಾರಿ ಸಂಸ್ಥೆಗಳು ಅಥವಾ ಸಂಘ ಸಂಸ್ಥೆಗಳು ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ರೈತ ಸಂಘಗಳ ಪ್ರತಿನಿಧಿಗಳು ಕೇಂದ್ರ ಸಲಹಾ ಸಮಿತಿಯ ಚರ್ಚೆಗಳಿಗೆ ಆಹ್ವಾನಿತರಾಗಿರತಕ್ಕದ್ದು.

(4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಕೇಂದ್ರ ಸಲಹಾ ಸಮಿತಿಯ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು.

(5) ಕೇಂದ್ರ ಸಲಹಾ ಸಮಿತಿಯು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಲಾದಂತೆ, ತನ್ನ ಕಾರ್ಯಕಲಾಪ ಒಳಗೊಂಡಂತೆ ಕಾರ್ಯವಿಧಾನ ನಿಯಮಗಳನ್ನು ಅನುಸರಿಸತಕ್ಕದ್ದು.

**12. ಕೇಂದ್ರ ಸಲಹಾ ಸಮಿತಿಯ ಪ್ರಕಾರ್ಯಗಳು.–** (1) ಕೇಂದ್ರ ಸಲಹಾ ಸಮಿತಿಯು, ಆಹಾರ ಪ್ರಾಧಿಕಾರದ ಮತ್ತು ಆಹಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಾರಿ ಏಜೆನ್ಸಿಗಳ ಮತ್ತು ಸಂಘ ಸಂಸ್ಥೆಗಳ ನಡುವೆ ನಿಕಟ ಸಹಕಾರ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) ಕೇಂದ್ರ ಸಲಹಾ ಸಮಿತಿಯು,–

(ಎ) ಈ ಪ್ರಕರಣದ ಮೇರೆಗೆ ಆಹಾರ ಪ್ರಾಧಿಕಾರವು ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಬಗ್ಗೆ ಮತ್ತು ಅದರಲ್ಲೂ ಮುಖ್ಯವಾಗಿ ಆಹಾರ ಪ್ರಾಧಿಕಾರದ ಕಾರ್ಯಸೂಚಿಯ ಪ್ರಸ್ತಾವನೆಯನ್ನು ರೂಪಿಸುವ ಬಗ್ಗೆ,

(ಬಿ) ಕೆಲಸದ ಆದ್ಯತೆಯನ್ನು ನಿರ್ಧರಿಸುವ ಬಗ್ಗೆ,

(ಸಿ) ಸಂಭಾವ್ಯ ಅಪಾಯಗಳನ್ನು ಗುರುತಿಸುವ ಬಗ್ಗೆ,

(ಡಿ) ಜ್ಞಾನ ಸಂಚಯನದ ಬಗ್ಗೆ; ಮತ್ತು

(ಇ) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಕಾರ್ಯಗಳ ಬಗ್ಗೆ

– ಆಹಾರ ಪ್ರಾಧಿಕಾರಕ್ಕೆ ಸಲಹೆ ನೀಡತಕ್ಕದ್ದು.

(3) ಕೇಂದ್ರ ಸಲಹಾ ಸಮಿತಿಯು, ಕೇಂದ್ರ ಸಲಹಾ ಸಮಿತಿಯ ಅಧ್ಯಕ್ಷನ ಆಹ್ವಾನದ ಮೇರೆಗೆ ನಿಯತವಾಗಿ ಅಥವಾ ಅದರ ಸದಸ್ಯರಲ್ಲಿ ಕನಿಷ್ಠ ಮೂರನೇ ಒಂದು ಭಾಗದಷ್ಟು ಸದಸ್ಯರ ಕೋರಿಕೆಯ ಮೇರೆಗೆ ಮತ್ತು ಒಂದು ವರ್ಷದಲ್ಲಿ ಮೂರು ಬಾರಿಗೆ ಕಡಿಮೆಯಿಲ್ಲದಂತೆ ಸಭೆ ಸೇರತಕ್ಕದ್ದು.

**13. ವೈಜ್ಞಾನಿಕ ತಂಡಗಳು.–** (1) ಆಹಾರ ಪ್ರಾಧಿಕಾರವು ಸ್ವತಂತ್ರ ವೈಜ್ಞಾನಿಕ ತಜ್ಞರನ್ನು ಒಳಗೊಂಡ ವೈಜ್ಞಾನಿಕ ತಂಡಗಳನ್ನು ರಚಿಸತಕ್ಕದ್ದು.

(2) ವೈಜ್ಞಾನಿಕ ತಂಡವು, ಸಂಬಂಧಪಟ್ಟ ಕೈಗಾರಿಕೆ ಮತ್ತು ಬಳಕೆದಾರರ ಪ್ರತಿನಿಧಿಗಳನ್ನು, ತಾನು ನಡೆಸುವ ಚರ್ಚೆಗಳಿಗೆ ಆಹ್ವಾನಿಸತಕ್ಕದ್ದು.

(3) ಉಪಪ್ರಕರಣ (1)ರ ಉಪಬಂಧಗಳಿಗೆ ಬಾಧಕವಾಗದಂತೆ, ಆಹಾರ ಪ್ರಾಧಿಕಾರವು,–

(ಎ) ಆಹಾರ ಸಂಯೋಜಕಗಳು, ರುಚಿಕಾರಕಗಳು, ಆಹಾರದಲ್ಲಿ ಸೇರಿರುವ ಸಂಸ್ಕರಣೆಗೆ ನೆರವಾಗುವ ವಸ್ತುಗಳ ಕುರಿತು;

(ಬಿ) ಕೀಟನಾಶಕಗಳ ಮತ್ತು ರೋಗ ನಿರೋಧಕಗಳ ಉಳಿಕೆಗಳ ಕುರಿತು;

(ಸಿ) ತಳಿವಿಜ್ಞಾನದ ಪ್ರಕಾರ ಮಾರ್ಪಡಿಸಿದ ಸಾವಯವ ವಸ್ತುಗಳು ಮತ್ತು ಆಹಾರಗಳ ಕುರಿತು;

(ಡಿ) ಕ್ರಿಯಾತ್ಮಕ ಆಹಾರಗಳು, ಪೋಷಕಾಂಶ ವಸ್ತುಗಳು, ಪಥ್ಯಾಹಾರದ ಉತ್ಪನ್ನಗಳು ಮತ್ತು ಅದೇ ರೀತಿಯ ಇತರ ಉತ್ಪನ್ನಗಳ ಕುರಿತು;

(ಇ) ಜೈವಿಕ ಅಪಾಯಕಾರಿ ವಸ್ತುಗಳ ಕುರಿತು;

(ಎಫ್) ಆಹಾರ ಜೀವಿಗಳ ಶ್ರೇಣಿಯಲ್ಲಿನ ಮಾಲಿನ್ಯಕಾರಕಗಳ ಕುರಿತು;

(ಜಿ) ಲೇಬಲಿಂಗ್ ಕುರಿತು; ಮತ್ತು

(ಹೆಚ್) ಮಾದರಿ ಪಡೆಯುವ ಮತ್ತು ವಿಶ್ಲೇಷಣೆಯ ವಿಧಾನ ಕುರಿತು

– ತಂಡಗಳ ಜೊತೆಗೆ ಅದು ಅಗತ್ಯವೆಂದು ಪರಿಗಣಿಸುವಷ್ಟು ಸಂಖ್ಯೆಯ ವೈಜ್ಞಾನಿಕ ತಂಡಗಳನ್ನು ರಚಿಸಬಹುದು.

(4) ಆಹಾರ ಪ್ರಾಧಿಕಾರವು, ಸಂದರ್ಭಾನುಸಾರ, ಹೊಸ ಸದಸ್ಯರನ್ನು ಸೇರಿಸುವ ಮೂಲಕ, ಅಥವಾ ಹಾಲಿ ಇರುವ ಸದಸ್ಯರನ್ನು ಬಿಟ್ಟುಬಿಡುವ ಮೂಲಕ ಅಥವಾ ತಂಡದ ಹೆಸರನ್ನು ಬದಲಾಯಿಸುವುದರ ಮೂಲಕ ಕಾಲಕಾಲಕ್ಕೆ ವೈಜ್ಞಾನಿಕ ತಂಡಗಳನ್ನು ಪುನರ್ ರಚಿಸಬಹುದು.

**14. ವೈಜ್ಞಾನಿಕ ಸಮಿತಿ.–** (1) ಆಹಾರ ಪ್ರಾಧಿಕಾರವು, ವೈಜ್ಞಾನಿಕ ತಂಡಗಳ ಅಧ್ಯಕ್ಷರುಗಳನ್ನು ಮತ್ತು ಯಾವುವೇ ವೈಜ್ಞಾನಿಕ ತಂಡಗಳಿಗೆ ಸೇರದಿರುವ ಅಥವಾ ಸದಸ್ಯರಾಗದಿರುವ ಆರು ಜನ ಸ್ವತಂತ್ರ ವೈಜ್ಞಾನಿಕ ತಜ್ಞರನ್ನು ಒಳಗೊಂಡಿರುವ ವೈಜ್ಞಾನಿಕ ಸಮಿತಿಯನ್ನು ರಚಿಸತಕ್ಕದ್ದು.

(2) ವೈಜ್ಞಾನಿಕ ಸಮಿತಿಯು, ಆಹಾರ ಪ್ರಾಧಿಕಾರಕ್ಕೆ ವೈಜ್ಞಾನಿಕ ಅಭಿಪ್ರಾಯಗಳನ್ನು ನೀಡುವುದಕ್ಕೆ ಜವಾಬ್ದಾರಿಯಾಗಿರತಕ್ಕದ್ದು ಮತ್ತು ಅಗತ್ಯವಿರುವೆಡೆಯಲ್ಲಿ ಸಾರ್ವಜನಿಕ ವಿಚಾರಗಳನ್ನು ವ್ಯವಸ್ಥೆಗೊಳಿಸುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ವೈಜ್ಞಾನಿಕ ಸಮಿತಿಯು, ವೈಜ್ಞಾನಿಕ ಅಭಿಪ್ರಾಯ ನೀಡಿಕೆಯ ಕಾರ್ಯವಿಧಾನದಲ್ಲಿ ಸ್ಥಿರತೆಯನ್ನು ಸುನಿಶ್ಚಿತಪಡಿಸಿಕೊಳ್ಳಲು ಅಥವಾ ಅದರಲ್ಲಿ ಮುಖ್ಯವಾಗಿ ವೈಜ್ಞಾನಿಕ ತಂಡಗಳ ಕಾರ್ಯನಿರ್ವಹಣಾ ವಿಧಾನಗಳ ಅಳವಡಿಕೆಗೆ ಮತ್ತು ಅವುಗಳ ಕಾರ್ಯ ನಿರ್ವಾಹಣಾ ಪದ್ಧತಿಗಳನ್ನು ಸುಸಂಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಅವಶ್ಯವಾದ ಸಾಮಾನ್ಯ ಸಮನ್ವಯ ಸಾಧಿಸುವುದಕ್ಕೆ ಜವಾಬ್ದಾರಿಯಾಗಿರತಕ್ಕದ್ದು.

(4) ವೈಜ್ಞಾನಿಕ ಸಮಿತಿಯು, ಒಂದಕ್ಕಿಂತ ಹೆಚ್ಚು ತಂಡಗಳ ಸಕ್ಷಮತೆಯ ವ್ಯಾಪ್ತಿಯೊಳಗೆ ಬರುವ ಬಹು ವಲಯಗಳಿಗೆ ಸಂಬಂಧಿಸಿದ ವಿವಾದಾಂಶಗಳ ಮೇಲೆ ಮತ್ತು ವೈಜ್ಞಾನಿಕ ತಂಡಗಳ ಪೈಕಿ ಯಾವುದೇ ವೈಜ್ಞಾನಿಕ ತಂಡದ ಸಕ್ಷಮತೆಯ ವ್ಯಾಪ್ತಿಯೊಳಗೆ ಬರದಿರುವ ವಿವಾದಾಂಶಗಳ ಮೇಲೆಯೂ ಅಭಿಪ್ರಾಯಗಳನ್ನು ನೀಡತಕ್ಕದ್ದು.

(5) ಅವಶ್ಯವಿರುವೆಡೆಯಲ್ಲಿ, ಅದರಲ್ಲೂ ಮುಖ್ಯವಾಗಿ ಯಾವುದೇ ವೈಜ್ಞಾನಿಕ ತಂಡದ ಸಕ್ಷಮತೆಯ ವ್ಯಾಪ್ತಿಯೊಳಗೆ ಬರದಿರುವ ವಿಷಯಗಳ ಸಂಧರ್ಭದಲ್ಲಿ, ವೈಜ್ಞಾನಿಕ ಸಮಿತಿಯು ಕಾರ್ಯ ತಂಡಗಳನ್ನು ರಚಿಸತಕ್ಕದ್ದು ಮತ್ತು ಅಂಥ ಸಂದರ್ಭಗಳಲ್ಲಿ, ವೈಜ್ಞಾನಿಕ ಅಭಿಪ್ರಾಯಗಳನ್ನು ದೃಡಪಡಿಸುವಾಗ, ಅದು ಅಂಥ ಕಾರ್ಯ ತಂಡಗಳ ಪರಿಣಿತಿಯ ನೆರವನ್ನು ಪಡೆಯತಕ್ಕದ್ದು.

**15. ವೈಜ್ಞಾನಿಕ ಸಮಿತಿಯ ಮತ್ತು ವೈಜ್ಞಾನಿಕ ತಂಡದ ಕಾರ್ಯವಿಧಾನ.–** (1) ವೈಜ್ಞಾನಿಕ ತಂಡದ ಸದಸ್ಯರಾಗಿಲ್ಲದಿರುವ ವೈಜ್ಞಾನಿಕ ಸಮಿತಿಯ ಸದಸ್ಯರಾಗಿರುವವರನ್ನು ಮತ್ತು ವೈಜ್ಞಾನಿಕ ತಂಡದ ಸದಸ್ಯರನ್ನು ಮೂರು ವರ್ಷಗಳ ಅವಧಿಗೆ, ಆಹಾರ ಪ್ರಾಧಿಕಾರವು ನೇಮಕ ಮಾಡತಕ್ಕದ್ದು ಮತ್ತು ಈ ಅವಧಿಯು ಅಂಥ ಅವಧಿಗೆ ನವೀಕರಿಸುವಂಥದ್ದಾಗಿರತಕ್ಕದ್ದು ಮತ್ತು ಖಾಲಿ ಸ್ಥಾನದ ನೋಟೀಸನ್ನು ಸಂಬಂಧಪಟ್ಟ ಪ್ರಮುಖ ವೈಜ್ಞಾನಿಕ ಪ್ರಕಟಣೆಗಳಲ್ಲಿ ಮತ್ತು ಆಹಾರ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸಲು ಕರೆ ನೀಡಿ ಪ್ರಕಟಿಸತಕ್ಕದ್ದು.

(2) ವೈಜ್ಞಾನಿಕ ಸಮಿತಿ ಮತ್ತು ವೈಜ್ಞಾನಿಕ ತಂಡಗಳಲ್ಲಿ ಪ್ರತಿಯೊಂದು, ತಮ್ಮ ಸದಸ್ಯರುಗಳ ಪೈಕಿ ಒಬ್ಬರನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು.

(3) ವೈಜ್ಞಾನಿಕ ಸಮಿತಿಯ ಮತ್ತು ವೈಜ್ಞಾನಿಕ ತಂಡವು ತಮ್ಮ ಸದಸ್ಯರ ಬಹುಮತದ ಮೂಲಕ ಕಾರ್ಯನಿರ್ವಹಿಸತಕ್ಕದ್ದು ಮತ್ತು ಸದಸ್ಯರ ಅಭಿಪ್ರಾಯಗಳನ್ನು ದಾಖಲು ಮಾಡತಕ್ಕದ್ದು.

(4) ವೈಜ್ಞಾನಿಕ ಸಮಿತಿಯ ಮತ್ತು ವೈಜ್ಞಾನಿಕ ತಂಡದ ಕಾರ್ಯಾಚರಣೆ ಮತ್ತು ಸಹಕಾರಕ್ಕೆ ಸಂಬಂಧಿಸಿದ ಕಾರ್ಯವಿಧಾನವನ್ನು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸತಕ್ಕದ್ದು.

**(5) ಈ ಕಾರ್ಯ ವಿಧಾನಗಳು ಮುಖ್ಯವಾಗಿ,–**

(ಎ) ವೈಜ್ಞಾನಿಕ ಸಮಿತಿಯಲ್ಲಿ ಅಥವಾ ವೈಜ್ಞಾನಿಕ ತಂಡದಲ್ಲಿ ಸದಸ್ಯನು ಸೇವೆ ಸಲ್ಲಿಸಬಹುದಾದ ಕ್ರಮಾನುಗತ ಅವಧಿಗಳ ಸಂಖ್ಯೆಗೆ;

(ಬಿ) ಪ್ರತಿಯೊಂದು ವೈಜ್ಞಾನಿಕ ತಂಡದಲ್ಲಿರಬೇಕಾದ ಸದಸ್ಯರ ಸಂಖ್ಯೆಗೆ;

(ಸಿ) ವೈಜ್ಞಾನಿಕ ಸಮಿತಿಯ ಅಥವಾ ವೈಜ್ಞಾನಿಕ ತಂಡದ ಸದಸ್ಯರ ವೆಚ್ಚಗಳನ್ನು ತುಂಬಿಕೊಡುವುದಕ್ಕೆ ಸಂಬಂಧಿಸಿದ ಕಾರ್ಯವಿಧಾನಕ್ಕೆ;

(ಡಿ) ವೈಜ್ಞಾನಿಕ ಸಮಿತಿಗೆ ಅಥವಾ ವೈಜ್ಞಾನಿಕ ತಂಡಕ್ಕೆ ಕಾರ್ಯ ಭಾರಗಳನ್ನು ಮತ್ತು ವೈಜ್ಞಾನಿಕ ಅಭಿಪ್ರಾಯಗಳಿಗಾಗಿನ ಕೋರಿಕೆಗಳನ್ನು ಯಾವ ರೀತಿಯಲ್ಲಿ ವಹಿಸಿಕೊಡಬೇಕಾಗಿದೆಯೋ ಆ ರೀತಿಗೆ;

(ಇ) ವೈಜ್ಞಾನಿಕ ಸಮಿತಿಯ ಅಥವಾ ವೈಜ್ಞಾನಿಕ ತಂಡದ ಕಾರ್ಯ ತಂಡಗಳ ಸೃಜನೆಗೆ ಮತ್ತು ಸಂಘಟನೆಗೆ, ಮತ್ತು ಆ ಕಾರ್ಯ ತಂಡಗಳಲ್ಲಿ ಹೊರಗಿನ ತಜ್ಞರನ್ನು ಸೇರಿಸುವ ಸಾಧ್ಯತೆಗೆ;

(ಎಫ್) ವೈಜ್ಞಾನಿಕ ಸಮಿತಿಯ ಅಥವಾ ವೈಜ್ಞಾನಿಕ ತಂಡದ ಸಭೆಗಳಿಗೆ ವೀಕ್ಷಕರನ್ನು ಆಹ್ವಾನಿಸುವ ಸಾಧ್ಯತೆಗೆ;

(ಜಿ) ಸಾರ್ವಜನಿಕ ವಿಚಾರಣೆಗಳನ್ನು ವ್ಯವಸ್ಥೆ ಮಾಡುವ ಸಾಧ್ಯತೆಗೆ; ಮತ್ತು

(ಹೆಚ್) ಸಭೆಯ ಕೋರಂ, ಸಭೆಯ ನೋಟೀಸ್, ಸಭೆಯ ಕಾರ್ಯಸೂಚಿ ಮತ್ತು ಅಂಥ ಇತರ ವಿಷಯಗಳಿಗೆ

– ಸಂಬಂಧಿಸಿರತಕ್ಕದ್ದು.

**16. ಆಹಾರ ಪ್ರಾಧಿಕಾರದ ಕರ್ತವ್ಯಗಳು ಮತ್ತು ಪ್ರಕಾರ್ಯಗಳು.–** (1) ಸುರಕ್ಷಿತ ಮತ್ತು ಆರೋಗ್ಯಕರ ಆಹಾರ ದೊರೆಯುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಸಲುವಾಗಿ ಆಹಾರದ ಉತ್ಪಾದನೆ, ಸಂಸ್ಕರಣೆ, ವಿತರಣೆ, ಮಾರಾಟ ಮತ್ತು ಆಮದನ್ನು ನಿಯಂತ್ರಿಸುವುದು ಮತ್ತು ಮೇಲ್ವಿಚಾರಿಸುವುದು ಆಹಾರ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳಿಗೆ ಬಾಧಕವಾಗದಂತೆ, ಆಹಾರ ಪ್ರಾಧಿಕಾರವು,–

(ಎ) ಆಹಾರ ಪದಾರ್ಥಗಳಿಗೆ ಸಂಬಂಧಿಸಿದಂತೆ ಗುಣಮಟ್ಟಗಳನ್ನು ಮತ್ತು ಮಾರ್ಗಸೂಚಿಗಳನ್ನು ಮತ್ತು ಈ ಅಧಿನಿಯಮದ ಮೇರೆಗೆ ಅಧಿಸೂಚಿಸಿರುವ ವಿವಿಧ ಗುಣಮಟ್ಟಗಳನ್ನು ಜಾರಿಗೊಳಿಸುವ ಸೂಕ್ತವಾದ ಪದ್ಧತಿಯನ್ನು ನಿರ್ದಿಷ್ಟಪಡಿಸುವುದನ್ನು;

(ಬಿ) ಆಹಾರ ಸಂಯೋಜಕಗಳ, ಬೆಳೆ ಮಾಲಿನ್ಯಕಾರಕಗಳ, ಕೀಟನಾಶಕ ಉಳಿಕೆಗಳ, ಪಶುವೈದ್ಯಕೀಯ ಔಷಧಿಗಳ ಉಳಿಕೆಗಳ, ಭಾರೀ ಲೋಹಗಳ, ಸಂಸ್ಕರಣಾ ಸಹಾಯ ಸಾಮಗ್ರಿಗಳ, ಸೂಕ್ಷ್ಮ ಜೀವಾಣು ವಿಷಗಳ, ರೋಗ ನಿರೋಧಕಗಳ ಮತ್ತು ಔಷದಧ ಪ್ರಭಾವವನ್ನು ಸಕ್ರಿಯಾಗೊಳಿಸುವ ಪದಾರ್ಥಗಳ ಮತ್ತು ಆಹಾರವನ್ನು ವಿಕಿರಣಕ್ಕೆ ಗುರಿಪಡಿಸುವ ಮಿತಿಗಳನ್ನು;

(ಸಿ) ಆಹಾರ ಪದಾರ್ಥಗಳ ವ್ಯಾಪಾರ ವ್ಯವಹಾರಕ್ಕಾಗಿ ಆಹಾರ ಸುರಕ್ಷತಾ ನಿರ್ವಹಣಾ ವಿಧಾನ ಪ್ರಮಾಣೀಕರಣದಲ್ಲಿ ನಿರತವಾಗಿರುವ ಪ್ರಮಾಣೀಕರಣ ಸಂಸ್ಥೆಗಳಿಗೆ ಅಧಿಕೃತ ಮನ್ನಣೆ ನೀಡುವುದಕ್ಕಾಗಿ ಕಾರ್ಯ ವ್ಯವಸ್ಥೆಗಳನ್ನು ಮತ್ತು ಮಾರ್ಗಸೂಚಿಗಳನ್ನು;

(ಡಿ) ಭಾರತಕ್ಕೆ ಆಮದು ಮಾಡಿಕೊಂಡ ಯಾವುದೇ ಆಹಾರ ಪದಾರ್ಥಕ್ಕೆ ಸಂಬಂಧಿಸಿದಂತೆ ಗುಣಮಟ್ಟ ನಿಯಂತ್ರಣದ ಕಾರ್ಯವಿಧಾನವನ್ನು ಮತ್ತು ಜಾರಿಯನ್ನು;

(ಇ) ಪ್ರಯೋಗಾಲಯಗಳಿಗೆ ಅಧಿಕೃತ ಮನ್ನಣೆ ನೀಡುವುದಕ್ಕಾಗಿ ಕಾರ್ಯವಿಧಾನವನ್ನು ಮತ್ತು ಮಾರ್ಗಸೂಚಿಗಳನ್ನು ಮತ್ತು ಅಧಿಕೃತ ಮನ್ನಣೆ ನೀಡಿದ ಪ್ರಯೋಗಾಲಯಗಳನ್ನು ಅಧಿಸೂಚಿಸುವುದನ್ನು;

(ಎಫ್) ಮಾದರಿಗಳನ್ನು ತೆಗೆದುಕೊಳ್ಳುವ, ವಿಶ್ಲೇಷಣೆ ಮಾಡುವ ವಿಧಾನವನ್ನು ಮತ್ತು ಜಾರಿ ಪ್ರಾಧಿಕಾರಗಳ ನಡುವೆ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವುದನ್ನು;

(ಜಿ) ದೇಶದಲ್ಲಿ, ಈ ಅಧಿನಿಯಮದ ಜಾರಿ ಮತ್ತು ಅನುಷ್ಠಾನದ ಸಮೀಕ್ಷೆ ನಡೆಸುವುದನ್ನು;

(ಹೆಚ್) ಆರೋಗ್ಯ, ಪೋಷಕಾಂಶ, ವಿಶೇಷ ಪಥ್ಯದ ಬಳಕೆಗಳು ಮತ್ತು ಆಹಾರದಲ್ಲಿನ ಆಹಾರ ಪ್ರವರ್ಗಗಳ ಪದ್ಧತಿಗಳ ಮೇಲಿನ ನಿರೂಪಣೆಗಳು ಒಳಗೊಂಡಂತೆ ಆಹಾರ ಪದಾರ್ಥದ ಮೇಲೆ ಲೇಬಲ್‌ಲಿಂಗ್‌ನ ಗುಣಮಟ್ಟಗಳನ್ನು;

(ಐ) ಯಾವ ರೀತಿಯಲ್ಲಿ ಮತ್ತು ಯಾವ ಕಾರ್ಯವಿಧಾನಕ್ಕೊಳಪಟ್ಟು ಅಪಾಯ ಸಂಭವದ ವಿಶ್ಲೇಷಣೆ, ಅಪಾಯ ಸಂಭವದ ನಿರ್ಧರಣೆ, ಅಪಾಯ ಸಂಭವದ ಸಂವಹನ ಮತ್ತು ಅಪಾಯ ಸಂಭವದ ನಿರ್ವಹಣೆಯನ್ನು ಕೈಗೊಳ್ಳಬೇಕೋ ಆ ರೀತಿಯನ್ನು ಮತ್ತು ಆ ಕಾರ್ಯವಿಧಾನವನ್ನು

– ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದು.

(3) ಆಹಾರ ಪ್ರಾಧಿಕಾರವು,–

(ಎ) ಆಹಾರ ಸುರಕ್ಷತೆ ಮತ್ತು ಪೋಷಕಾಂಶಗಳ ಮೇಲೆ ನೇರ ಅಥವಾ ಪರೋಕ್ಷ ಸಂಬಂಧ ಹೊಂದಿರುವ ಕ್ಷೇತ್ರಗಳಲ್ಲಿ ನೀತಿ ಮತ್ತು ನಿಯಮಗಳನ್ನು ರೂಪಿಸುವ ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ ವೈಜ್ಞಾನಿಕ ಸಲಹೆಯನ್ನು ಮತ್ತು ತಾಂತ್ರಿಕ ನೆರವನ್ನು ಸಹ ಒದಗಿಸತಕ್ಕದ್ದು;

(ಬಿ) ಅದರಲ್ಲೂ ಮುಖ್ಯವಾಗಿ,–

(i) ಆಹಾರ ಬಳಕೆಗೆ ಮತ್ತು ಆಹಾರ ಸೇವನೆಯಿಂದ ಉಂಟಾಗುವ ಅಪಾಯಗಳಿಗೆ ಜನರು ಒಳಗಾಗುವುದಕ್ಕೆ;

(ii) ಜೈವಿಕ ಅಪಾಯಗಳಿಗೆ ಈಡಾಗುವುದಕ್ಕೆ ಮತ್ತು ಅವು ಇರುವುದಕ್ಕೆ;

(iii) ಆಹಾರದಲ್ಲಿರುವ ಮಾಲಿನ್ಯಕಾರಕಗಳಿಗೆ;

(iv) ವಿವಿಧ ಮಾಲಿನ್ಯಕಾರಕಗಳಲ್ಲಿರುವ ಉಳಿಕೆಗಳಿಗೆ;

(v) ಉದ್ಭವಿಸುವ ಅಪಾಯಗಳನ್ನು ಗುರುತಿಸುವುದಕ್ಕೆ; ಮತ್ತು

(vi) ಕ್ಷಿಪ್ರ ಎಚ್ಚರಿಕೆ ವ್ಯವಸ್ಥೆಯನ್ನು ಪ್ರಾರಂಭಿಸುವುದಕ್ಕೆ

– ಸಂಬಂಧಿಸಿದಂತೆ ಸಹ ಸುಸಂಗತ ವೈಜ್ಞಾನಿಕ ಮತ್ತು ತಾಂತ್ರಿಕ ದತ್ತಾಂಶವನ್ನು ಶೋಧಿಸತಕ್ಕದ್ದು, ಸಂಗ್ರಹಿಸತಕ್ಕದ್ದು, ತಾಳೆ ನೋಡತಕ್ಕದ್ದು, ವಿಶ್ಲೇಷಿಸತಕ್ಕದ್ದು ಮತ್ತು ಸಂಕ್ಷಿಪ್ತ ರೂಪದಲ್ಲಿಡತಕ್ಕದ್ದು;

(ಸಿ) ಅಪಾಯ ನಿರ್ಧರಣೆ ವಿಧಿವಿಧಾನಗಳ ವಿಕಸನಕ್ಕೆ ಉತ್ತೇಜಿಸತಕ್ಕದ್ದು, ಸಮನ್ವಯಗೊಳಿಸತಕ್ಕದ್ದು ಮತ್ತು ಮಾರ್ಗಸೂಚಿಗಳನ್ನು ಹೊರಡಿಸತಕ್ಕದ್ದು ಮತ್ತು ಆಹಾರಕ್ಕೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಪೋಷಕಾಂಶಗಳ ಅಪಾಯಗಳ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ಪರಿಶೀಲಿಸತಕ್ಕದ್ದು ಮತ್ತು ಈ ಬಗೆಗಿನ ಸಂದೇಶಗಳನ್ನು ಕೇಂದ್ರ ಸರ್ಕಾರಕ್ಕೆ, ರಾಜ್ಯ ಸರ್ಕಾರಗಳಿಗೆ ಮತ್ತು ಆಹಾರ ಸುರಕ್ಷತಾ ಆಯುಕ್ತರುಗಳಿಗೆ ಸಹ ಕಳುಹಿಸತಕ್ಕದ್ದು;

(ಡಿ) ಆಹಾರ ಸುರಕ್ಷತೆಗೆ ಸಂಬಂಧಿಸಿದಂತೆ ಬಿಕ್ಕಟ್ಟು ನಿರ್ವಹಣೆ ವಿಧಾನಗಳನ್ನು ಅನುಷ್ಠಾನಗೊಳಿಸುವಲ್ಲಿ ಮತ್ತು ಬಿಕ್ಕಟ್ಟು ನಿರ್ವಹಣೆಗಾಗಿ ಸಾಮಾನ್ಯ ಯೋಜನೆಯೊಂದನ್ನು ರೂಪಿಸಲು ಮತ್ತು ಈ ಕುರಿತು ಕೇಂದ್ರ ಸರ್ಕಾರವು ರಚಿಸಿದ ಬಿಕ್ಕಟ್ಟು ನಿರ್ವಹಣೆ ಘಟಕದೊಡನೆ ನಿಕಟ ಸಹಕಾರದೊಂದಿಗೆ ಕೆಲಸ ಮಾಡಲು ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ ವೈಜ್ಞಾನಿಕ ಮತ್ತು ತಾಂತ್ರಿಕ ಸಲಹೆಯನ್ನು ಮತ್ತು ನೆರವನ್ನು ಸಹ ಒದಗಿಸತಕ್ಕದ್ದು;

(ಇ) ಕಾರ್ಯಚಟುವಟಿಕೆಗಳನ್ನು ಸಮನ್ವಯಗೊಳಿಸುವ, ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವ, ಜಂಟಿ ಪ್ರಾಜೆಕ್ಟ್ ಗಳನ್ನು ಅಭಿವೃದ್ಧಿಪಡಿಸುವ ಮತ್ತು ಅನುಷ್ಠಾನಗೊಳಿಸುವ, ಆಹಾರ ಪ್ರಾಧಿಕಾರದ ಕಾರ್ಯಭಾರದ ವ್ಯಾಪ್ತಿಯೊಳಗೆ ಬರುವ ಕ್ಷೇತ್ರಗಳಲ್ಲಿನ ಪರಿಮಿತಿಯನ್ನು ಮತ್ತು ಅತ್ಯುತ್ತಮ ಪದ್ಧತಿಗಳ ವಿನಿಮಯ ಮಾಡಿಕೊಳ್ಳುವ ಮೂಲಕ ವೈಜ್ಞಾನಿಕ ಸಹಕಾರದ ಚೌಕಟ್ಟನ್ನು ರೂಪಿಸಲು ಅನುಕೂಲ ಕಲ್ಪಿಸುವ ಉದ್ದೇಶದಿಂದ ಸಂಘಸಂಸ್ಥೆಗಳ ಜಾಲ ವ್ಯವಸ್ಥೆಯನ್ನು ಸಹ ಸ್ಥಾಪಿಸತಕ್ಕದ್ದು;

(ಎಫ್) ಅಂತರರಾಷ್ಟ್ರೀಯ ಸಂಘಸಂಸ್ಥೆಗಳೊಡನೆ ಸಹಕಾರವನ್ನು ಉತ್ತಮಪಡಿಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ ವೈಜ್ಞಾನಿಕ ಮತ್ತು ತಾಂತ್ರಿಕ ನೆರವನ್ನು ಸಹ ಒದಗಿಸತಕ್ಕದ್ದು;

(ಜಿ) ಸಾರ್ವಜನಿಕರು, ಬಳಕೆದಾರರು, ಆಸಕ್ತ ಪಕ್ಷಕಾರರು ಮತ್ತು ಪಂಚಾಯಿತಿಗಳ ಎಲ್ಲ ಹಂತಗಳು ಸೂಕ್ತ ವಿಧಾನಗಳು ಮತ್ತು ಸಾಧನಗಳ ಮೂಲಕ ತ್ವರಿತವಾಗಿ, ನಂಬಲರ್ಹವಾದ, ವಸ್ತುನಿಷ್ಠವಾದ ಮತ್ತು ಸಮಗ್ರವಾದ ಮಾಹಿತಿಯನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಬೇಕಾದಂಥ ಎಲ್ಲ ಕ್ರಮಗಳನ್ನು ಸಹ ತೆಗೆದುಕೊಳ್ಳತಕ್ಕದ್ದು;

(ಹೆಚ್) ಆಹಾರ ಪದಾರ್ಥದ ವ್ಯಾಪಾರ ವ್ಯವಹಾರದ ಆಪರೇಟರ್‌ಗಳಾಗಿಯಾಗಲಿ ಅಥವಾ ನೌಕರರಾಗಿಯಾಗಲಿ ಅಥವಾ ಬೇರೆ ರೀತಿಯಲ್ಲಾಗಲಿ ಆಹಾರ ಪದಾರ್ಥದ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿರುವ ಅಥವಾ ತೊಡಗಲು ಉದ್ದೇಶಿಸಿರುವ ವ್ಯಕ್ತಿಗಳಿಗಾಗಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳಲ್ಲಿ, ಅದರ ಪ್ರದೇಶದ ಒಳಗಾಗಲಿ ಅಥವಾ ಹೊರಗಾಗಲಿ, ತರಬೇತಿ ಕಾರ್ಯಕ್ರಮಗಳನ್ನು ಸಹ ಏರ್ಪಡಿಸತಕ್ಕದ್ದು;

(ಐ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು ತನಗೆ ವಹಿಸಿದ ಯಾವುದೇ ಇತರ ಕಾರ್ಯವನ್ನು ಸಹ ಕೈಗೊಳ್ಳತಕ್ಕದ್ದು;

(ಜೆ) ಆಹಾರ, ನೈರ್ಮಲ್ಯ ಮತ್ತು ಸಸ್ಯ ನೈರ್ಮಲ್ಯ ಗುಣಮಟ್ಟಗಳಿಗಾಗಿ ಅಂತರರಾಷ್ಟ್ರೀಯ ತಾಂತ್ರಿಕ ಗುಣಮಟ್ಟಗಳ ಅಭಿವೃದ್ಧಿಗೆ ಸಹ ನೆರವಾಗತಕ್ಕದ್ದು;

(ಕೆ) ನಿರ್ದಿಷ್ಟಪಡಿಸಿದ ಆಹಾರ ಸಂಬಂಧಿತ ಕ್ರಮಗಳ ಸಮಾನ ಮನ್ನಣೆ ಕುರಿತ ಒಪ್ಪಂದವು ರೂಪಗೊಳ್ಳುವುದಕ್ಕೆ, ಸುಸಂಗತ ಮತ್ತು ಸೂಕ್ತವಾಗಿರುವಲ್ಲಿ ಸಹ ನೆರವು ನೀಡತಕ್ಕದ್ದು;

(ಎಲ್) ಅಂತರರಾಷ್ಟ್ರೀಯ ಸರ್ಕಾರಿ ಮತ್ತು ಸರ್ಕಾರೇತರ ಸಂಘಸಂಸ್ಥೆಗಳು ಕೈಗೊಂಡ ಆಹಾರ ಪದಾರ್ಥಗಳ ಗುಣಮಟ್ಟಗಳ ಕುರಿತ ಕೆಲಸ ಕಾರ್ಯಗಳಲ್ಲಿ ಸಮನ್ವಯ ತರಲು ಸಹ ಉತ್ತೇಜನ ನೀಡತಕ್ಕದ್ದು;

(ಎಂ) ದೇಶದಲ್ಲಿ ಅಂಗೀಕರಿಸಲಾದ ಸಂರಕ್ಷಣಾ ಮಟ್ಟವನ್ನು ಕಡಿಮೆ ಮಾಡಿಲ್ಲವೆಂದು ಖಚಿತಪಡಿಸಿಕೊಳ್ಳುವುದರ ಜೊತೆಗೆ ಅಂತರರಾಷ್ಟ್ರೀಯ ತಾಂತ್ರಿಕ ಗುಣಮಟ್ಟಗಳ ಮತ್ತು ದೇಶೀಯ ಆಹಾರ ಗುಣಮಟ್ಟಗಳ ನಡುವೆ ಸ್ಥಿರತೆಯನ್ನು ತರಲು ಸಹ ಉತ್ತೇಜನ ನೀಡತಕ್ಕದ್ದು;

(ಎನ್) ಆಹಾರ ಸುರಕ್ಷತೆ ಮತ್ತು ಆಹಾರ ಗುಣಮಟ್ಟಗಳಿಗೆ ಸಂಬಂಧಿಸಿದಂತೆ ಸಾರ್ವತ್ರಿಕ ಅರಿವು ಮೂಡಿಸಲು ಸಹ ಉತ್ತೇಜನ ನೀಡತಕ್ಕದ್ದು.

(4) ಆಹಾರ ಪ್ರಾಧಿಕಾರವು,–

(ಎ) ವೈಜ್ಞಾನಿಕ ಸಮಿತಿಯ ಮತ್ತು ವೈಜ್ಞಾನಿಕ ತಂಡದ ಅಭಿಪ್ರಾಯಗಳನ್ನು ಅಂಗೀಕರಿಸಿದ ತರುವಾಯ ಆ ಅಭಿಪ್ರಾಯಗಳನ್ನು;

(ಬಿ) ಆಹಾರ ಪ್ರಾಧಿಕಾರದ ಸದಸ್ಯರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಸಲಹಾ ಸಮಿತಿಯ ಸದಸ್ಯರು ಮತ್ತು ವೈಜ್ಞಾನಿಕ ಸಮಿತಿಯ ಮತ್ತು ವೈಜ್ಞಾನಿಕ ತಂಡದ ಸದಸ್ಯರು ಹಿತಾಸಕ್ತಿಗೆ ಸಂಬಂಧಿಸಿದಂತೆ ಮಾಡಿದ ವಾರ್ಷಿಕ ಘೋಷಣೆಗಳನ್ನು ಮತ್ತು ಸಭೆಗಳ ಕಾರ್ಯಸೂಚಿಗಳಲ್ಲಿರುವ ಬಾಬುಗಳಿಗೆ ಸಂಬಂಧಿಸಿದಂತೆ ಹಿತಾಸಕ್ತಿಯ ಬಗ್ಗೆ ಮಾಡಿದ ಘೋಷಣೆಗಳು ಯಾವುವಾದರೂ ಇದ್ದರೆ, ಆ ಘೋಷಣೆಗಳನ್ನು;

(ಸಿ) ತಾನು ಮಾಡಿದ ವೈಜ್ಞಾನಿಕ ಅಧ್ಯಯನಗಳ ಫಲಿತಾಂಶಗಳನ್ನು;

(ಡಿ) ತನ್ನ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿಯನ್ನು

– ಅನುಚಿತ ವಿಳಂಬ ಮಾಡದೆ ಕೂಡಲೇ ಸಾರ್ವಜನಿಕವಾಗಿ ತಿಳಿಯಪಡಿಸತಕ್ಕದ್ದು.

(5) ಆಹಾರ ಪ್ರಾಧಿಕಾರವು, ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳಿಗೆ ಸಂಬಂಧಪಟ್ಟ ವಿಷಯಗಳ ಮೇಲೆ, ಆಹಾರ ಸುರಕ್ಷತಾ ಆಯುಕ್ತನಿಗೆ ಕಾಲ ಕಾಲಕ್ಕೆ ನಿರ್ದೇಶನಗಳನ್ನು ನೀಡಬಹುದು ಆತನು ಈ ಅಧಿನಿಯಮದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಅಂಥ ನಿರ್ದೇಶನಗಳಿಗೆ ಬದ್ಧನಾಗಿರತಕ್ಕದ್ದು.

(6) ಆಹಾರ ಪ್ರಾಧಿಕಾರವು, ತಾನು ಸ್ವೀಕರಿಸುವ ಯಾವ ರಹಸ್ಯ ಮಾಹಿತಿಯನ್ನು ರಹಸ್ಯವಾಗಿಡಬೇಕೆಂದು ಕೋರಲಾಗಿದೆಯೋ ಅಥವಾ ಅದಕ್ಕೆ ಒಪ್ಪಿಕೊಳ್ಳಲಾಗಿದೆಯೋ ಆ ರಹಸ್ಯ ಮಾಹಿತಿಯನ್ನು, ಆ ಯಾವ ರಹಸ್ಯ ಮಾಹಿತಿಯನ್ನು ಸಾರ್ವಜನಿಕರ ಆರೋಗ್ಯವನ್ನು ಸಂರಕ್ಷಿಸುವ ದೃಷ್ಟಿಯಿಂದ ಬಹಿರಂಗಪಡಿಸಲೇಬೇಕೆಂದು ಸಂದರ್ಭಗಳು ಅಗತ್ಯಪಡಿಸಿದರೆ, ಆ ಮಾಹಿತಿಯ ಹೊರತು, ಮೂರನೇ ಪಕ್ಷಕಾರನಿಗೆ ಬಹಿರಂಗಪಡಿಸತಕ್ಕದ್ದಲ್ಲ ಅಥವಾ ಬಹಿರಂಗಪಡಿಸುವಂತೆ ಮಾಡತಕ್ಕದ್ದಲ್ಲ.

**17. ಆಹಾರ ಪ್ರಾಧಿಕಾರದ ವ್ಯವಹರಣೆಗಳು.–** (1) ಆಹಾರ ಪ್ರಾಧಿಕಾರವು, ಅಧ್ಯಕ್ಷನು ನಿರ್ದೇಶಿಸಬಹುದಾದಂಥ ಕಾಲದಲ್ಲಿ, ಪ್ರಧಾನ ಕಚೇರಿಯಲ್ಲಿ ಅಥವಾ ಅದರ ಯಾವುದೇ ಕಚೇರಿಯಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅದರ ಸಭೆಗಳಲ್ಲಿ ಕೋರಂ ಒಳಗೊಂಡಂತೆ) ಕಾರ್ಯಕಲಾಪಕ್ಕೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು ಆಹಾರ ಪ್ರಾಧಿಕಾರದ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಈ ಬಗ್ಗೆ ಅಧ್ಯಕ್ಷನು ನಾಮನಿರ್ದೇಶಿಸಿದ ಇತರ ಯಾರೇ ಸದಸ್ಯನು ಮತ್ತು ಅಂಥ ನಾಮನಿರ್ದೇಶನ ಮಾಡಿರದಿದ್ದರೆ ಅಥವಾ ಅಧ್ಯಕ್ಷನು ಇಲ್ಲದಿರುವಾಗ ಹಾಜರಿರುವ ಸದಸ್ಯರು ತಮ್ಮ ಪೈಕಿಯಿಂದ ಆಯ್ಕೆ ಮಾಡಿದ ಯಾರೇ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಆಹಾರ ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು, ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹು ಮತದ ಮೂಲಕ ನಿರ್ಧರಿಸತಕ್ಕದ್ದು ಮತ್ತು ಮತಗಳು ಸಮಸಮವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಆಹಾರ ಪ್ರಾಧಿಕಾರದ ಎಲ್ಲ ಆದೇಶಗಳು ಮತ್ತು ನಿರ್ಣಯಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಅಧಿಪ್ರಮಾಣೀಕರಿಸತಕ್ಕದ್ದು.

(5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಆಹಾರ ಪ್ರಾಧಿಕಾರದ ಸಭೆಗಳಲ್ಲಿ ಭಾಗವಹಿಸತಕ್ಕದ್ದು ಆದರೆ ಮತ ನೀಡುವ ಹಕ್ಕು ಇರುವುದಿಲ್ಲ.

(6) ಆಹಾರ ಪ್ರಾಧಿಕಾರವು, ಅದರ ಸಭೆಗಳಿಗೆ ಹಾಜರಾಗಲು ವೈಜ್ಞಾನಿಕ ಸಮಿತಿಯ ಅಧ್ಯಕ್ಷನನ್ನು ಆಹ್ವಾನಿಸಬಹುದು ಆದರೆ ಮತ ನೀಡುವ ಹಕ್ಕು ಇರುವುದಿಲ್ಲ.

(7) ಆಹಾರ ಪ್ರಾಧಿಕಾರದ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಗಳನ್ನು ಯಾವುದೇ ಖಾಲಿ ಸ್ಥಾನವು ಇರುವ ಅಥವಾ ಆಹಾರ ಪ್ರಾಧಿಕಾರದ ರಚನೆಯಲ್ಲಿ ನ್ಯೂನ್ಯತೆಯಿದೆಯೆಂಬ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ ಅಥವಾ ಅಸಿಂಧುಗೊಳಿಸತಕ್ಕದ್ದಲ್ಲ.

## ಅಧ್ಯಾಯ III

## ಆಹಾರ ಸುರಕ್ಷತೆಯ ಸಾಮಾನ್ಯ ತತ್ವಗಳು

**18. ಅಧಿನಿಯಮದ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಸಾಮಾನ್ಯ ತತ್ವಗಳು.–** (1) ಕೇಂದ್ರ ಸರ್ಕಾರ, ಸಂದರ್ಭಾನುಸಾರ, ರಾಜ್ಯ ಸರ್ಕಾರಗಳು, ಆಹಾರ ಪ್ರಾಧಿಕಾರ ಮತ್ತು ಇತರ ಏಜೆನ್ಸಿಗಳು ಈ ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಕ್ಕೆ ತರುವಾಗ, ಈ ಕೆಳಕಂಡ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು, ಎಂದರೆ:–

(ಎ) ಆಹಾರ ಸುರಕ್ಷತಾ ಗುಣಮಟ್ಟಗಳು ಮತ್ತು ಪದ್ಧತಿಗಳಿಗೆ ಸಂಬಂಧಿಸಿದಂತೆ ಎಲ್ಲ ಬಗೆಯ ಆಹಾರ ಪದಾರ್ಥದ ವ್ಯಾಪಾರ ವೃತ್ತಿಯಲ್ಲಿನ ನ್ಯಾಯೋಚಿತ ಪದ್ಧತಿಗಳನ್ನು ಒಳಗೊಂಡಂತೆ, ಮಾನವ ಜೀವ ಮತ್ತು ಆರೋಗ್ಯ ಸಂರಕ್ಷಣೆಯ ಯುಕ್ತ ಮಟ್ಟವನ್ನು ಮತ್ತು ಬಳಕೆದಾರರ ಹಿತಾಸಕ್ತಿಗಳ ಸಂರಕ್ಷಣೆಯನ್ನು ಸಾಧಿಸಲು ಪ್ರಯತ್ನಿಸುವುದು;

(ಬಿ) ಅಪಾಯ ನಿರ್ಧರಣೆಯ ಫಲಿತಾಂಶಗಳನ್ನು ಮತ್ತು ಪರ್ಯಾಲೋಚನೆಯಲ್ಲಿರುವ ವಿಷಯಕ್ಕೆ ಯಾವ ಇತರ ಸಂಗತಿಗಳು ಸುಸಂಗತವಾಗಿವೆಯೆಂದು ಆಹಾರ ಪ್ರಾಧಿಕಾರವು ಅಭಿಪ್ರಾಯಪಡುವುದೋ ಆ ಇತರ ಸಂಗತಿಗಳನ್ನು ಪರಿಸ್ಥಿತಿಗಳು ಸುಸಂಗತವಾಗಿದ್ದರೆ ವಿನಿಯಮಗಳ ಸಾಮಾನ್ಯ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಆ ಇತರ ಸಮಿತಿಗಳನ್ನು ಗಣನೆಗೆ ತೆಗೆದುಕೊಳ್ಳುವುದೊ ಸೇರಿದಂತೆ ಅಪಾಯ ನಿರ್ವಹಣೆ ಕಾರ್ಯವನ್ನು ಸಾಧಿಸುವುದು;

(ಸಿ) ಯಾವುದೇ ನಿರ್ದಿಷ್ಟ ಸಂದರ್ಭಗಳಲ್ಲಿ ಲಭ್ಯವಿರುವ ಮಾಹಿತಿಯ ನಿರ್ಧರಣೆಯ ಆಧಾರದ ಮೇಲೆ ಆರೋಗ್ಯದ ಮೇಲೆ ಹಾನಿಕಾರಕ ಪರಿಣಾಮಗಳು ಉಂಟಾಗುವ ಸಾಧ್ಯತೆಯನ್ನು ಗುರ್ತಿಸಲಾಗಿರುವಲ್ಲಿ, ಆದರೆ ವೈಜ್ಞಾನಿಕ ಅನಿಶ್ಚಿತತೆಯು ಮುಂದುವರೆದಿರುವಲ್ಲಿ, ಹೆಚ್ಚು ವ್ಯಾಪಕವಾದ ಅಪಾಯದ ನಿರ್ಧರಣೆಗಾಗಿ ಹೆಚ್ಚಿನ ವೈಜ್ಞಾನಿಕ ಮಾಹಿತಿಯು ಲಭ್ಯವಾಗುವವರೆಗೆ, ಆರೋಗ್ಯ ಸುರಕ್ಷತೆಯ ಯುಕ್ತ ಮಟ್ಟವನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾದ ತಾತ್ಕಾಲಿಕ ಅಪಾಯ ನಿರ್ವಹಣಾ ಕ್ರಮಗಳನ್ನು ಅಳವಡಿಸಿಕೊಳ್ಳಬಹುದು;

(ಡಿ) ಖಂಡ (ಸಿ)ಯ ಆಧಾರದ ಮೇಲೆ ಅಳವಡಿಸಿಕೊಂಡ ಕ್ರಮಗಳು ಪ್ರಮಾಣಾನುಸಾರಿಯಾಗಿರತಕ್ಕದ್ದು, ಪ್ರರ್ಯಾಲೋಚನೆಯಲ್ಲಿರುವ ವಿಷಯದಲ್ಲಿ ಸೂಕ್ತವೆಂದು ಮತ್ತು ಸಮಂಜಸವೆಂದು ಪರಿಗಣಿಸಲಾದ ತಾಂತ್ರಿಕ ಮತ್ತು ಹಣಕಾಸಿನ ಸಾಧ್ಯತೆಯನ್ನು ಮತ್ತು ಇತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಆರೋಗ್ಯ ಸುರಕ್ಷತೆಯ ಯುಕ್ತ ಮಟ್ಟವನ್ನು ಸಾಧಿಸಲು ಅಗತ್ಯಪಡಿಸಿದುದಕ್ಕಿಂತ ಹೆಚ್ಚಿನ ಯಾವುದೇ ವ್ಯಾಪಾರ ನಿರ್ಬಂಧ ಕ್ರಮಗಳಾಗಿರತಕ್ಕದ್ದಲ್ಲ;

(ಇ) ಅಳವಡಿಸಿಕೊಂಡ ಕ್ರಮಗಳನ್ನು ಜೀವಕ್ಕೆ ಅಥವಾ ಆರೋಗ್ಯಕ್ಕೆ ಉಂಟಾಗುವುದೆಂದು ಗುರುತಿಸಲಾಗುವ ಅಪಾಯದ ಸ್ವರೂಪವನ್ನು ಮತ್ತು ವೈಜ್ಞಾನಿಕ ಅನಿಶ್ಚಿತತೆಯನ್ನು ಸ್ಪಷ್ಟಪಡಿಸಲು ಮತ್ತು ಹೆಚ್ಚು ವ್ಯಾಪಕವಾದ ಅಪಾಯ ನಿರ್ಧರಣೆಯನ್ನು ಮಾಡಲು ಅಗತ್ಯವಾದ ವೈಜ್ಞಾನಿಕ ಮಾಹಿತಿಯ ರೀತಿಯನ್ನು ಆಧರಿಸಿ ಯುಕ್ತ ಕಾಲಾವಧಿಯೊಳಗೆ ಪುನರವಲೋಕನ ಮಾಡತಕ್ಕದ್ದು;

(ಎಫ್) ಆಹಾರವು ಮಾನವ ಆರೋಗ್ಯಕ್ಕೆ ಅಪಾಯವನ್ನುಂಟು ಮಾಡಬಹುದೆಂದು ಸಂಶಯ ಪಡಲು ಯುಕ್ತ ಕಾರಣಗಳಿರುವ ಸಂದರ್ಭಗಳಲ್ಲಿ, ಅಪಾಯದ ಸ್ವರೂಪವನ್ನು, ಗಂಭೀರತೆಯನ್ನು ಮತ್ತು ವ್ಯಾಪ್ತಿಯನ್ನು ಆಧರಿಸಿ ಆಹಾರ ಪ್ರಾಧಿಕಾರವು ಮತ್ತು ಆಹಾರ ಸುರಕ್ಷತಾ ಆಯುಕ್ತರು, ಅಪಾಯವನ್ನುಂಟು ಮಾಡಬಹುದಾದ

ಆಹಾರವನ್ನು ಅಥವಾ ಆಹಾರ ಬಗೆಯನ್ನು ಮತ್ತು ಅಪಾಯವನ್ನು ತಡೆಗಟ್ಟಲು, ಕಡಿಮೆ ಮಾಡಲು ಅಥವಾ ನಿವಾರಿಸಲು ತೆಗೆದುಕೊಂಡ ಅಥವಾ ತೆಗೆದುಕೊಳ್ಳಲಿರುವ ಕ್ರಮಗಳನ್ನು ಸಾಧ್ಯವಾದಷ್ಟು ಪೂರ್ಣ ಪ್ರಮಾಣದಲ್ಲಿ ಗುರುತಿಸಿ ಆರೋಗ್ಯಕ್ಕೆ ಉಂಟಾಗುವ ಅಪಾಯದ ಸ್ವರೂಪವನ್ನು ಸಾರ್ವಜನಿಕರಿಗೆ ತಿಳಿಸಲು ಯುಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು;

(ಜಿ) ಯಾವ ಆಹಾರವು, ಆಹಾರ ಸುರಕ್ಷತೆಯ ಅಗತ್ಯತೆಗಳನ್ನು ಪಾಲಿಸಲು ವಿಫಲವಾಗಿದೆಯೋ ಆ ಯಾವುದೇ ಆಹಾರವು, ಅದೇ ವರ್ಗದ ಅಥವಾ ವಿವರಣೆಯ ಆಹಾರದ ಗುಂಪಿನ, ರಾಶಿಯ ಅಥವಾ ರವಾನೆ ಸರಕಿನ ಭಾಗವಾಗಿರುವಲ್ಲಿ ತದ್ವಿರುದ್ಧವಾದದು ಸಾಬೀತಾಗುವವರೆಗೆ, ಆ ಗುಂಪಿನಲ್ಲಿನ, ರಾಶಿಯಲ್ಲಿನ ಅಥವಾ ರವಾನೆ ಸರಕಿನಲ್ಲಿನ ಎಲ್ಲಾ ಆಹಾರವು ಆ ಅಗತ್ಯತೆಗಳನ್ನು ಪಾಲಿಸಲು ವಿಫಲವಾಗಿದೆಯೆಂದು ಭಾವಿಸತಕ್ಕದ್ದು.

(2) ಆಹಾರ ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ವಿನಿಯಮಗಳನ್ನು ರೂಪಿಸುವಾಗ ಅಥವಾ ಗುಣಮಟ್ಟಗಳನ್ನು ನಿರ್ದಿಷ್ಟಪಡಿಸುವಾಗ,-

(ಎ) (i) ಕೃಷಿ ಪದ್ಧತಿಗಳು, ಮತ್ತು ನಿರ್ವಹಣೆ, ದಾಸ್ತಾನು ಮತ್ತು ಸಾಗಣೆ ಪರಿಸ್ಥಿತಿಗಳು ಒಳಗೊಂಡಂತೆ ದೇಶದಲ್ಲಿ ಪ್ರಚಲಿತವಿರುವ ಪದ್ಧತಿಗಳನ್ನು ಮತ್ತು ಪರಿಸ್ಥಿತಿಗಳನ್ನು; ಮತ್ತು

(ii) ಅಂತರರಾಷ್ಟ್ರೀಯ ಗುಣಮಟ್ಟಗಳು ಅಥವಾ ಪದ್ಧತಿಗಳು ಅಸ್ತಿತ್ವದಲ್ಲಿರುವಲ್ಲಿ ಅಥವಾ ಅವುಗಳನ್ನು ರೂಪಿಸುವ ಕಾರ್ಯ ಪ್ರಗತಿಯಲ್ಲಿರುವಲ್ಲಿ ಅಂತರರಾಷ್ಟ್ರೀಯ ಗುಣಮಟ್ಟಗಳನ್ನು ಅಥವಾ ಪದ್ಧತಿಗಳನ್ನು ಸಲುವಳಿಯಲ್ಲಿರುವ ಅಂಥ ಪದ್ಧತಿಗಳನ್ನು ಅಥವಾ ಪರಿಸ್ಥಿತಿಗಳನ್ನು ಅಥವಾ ಅಂತರರಾಷ್ಟ್ರೀಯ ಗುಣಾಮಟ್ಟಗಳನ್ನು ಅಥವಾ ಪದ್ಧತಿಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅಂಥ ವಿನಿಯಮಗಳ ಉದ್ದೇಶಗಳನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ ಪರಿಣಾಮಕಾರಿಯಾದ ಅಥವಾ ಸಮುಚಿತವಾದ ಮಾರ್ಗಗಳಾಗುವುದಿಲ್ಲ ಎಂದು ಅದು ಅಭಿಪ್ರಾಯಪಟ್ಟ ಹೊರತು ಅಥವಾ ವೈಜ್ಞಾನಿಕ ಸಮರ್ಥನೆ ಇರುವಲ್ಲಿ ಹೊರತು, ಅಥವಾ ದೇಶದಲ್ಲಿ ಸಮುಚಿತವೆಂದು ನಿರ್ಧರಿಸಲಾದುದಕ್ಕಿಂತ ಭಿನ್ನವಾದ ರಕ್ಷಣೆಯ ಮಟ್ಟವನ್ನು ಅವು ನೀಡುವಂತಿದ್ದಲ್ಲಿ ಹೊರತು

– ಗಣನೆಗೆ ತೆಗೆದುಕೊಳ್ಳತಕ್ಕದ್ದು;

(ಬಿ) ಅಪಾಯದ ವಿಶ್ಲೇಷಣೆಯು ಪ್ರಕರಣದ ಸಂದರ್ಭಗಳಿಗೆ ಅಥವಾ ಸ್ವರೂಪಕ್ಕೆ ಯುಕ್ತವಾಗಿಲ್ಲವೆಂದು ಅದು ಅಭಿಪ್ರಾಯಪಟ್ಟ ಹೊರತು, ಅಂಥ ಅಪಾಯ ವಿಶ್ಲೇಷಣೆಯ ಆಧಾರದ ಮೇಲೆ ಆಹಾರ ಗುಣಮಟ್ಟಗಳನ್ನು ನಿರ್ಧರಿಸತಕ್ಕದ್ದು;

(ಸಿ) ಲಭ್ಯವಿರುವ ವೈಜ್ಞಾನಿಕ ಪುರಾವೆಯ ಆಧಾರದ ಮೇಲೆ ಮತ್ತು ಸ್ವತಂತ್ರವಾದ, ವಸ್ತುನಿಷ್ಠವಾದ ಮತ್ತು ಪಾರದರ್ಶಕವಾದ ರೀತಿಯಲ್ಲಿ ಅಪಾಯದ ನಿರ್ಧರಣೆಗೆ ಕಾರ್ಯವನ್ನು ಕೈಗೊಳ್ಳತಕ್ಕದ್ದು;

(ಡಿ) ಆಹಾರ ಸುರಕ್ಷತೆಗೆ ಅಥವಾ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವ ಅಥವಾ ತಿದ್ದುಪಡಿ ಮಾಡುವ ತುರ್ತು ಇದೆ ಎಂದು ಅದು ಅಭಿಪ್ರಾಯಪಟ್ಟ

ಹೊರತು, ವಿನಿಯಮಗಳನ್ನು ಸಿದ್ಧಪಡಿಸುವಾಗ, ಮೌಲ್ಯ ನಿರ್ಣಯ ಮಾಡುವಾಗ ಮತ್ತು ಪರಿಷ್ಕರಣೆ ಮಾಡುವಾಗ ನೇರವಾಗಿ ಅಥವಾ ಪಂಚಾಯತಿಗಳ ಎಲ್ಲ ಹಂತಗಳೂ ಒಳಗೊಂಡಂತೆ ಪ್ರಾತಿನಿಧಿಕ ಸಂಸ್ಥೆಗಳ ಮೂಲಕ ಮುಕ್ತ ಮತ್ತು ಪಾರದರ್ಶಕ ಸಾರ್ವಜನಿಕ ಸಮಾಲೋಚನೆ ಮಾಡಿರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು. ತುರ್ತು ಸಂದರ್ಭದಲ್ಲಿ ಅಂಥ ಸಮಾಲೋಚನೆ ಮಾಡುವುದಕ್ಕೆ ವಿನಾಯಿತಿ ನೀಡಬಹುದು:

ಪರಂತು, ಅಂಥ ವಿನಿಯಮವು ಆರು ತಿಂಗಳುಗಳಿಗಿಂತ ಹೆಚ್ಚಿಗೆ ಜಾರಿಯಲ್ಲಿರತಕ್ಕದ್ದಲ್ಲ.

(ಇ) ಬಳಕೆದಾರರರ ಹಿತಾಸಕ್ತಿಯ ಸಂರಕ್ಷಣೆಯನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅವರು ಸೇವಿಸುವ ಆಹಾರಗಳಿಗೆ ಸಂಬಂಧಪಟ್ಟಂತೆ ಬುದ್ಧಿವಂತಿಕೆಯಿಂದ ಆಯ್ಕೆಗಳನ್ನು ಮಾಡಿಕೊಳ್ಳಲು ಬಳಕೆದಾರರಿಗೆ ಆಧಾರವನ್ನು ಒದಗಿಸತಕ್ಕದ್ದು;

(ಎಫ್) (i) ಬಳಕೆದಾರನನ್ನು ತಪ್ಪುದಾರಿಗೆ ಎಳೆಯುವ ಅಥವಾ ಬಳಕೆದಾರನಿಗೆ ಹಾನಿಯುಂಟು ಮಾಡುವ ಮೋಸದ, ವಂಚನೆಯ ಅಥವಾ ಅನುಚಿತವಾದ ವ್ಯಾಪಾರ ಪದ್ಧತಿಗಳನ್ನು; ಮತ್ತು

(ii) ಸುರಕ್ಷಿತವಲ್ಲದ ಅಥವಾ ಮಾಲಿನ್ಯಕರಕವಾದ ಅಥವಾ ಕಳಪೆ ಗುಣಮಟ್ಟದ ಆಹಾರವನ್ನು

– ತಡೆಗಟ್ಟುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳು ಯಾರೇ ರೈತನಿಗೆ ಅಥವಾ ಮೀನುಗಾರನಿಗೆ ಅಥವಾ ಕೃಷಿ ಕಾರ್ಯಾಚರಣೆಗಳಿಗೆ ಅಥವಾ ಬೆಳೆಗಳಿಗೆ ಅಥವಾ ಜಾನುವಾರುಗಳಿಗೆ ಅಥವಾ ಮೀನು ಕೃಷಿಗೆ ಮತ್ತು ಬೇಸಾಯದಲ್ಲಿ ಬಳಸಿದ ಅಥವಾ ಉತ್ಪಾದಿಸಿದ ಸಾಮಗ್ರಿಗಳಿಗೆ ಅಥವಾ ಜಮೀನು ಸಾಗುವಳಿ ಹಂತದಲ್ಲಿ ರೈತನು ಉತ್ಪಾದಿಸಿದ ಬೆಳೆಗಳ ಉತ್ಪನ್ನಗಳಿಗೆ ಅಥವಾ ಮೀನುಗಾರನು ತನ್ನ ಕಾರ್ಯಾಚರಣೆಗಳಲ್ಲಿ ಉತ್ಪಾದಿಸಿದ ಉತ್ಪನ್ನಗಳಿಗೆ ಅನ್ವಯಿಸತಕ್ಕದ್ದಲ್ಲ.

## ಅಧ್ಯಾಯ IV

### ಆಹಾರ ಪದಾರ್ಥಗಳಿಗೆ ಸಂಬಂಧಿಸಿದ ಸಾಮಾನ್ಯ ಉಪಬಂಧಗಳು

19. **ಆಹಾರ ಸಂಯೋಜಕದ ಅಥವಾ ಸಂಸ್ಕರಣ ಸಹಾಯಕ ಸಾಮಗ್ರಿಯ ಬಳಕೆ.–** ಯಾವುದೇ ಆಹಾರ ಪದಾರ್ಥವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ವಿನಿಯಮಗಳಿಗೆ ಅನುಸಾರವಾಗಿ ಯಾವುದೇ ಆಹಾರ ಸಂಯೋಜಕವು ಅಥವಾ ಸಂಸ್ಕರಣ ಸಹಾಯಕ ಸಾಮಗ್ರಿಯು ಇದ್ದ ಹೊರತು ಅದನ್ನು ಒಳಗೊಂಡಿರತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಸಂಸ್ಕರಣ ಸಹಾಯಕ ಸಾಮಗ್ರಿ" ಎಂದರೆ, ಸಲಕರಣೆಯನ್ನು ಅಥವಾ ಬಳಕೆಯ ಪಾತ್ರೆಗಳನ್ನು ಒಳಗೊಂಡಿರದ, ಮತ್ತು ಅದನ್ನೇ ಆಹಾರ ಘಟಕಾಂಶವಾಗಿ ಬಳಸದ, ಉಪಚಾರದ ಅಥವಾ ಸಂಸ್ಕರಣೆಯ ಸಮಯದಲ್ಲಿ ಕೆಲಮಟ್ಟಿನ ತಾಂತ್ರಿಕ ಉದ್ದೇಶವನ್ನು ಈಡೇರಿಸುವ ಸಲುವಾಗಿ ಕಚ್ಚಾ ವಸ್ತುಗಳ, ಆಹಾರಗಳ ಅಥವಾ ಅದರ ಘಟಕಾಂಶಗಳ ಸಂಸ್ಕರಣೆಯಲ್ಲಿ ಬಳಸಲಾಗುವ ಮತ್ತು ಅಂತಿಮ ಉತ್ಪನ್ನದಲ್ಲಿ ಉಳಿಕೆಗಳು ಅಥವಾ ಜನ್ಯ

ವಸ್ತುಗಳು, ಅನುದ್ದೇಶಿತವಾಗಿ ಆದರೆ ಅನಿವಾರ್ಯವಾಗಿ ಇರುವುದಕ್ಕೆ ಕಾರಣವಾಗಬಹುದಾದ ಯಾವುದೇ ಪದಾರ್ಥ ಅಥವಾ ವಸ್ತು.

20. **ಮಾಲಿನ್ಯಕಾರಕಗಳು, ಸ್ವಾಭಾವಿಕವಾಗಿ ಸಂಭವಿಸುವ ವಿಷ ಪದಾರ್ಥಗಳು, ಭಾರ ಲೋಹಗಳು, ಇತ್ಯಾದಿ.–** ಯಾವುದೇ ಆಹಾರ ಪದಾರ್ಥವು, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಲಾದಂಥ ಪ್ರಮಾಣಗಳಿಗಿಂತ ಹೆಚ್ಚಾಗಿ ಯಾವುದೇ ಮಾಲಿನ್ಯಕಾರಕವನ್ನು, ಸ್ವಾಭಾವಿಕವಾಗಿ ಸಂಭವಿಸುವ ವಿಷ ಪದಾರ್ಥಗಳನ್ನು ಅಥವಾ ಜೀವಾಣು ವಿಷಗಳನ್ನು ಅಥವಾ ಹಾರ್ಮೋನನ್ನು ಅಥವಾ ಭಾರ ಲೋಹಗಳನ್ನು ಒಳಗೊಂಡಿರತಕ್ಕದ್ದಲ್ಲ.

21. **ಕ್ರಿಮಿನಾಶಕಗಳು, ಪಶುವೈದ್ಯಕೀಯ ಔಷಧಗಳ ಉಳಿಕೆಗಳು, ಜೀವನಿರೋಧಕಗಳ ಉಳಿಕೆಗಳು ಮತ್ತು ಸೂಕ್ಷ್ಮ ಜೈವಿಕ ಅಂಶಗಳು.–** (1) ಯಾವುದೇ ಆಹಾರ ಪದಾರ್ಥವು, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ತಾಳಿಕೆಯ ಮಿತಿಗಳಿಗಿಂತ ಹೆಚ್ಚಾಗಿ ಕೀಟನಾಶಕಗಳ ಅಥವಾ ಕ್ರಿಮಿನಾಶಕಗಳ ಉಳಿಕೆಗಳನ್ನು, ಪಶುವೈದ್ಯಕೀಯ ಔಷಧಗಳ ಉಳಿಕೆಗಳನ್ನು, ಜೀವ ನಿರೋಧಕ ಉಳಿಕೆಗಳನ್ನು, ದ್ರಾವಕದ ಉಳಿಕೆಗಳನ್ನು, ಔಷಧ ಪ್ರಭಾವವನ್ನು ಕ್ರಿಯಾಶೀಲಗೊಳಿಸುವ ಪದಾರ್ಥಗಳನ್ನು ಮತ್ತು ಸೂಕ್ಷ್ಮ ಜೈವಿಕ ಅಂಶಗಳನ್ನು ಒಳಗೊಂಡಿರತಕ್ಕದ್ದಲ್ಲ.

(2) ಕೀಟನಾಶಕಗಳ ಅಧಿನಿಯಮ, 1968ರ (1968ರ 46) ಮೇರೆಗೆ ನೋಂದಾಯಿಸಲಾದ ಮತ್ತು ಅನುಮೋದಿಸಲಾದ ಸೋಂಕು ನಿವಾರಕಗಳನ್ನು ಹೊರತುಪಡಿಸಿ ಆಹಾರ ಪದಾರ್ಥದ ಮೇಲೆ ನೇರವಾಗಿ ಕೀಟನಾಶಕವನ್ನು ಬಳಸತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(1) "ಕ್ರಿಮಿನಾಶಕದ ಉಳಿಕೆ" ಎಂದರೆ, ಕ್ರಿಮಿನಾಶಕವನ್ನು ಬಳಸುವುದರ ಪರಿಣಾಮವಾಗಿ ಆಹಾರದಲ್ಲಿ ಯಾವುದೇ ನಿರ್ದಿಷ್ಟಪಡಿಸಿದ ಪದಾರ್ಥ ಮತ್ತು ಪರಿವರ್ತನಾ ಉತ್ಪನ್ನಗಳು, ಚಯಾಪಚಯಗಳು, ಪ್ರತಿಕ್ರಿಯಾ ಉತ್ಪನ್ನಗಳು ಮತ್ತು ವಿಷಶಾಸ್ತ್ರೀಯ ಮಹತ್ವವುಳ್ಳವೆಂದು ಪರಿಗಣಿಸುವ ಕಶ್ಮಲಗಳಂಥ ಕೀಟನಾಶಕಗಳ ಯಾವುದೇ ಜನ್ಯ ವಸ್ತುಗಳನ್ನು ಒಳಗೊಳ್ಳುತ್ತವೆ ಮತ್ತು ಪರಿಸರದಿಂದ ಆಹಾರಕ್ಕೆ ಸೇರುವಂಥ ಉಳಿಕೆಗಳೂ ಸಹ ಒಳಗೊಳ್ಳುತ್ತವೆ;

(2) "ಪಶು ವೈದ್ಯಕೀಯ ಔಷಧಗಳ ಉಳಿಕೆಗಳು" ಯಾವುದೇ ಪ್ರಾಣಿ ಉತ್ಪನ್ನದ ಯಾವುದೇ ಖಾದ್ಯಯೋಗ್ಯ ಭಾಗದಲ್ಲಿ ಇರುವ ಮೂಲ ಮಿಶ್ರಣಗಳನ್ನು ಅಥವಾ ಅವುಗಳ ಚಯಾಪಚಯಗಳನ್ನು ಅಥವಾ ಅವೆರಡನ್ನೂ ಒಳಗೊಳ್ಳುತ್ತವೆ ಮತ್ತು ಸಂಬಂಧಿಸಿದ ಪಶುವೈದ್ಯಕೀಯ ಔಷಧದಲ್ಲಿ ಸೇರಿರುವ ಕಶ್ಮಲಗಳ ಉಳಿಕೆಗಳನ್ನು ಒಳಗೊಳ್ಳುತ್ತವೆ.

22. **ತಳಿವಿಜ್ಞಾನದ ಮೂಲಕ ಮಾರ್ಪಡಿಸಿದ ಆಹಾರಗಳು, ಸಾವಯವ ಆಹಾರಗಳು, ಕ್ರಿಯಾತ್ಮಕ ಆಹಾರಗಳು, ಮಾರಾಟದ ಸ್ವಾಮ್ಯ ಪಡೆದ ಆಹಾರಗಳು, ಮೊದಲಾದವು.–** ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ವಿನಿಯಮಗಳ ಮೇರೆಗೆ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾರೇ ವ್ಯಕ್ತಿಯು ಯಾವುದೇ ಹೊಸ ಬಗೆಯ ಆಹಾರವನ್ನು ತಳಿವಿಜ್ಞಾನದ ಮೂಲಕ ಮಾಡಿಸಿದ ಆಹಾರ ಪದಾರ್ಥಗಳನ್ನು, ವಿಕಿರಣ ಪ್ರಭಾವಕ್ಕೆ ಒಳಗಾದ ಆಹಾರವನ್ನು, ಸಾವಯವ ಆಹಾರಗಳನ್ನು, ವಿಶೇಷ ಪಥ್ಯಾಹಾರಕ್ಕಾಗಿ ಬಳಸುವ ಆಹಾರಗಳನ್ನು, ಕ್ರಿಯಾತ್ಮಕ ಆಹಾರಗಳನ್ನು, ಪೋಷಕಾಂಶಗಳನ್ನು, ಆರೋಗ್ಯ ಪೂರಕ ಮಾರಾಟದ ಸ್ವಾಮ್ಯ ಪಡೆದ ಆಹಾರಗಳನ್ನು ಮತ್ತು ಈ ಬಗ್ಗೆ ಕೇಂದ್ರ ಸರ್ಕಾರವು

ಅಧಿಸೂಚಿಸಬಹುದಾದಂಥ ಇತರ ಆಹಾರ ಪದಾರ್ಥಗಳನ್ನು ತಯಾರಿಸತಕ್ಕದ್ದಲ್ಲ, ವಿತರಣೆ ಮಾಡತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ಆಮದು ಮಾಡಿಕೊಳ್ಳತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(1) "ವಿಶೇಷ ಪಥ್ಯಾಹಾರಕ್ಕಾಗಿ ಬಳಸುವ ಆಹಾರಗಳು ಅಥವಾ ಕ್ರಿಯಾತ್ಮಕ ಆಹಾರಗಳು ಅಥವಾ ಪೋಷಕಾಂಶ ವಸ್ತುಗಳು ಅಥವಾ ಪೂರಕ ಆಹಾರ ಪದಾರ್ಥಗಳು" ಎಂದರೆ:–

(ಎ) ನಿರ್ದಿಷ್ಟವಾದ ದೈಹಿಕ ಅಥವಾ ಶಾರೀರಿಕ ಸ್ಥಿತಿಯ ಅಥವಾ ನಿರ್ದಿಷ್ಟ ರೋಗಗಳ ಅಥವಾ ಅಸ್ವಸ್ಥತೆಗಳ ಕಾರಣದಿಂದಾಗಿ ಉಂಟಾಗುವ ನಿರ್ದಿಷ್ಟ ಪಥ್ಯಾಹಾರ ಅಗತ್ಯತೆಗಳನ್ನು ಪೂರೈಸಲು ವಿಶೇಷವಾಗಿ ಸಂಸ್ಕರಿಸಿದ ಅಥವಾ ರೂಪಿಸಿದ ಮತ್ತು ಹಾಗೆಯೇ ನಿರೂಪಿಸಿರುವ ಆಹಾರಗಳು ಮತ್ತು ಅವುಗಳಲ್ಲಿ, ಈ ಆಹಾರ ಪದಾರ್ಥಗಳ ಸಂಯೋಜನೆಯು ಸದೃಶ ಬಗೆಯ ಸಾಮಾನ್ಯ ಆಹಾರಗಳು ಇದ್ದರೆ, ಅಂಥ ಆಹಾರಗಳ ಸಂಯೋಜನೆಗಳಿಗಿಂತಲೂ ಗಣನೀಯವಾಗಿ ಭಿನ್ನವಾದುದಾಗಿರಲೇಬೇಕು ಮತ್ತು ಈ ಕೆಳಗಿನ ಘಟಕಾಂಶಗಳಲ್ಲಿ ಒಂದು ಘಟಕಾಂಶವನ್ನು ಒಳಗೊಂಡಿರಬಹುದು, ಎಂದರೆ:

(i) ನೀರಿನಲ್ಲಿ ಸಾರೀಕರಿಸಿದ ಅಥವಾ ಸಾಂದ್ರೀಕರಿಸಿದ, ಈಥೈಲ್ ಆಲ್ಕೋಹಾಲ್, ಅಥವಾ ಹೈಡ್ರೋ ಆಲ್ಕೋಹಾಲಿಕ್ ಒಂದರಿಂದಲೇ ಅಥವಾ ಎರಡರ ಸಂಯೋಜನೆಯಿಂದ ಸಾಂದ್ರೀಕರಿಸಿದ ಪುಡಿಯ ರೂದಲ್ಲಿರುವ ಗಿಡಗಳು ಅಥವಾ ಸಸ್ಯಗಳ ಅಥವಾ ಅವುಗಳ ಭಾಗಗಳು;

(ii) ಖನಿಜಗಳು ಅಥವಾ ಜೀವಸತ್ವಗಳು ಅಥವಾ ಪ್ರೋಟೀನುಗಳು ಅಥವಾ ಲೋಹಗಳು ಅಥವಾ ಅವುಗಳ ಸಂಯುಕ್ತಗಳು ಅಥವಾ ಅಮಿನೋ ಆಮ್ಲಗಳು (ಭಾರತೀಯರಿಗೆ ಶಿಫಾರಸು ಮಾಡಿರುವ ದೈನಿಕ ಪರಿಮಾಣವನ್ನು ಮೀರದಂತ ಪ್ರಮಾಣಗಳಲ್ಲಿ) ಅಥವಾ ಕಿಣ್ವಗಳು (ಅನುಮತಿಸಲಾದ ಮಿತಿಗಳೊಳಗೆ);

(iii) ಪ್ರಾಣಿ ಜನ್ಯ ಪದಾರ್ಥಗಳು;

(iv) ಒಟ್ಟು ಪಥ್ಯಾಹಾರ ಸೇವನೆಯನ್ನು ಹೆಚ್ಚಿಸುವ ಮೂಲಕ ಆಹಾರಕ್ಕೆ ಪೂರಕವಾಗಿ ಮನುಷ್ಯರು ಬಳಸುವ ಪಥ್ಯಾಹಾರ ಪದಾರ್ಥ;

(ಬಿ) (i) ಸಾಂಪ್ರದಾಯಿಕ ಆಹಾರವಾಗಿ ಬಳಸುವುದಕ್ಕೆ ತಿಳಿಸಿರದ "ವಿಶೇಷ ಪಥ್ಯಾಹಾರ ಬಳಕೆಗಾಗಿನ ಆಹಾರಗಳು ಅಥವಾ ಕ್ರಿಯಾತ್ಮಕ ಆಹಾರಗಳು ಅಥವಾ ಪೋಷಕಾಂಶ ವಸ್ತುಗಳು ಅಥವಾ ಆರೋಗ್ಯ ಪೂರಕ ಆಹಾರ ಪದಾರ್ಥಗಳು ಅಥವಾ ಅದೇ ಬಗೆಯ ಆಹಾರಗಳೂ ಎಂದು" ಲೇಬಲ್ ಹಚ್ಚಿರುವ ಉತ್ಪನ್ನ ಮತ್ತು ಆ ಮೂಲಕ ಮತ್ತು ಅಂಥ ಉತ್ಪನ್ನಗಳ, ಪುಡಿಗಳ, ಕಣಗಳ, ಮಾತ್ರೆಗಳ, ಕ್ಯಾಪ್ಸ್ಯೂಲುಗಳ, ದ್ರವಗಳ, ಜೆಲ್ಲಿಯ ರೂಪದಲ್ಲಿ ಮತ್ತು ಇತರ ಡೋಸೇಜಿನ ರೂಪಗಳಲ್ಲಿ ತಯಾರಿಸಬಹುದು. ಆದರೆ ಅವು ಅನ್ನನಾಳದ ಹೊರಗೆ ನೀಡುವಂಥವುಗಳಲ್ಲ ಮತ್ತು ಬಾಯಿಯ ಮೂಲಕ ತೆಗೆದುಕೊಳ್ಳುವಂಥವುಗಳಾಗಿವೆ.

(ii) ಅಂಥ ಉತ್ಪನ್ನಗಳಲ್ಲಿ ಔಷಧಿಗಳು ಮತ್ತು ಕಾಂತಿವರ್ಧಕಗಳ ಅಧಿನಿಯಮ, 1940 (1940ರ 23)ರ ಪ್ರಕರಣ 3ರ (ಬಿ) ಖಂಡದಲ್ಲಿ ಪರಿಭಾಷಿಸಿರುವ ಔಷಧಿಯು ಮತ್ತು ಅದೇ ಪ್ರಕರಣದ (ಎ) ಮತ್ತು (ಹೆಚ್) ಖಂಡಗಳಲ್ಲಿ ಪರಿಭಾಷಿಸಿರುವ ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಿಗಳು ಮತ್ತು ಆ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಲ್ಲಿ ಪರಿಭಾಷಿಸಿರುವ ಔಷಧಿಗಳೂ ಒಳಗೊಂಡಿರಬಾರದು;

(iii) ಯಾವುದೇ ನಿರ್ದಿಷ್ಟ ರೋಗವನ್ನು, ಅಸ್ವಸ್ಥತೆಯನ್ನು ಅಥವಾ ಅನಾರೋಗ್ಯವನ್ನು ಗುಣಪಡಿಸುವ ಅಥವಾ ಉಪಶಮನ ಮಾಡುವ ಕುರಿತ ಕ್ಲೇಮನ್ನು (ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ಅನುಮತಿಸಬಹುದಾದಂಥ ಕೆಲವೊಂದು ಆರೋಗ್ಯ ಸೌಲಭ್ಯಕ್ಕೆ ಅಥವಾ ಆರೋಗ್ಯ ಸಂವರ್ಧನೆಗೆ ಸಂಬಂಧಿಸಿದ ಕ್ಲೇಮುಗಳನ್ನು ಹೊರತುಪಡಿಸಿ) ಮಾಡಬಾರದು;

(iv) ನಿದ್ರಾಜನಕ ಔಷಧಿಗಳು ಮತ್ತು ಮನಃಪರಿಣಾಮಿ ಪದಾರ್ಥಗಳ ಅಧಿನಿಯಮ, 1985 (1985ರ 61)ರ ಅನುಸೂಚಿಯಲ್ಲಿ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ವಿವರಿಸಿದಂತೆ ನಿದ್ರಾಜನಕ ಔಷಧಿ ಮತ್ತು ಮನಃಪರಿಣಾಮಿ ಪದಾರ್ಥವು ಮತ್ತು ಔಷಧಿಗಳು ಮತ್ತು ಕಾಂತಿವರ್ಧಕಗಳ ನಿಯಮಗಳು, 1945ರ ಇ ಮತ್ತು ಇ1 ಅನುಸೂಚಿಗಳಲ್ಲಿ ಪಟ್ಟಿ ಮಾಡಿರುವ ಪದಾರ್ಥಗಳು

– ಒಳಗೊಂಡಿರಬಾರದು.

(2) "ತಳಿ ವಿಜ್ಞಾನದ ಪ್ರಕಾರ ತಯಾರಿಸಿದ ಅಥವಾ ಮಾರ್ಪಾಟು ಮಾಡಿದ ಆಹಾರ" ಎಂದರೆ, ಆಧುನಿಕ ಜೈವಿಕ ತಂತ್ರಜ್ಞಾನದ ಮೂಲಕ ಪಡೆದ, ತಳಿವಿಜ್ಞಾನದ ಪ್ರಕಾರ ಮಾರ್ಪಾಟು ಮಾಡಿದ ಅಥವಾ ತಯಾರಿಸಿದ ಜೀವಾಣುಗಳಿಂದ ಕೂಡಿಕೆ ಆಗಿರುವ ಅಥವಾ ಅವುಗಳನ್ನು ಒಳಗೊಂಡಿರುವ ಆಹಾರ ಮತ್ತು ಆಹಾರ ಘಟಕಾಂಶಗಳು ಅಥವಾ ಆಧುನಿಕ ಜೈವಿಕ ತಂತ್ರಜ್ಞಾನದಿಂದ ಉತ್ಪಾದಿಸಿದ ಆದರೆ ಆಧುನಿಕ ಜೈವಿಕ ತಂತ್ರಜ್ಞಾನದ ಮೂಲಕ ಪಡೆದು ತಳಿ ವಿಜ್ಞಾನದ ಪ್ರಕಾರ ಮಾರ್ಪಾಟು ಮಾಡಿದ ಅಥವಾ ತಯಾರಿಸಿದ ಜೀವಾಣುಗಳನ್ನು ಒಳಗೊಂಡಿರದ, ಆಹಾರ ಮತ್ತು ಆಹಾರ ಘಟಕಾಂಶಗಳು;

(3) "ಸಾವಯವ ಆಹಾರ" ಎಂದರೆ, ನಿರ್ದಿಷ್ಟಪಡಿಸಿದ ಸಾವಯವ ಉತ್ಪಾದನಾ ಗುಣಮಟ್ಟಗಳಿಗೆ ಅನುಸಾರವಾಗಿ ಉತ್ಪಾದಿಸಿರುವ ಆಹಾರ ಉತ್ಪನ್ನಗಳು;

(4) "ಮಾರಾಟದ ಸ್ವಾಮ್ಯ ಹೊಂದಿರುವ ಅಥವಾ ಹೊಸ ಬಗೆಯ ಆಹಾರ" ಎಂದರೆ, ಯಾವ ಆಹಾರ ಪದಾರ್ಥಕ್ಕೆ ಗುಣಮಟ್ಟಗಳನ್ನು ನಿರ್ದಿಷ್ಟಪಡಿಸಿಲ್ಲವೊ, ಆದರೆ ಯಾವ ಆಹಾರ ಪದಾರ್ಥವು ಅಸುರಕ್ಷಿತವಲ್ಲವೋ ಆ ಆಹಾರ ಪದಾರ್ಥ:

ಪರಂತು, ಅಂಥ ಆಹಾರವು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ವಿನಿಯಮಗಳ ಮೇರೆಗೆ ನಿಷೇಧಿಸಿದ ಯಾವುವೇ ಆಹಾರಗಳನ್ನು ಮತ್ತು ಘಟಕಾಂಶಗಳನ್ನು ಒಳಗೊಂಡಿರಬಾರದು.

**23. ಆಹಾರಗಳನ್ನು ಪ್ಯಾಕ್ ಮಾಡುವುದು ಮತ್ತು ಅವುಗಳಿಗೆ ಲೇಬಲ್ ಹಚ್ಚುವುದು.–** (1) ಯಾರೇ ವ್ಯಕ್ತಿಯು, ಯಾವ ಪ್ಯಾಕ್ ಮಾಡಿದ ಆಹಾರ ಉತ್ಪನ್ನಗಳಿಗೆ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಗುರುತು ಮಾಡಿಲ್ಲವೊ ಅಥವಾ ಲೇಬಲ್ ಹಚ್ಚಿಲ್ಲವೊ ಆ ಯಾವುವೇ ಪ್ಯಾಕ್ ಮಾಡಿದ ಆಹಾರ ಉತ್ಪನ್ನಗಳನ್ನು ತಯಾರಿಸತಕ್ಕದ್ದಲ್ಲ, ವಿತರಿಸತಕ್ಕದ್ದಲ್ಲ,

ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸತಕ್ಕದ್ದಲ್ಲ ಅಥವಾ ಮಾರಾಟದ ಉದ್ದೇಶಕ್ಕಾಗಿ ಯಾರೇ ಏಜೆಂಟ್‌ಗೆ ಅಥವಾ ದಲ್ಲಾಳಿಗೆ ರವಾನಿಸತಕ್ಕದ್ದಲ್ಲ ಅಥವಾ ತಲುಪಿಸತಕ್ಕದ್ದಲ್ಲ:

ಪರಂತು, ಪ್ಯಾಕೇಜಿನಲ್ಲಿ ಒಳಗೊಂಡಿರುವ ಆಹಾರ ಉತ್ಪನ್ನಗಳಿಗೆ ಸಂಬಂಧಿಸಿದ ಅಥವಾ ಪ್ರಮಾಣಕ್ಕೆ ಅಥವಾ ಔಷಧೀಯ ಅಥವಾ ಚಿಕಿತ್ಸೆಯ ನಿರೂಪಣೆಗಳನ್ನು ಒಳಗೊಂಡಿರುವ ಪೌಷ್ಠಿಕ ಮೌಲ್ಯಕ್ಕೆ ಸಂಬಂಧಿಸಿದ ಅಥವಾ ಸದರಿ ಆಹಾರ ಉತ್ಪನ್ನಗಳ ಮೂಲ ಸ್ಥಳಕ್ಕೆ ಸಂಬಂಧಿಸಿದ ಯಾವುದೇ ವಿವರದಲ್ಲಿ ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವ ಯಾವುದೇ ಹೇಳಿಕೆಯನ್ನು, ನಿರೂಪಣೆಯನ್ನು, ವಿನ್ಯಾಸವನ್ನು ಅಥವಾ ಲಾಂಛನವನ್ನು ಲೇಬಲ್ಲುಗಳು ಒಳಗೊಂಡಿರತಕ್ಕದ್ದಲ್ಲ.

(2) ಪ್ರತಿಯೊಬ್ಬ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು, ಆಹಾರಗಳ ಆಕಾರ, ಬಾಹ್ಯ ರೂಪ ಅಥವಾ ಅವುಗಳನ್ನು ಪ್ಯಾಕ್ ಮಾಡಿರುವುದು, ಪ್ಯಾಕ್ ಮಾಡಲು ಬಳಸಿದ ಸಾಮಗ್ರಿಗಳು, ಅವುಗಳನ್ನು ಅಣಿಗೊಳಿಸಿರುವ ವಿಧಾನ ಮತ್ತು ಅವುಗಳನ್ನು ಪ್ರದರ್ಶಿಸಿರುವ ರೀತಿ, ಮತ್ತು ಯಾವುದೇ ಮಾಧ್ಯಮದ ಮೂಲಕ ಅವುಗಳ ಬಗ್ಗೆ ಒದಗಿಸಿರುವ ಮಾಹಿತಿಯು ಒಳಗೊಂಡಂತೆ ಆಹಾರಕ್ಕೆ ಲೇಬಲ್ ಹಚ್ಚುವುದು ಮತ್ತು ಲೇಬಲ್ ಹಚ್ಚಿರುವುದು ಮತ್ತು ಅದನ್ನು ಸಾದರಪಡಿಸಿರುವುದು ಬಳಕೆದಾರರನ್ನು ತಪ್ಪುದಾರಿಗೆ ಎಳೆಯುವುದಿಲ್ಲ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

**24. ಜಾಹೀರಾತಿಗೆ ನಿರ್ಬಂಧಗಳು ಮತ್ತು ಅನುಚಿತ ವ್ಯಾಪಾರ ಪದ್ಧತಿಗಳಿಗೆ ಸಂಬಂಧಿಸಿದಂತೆ ನಿಷೇಧ.–** (1) ಯಾವುದೇ ಆಹಾರವನ್ನು ಕುರಿತ ಯಾವ ಜಾಹೀರಾತು ತಪ್ಪುದಾರಿಗೆ ಎಳೆಯುತ್ತದೋ ಅಥವಾ ಮೋಸಗೊಳಿಸುತ್ತದೋ ಅಥವಾ ಈ ಅಧಿನಿಯಮದ ಉಪಬಂಧಗಳನ್ನು, ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ವಿನಿಯಮಗಳನ್ನು ಉಲ್ಲಂಘಿಸುತ್ತದೊ ಆ ಯಾವುದೇ ಜಾಹೀರಾತನ್ನು ಮಾಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ಆಹಾರ ಪದಾರ್ಥಗಳ ಮಾರಾಟ, ಸರಬರಾಜು, ಬಳಕೆ ಮತ್ತು ಸೇವನೆಯನ್ನು ಉತ್ತೇಜಿಸುವ ಉದ್ದೇಶಕ್ಕಾಗಿ ಯಾವುದೇ ಅನುಚಿತ ವ್ಯಾಪಾರ ಪದ್ಧತಿಯಲ್ಲಿ ಸ್ವತಃ ತೊಡಗತಕ್ಕದ್ದಲ್ಲ ಅಥವಾ ಯಾವ ಹೇಳಿಕೆಯು,–

(ಎ) ನಿರ್ದಿಷ್ಟಪಡಿಸಿದ ಗುಣಮಟ್ಟದವುಗಳೆಂದು, ಪರಿಮಾಣದವುಗಳೆಂದು ಅಥವಾ ದರ್ಜೆಯ ಸಂಯೋಜನೆಯ ಆಹಾರಗಳೆಂದು ಸುಳ್ಳುಸುಳ್ಳೇ ನಿರೂಪಿಸುತ್ತದೋ;

(ಬಿ) ಅಗತ್ಯತೆಗೆ ಅಥವಾ ಉಪಯುಕ್ತತೆಗೆ ಸಂಬಂಧಿಸಿದಂತೆ ಸುಳ್ಳು ಅಥವಾ ತಪ್ಪುದಾರಿಗೆಳೆಯುವ ನಿರೂಪಣೆಯನ್ನು ಮಾಡುತ್ತದೋ;

(ಸಿ) ಆಹಾರ ಪದಾರ್ಥಗಳ ಪರಿಣಾಮಕಾರಿತ್ವದ ಬಗ್ಗೆ ಸಾಕಷ್ಟು ಅಥವಾ ವೈಜ್ಞಾನಿಕ ಸಮರ್ಥನೆಯ ಆಧಾರ ಇರದಿದ್ದರೂ ಆ ಬಗ್ಗೆ ಯಾವುದೇ ಖಾತರಿಯನ್ನು ಸಾರ್ವಜನಿಕರಿಗೆ ನೀಡುತ್ತದೋ ಆ ಯಾವುದೇ ಹೇಳಿಕೆಯನ್ನು ಮೌಖಿಕವಾಗಿಯಾಗಲೀ ಅಥವಾ ಲಿಖಿತವಾಗಿಯಾಗಲೀ ಅಥವಾ ದೃಷ್ಯನಿರೂಪಣೆಯ ಮೂಲಕವಾಗಿಯಾಗಲೀ ಮಾಡುವ ಪದ್ಧತಿಯನ್ನು ಒಳಗೊಂಡಂತೆ ಯಾವುದೇ

– ಅನುಚಿತ ಅಥವಾ ಮೋಸದ ಪದ್ಧತಿಯನ್ನು ಅಳವಡಿಸಿಕೊಳ್ಳತಕ್ಕದ್ದಲ್ಲ:

ಪರಂತು, ಅಂಥ ಖಾತರಿಯು ಸಾಕಷ್ಟು ಅಥವಾ ವೈಜ್ಞಾನಿಕ ಸಮರ್ಥನೆಯ ಮೇಲೆ ಆಧಾರಿತವಾಗಿದೆಯೆಂಬ ಬಗ್ಗೆ ಪ್ರತಿವಾದವನ್ನು ಮಂಡಿಸಿದಾಗ, ಅಂಥ ಪ್ರತಿವಾದದ ರುಜುವಾತು ಪಡಿಸುವ ಹೊಣೆಯು ಅಂಥ ಪ್ರತಿವಾದವನ್ನು ಮಂಡಿಸುವ ವ್ಯಕ್ತಿಯ ಮೇಲೆ ಇರತಕ್ಕದ್ದು.

## ಅಧ್ಯಾಯ V

## ಆಮದಿಗೆ ಸಂಬಂಧಿಸಿದ ಉಪಬಂಧಗಳು

**25. ಆಹಾರ ಪದಾರ್ಥಗಳ ಎಲ್ಲ ಆಮದುಗಳು ಈ ಅಧಿನಿಯಮಕ್ಕೆ ಒಳಪಡುವುದು.–** (1) ಯಾರೇ ವ್ಯಕ್ತಿಯು,–

(i) ಸುರಕ್ಷಿತವಲ್ಲದ ಅಥವಾ ತಪ್ಪು ಮುದ್ರೆ ಹಾಕಿರುವ ಅಥವಾ ಕಳಪೆ ಗುಣಮಟ್ಟದ ಯಾವುದೇ ಆಹಾರವನ್ನು ಅಥವಾ ಬಾಹ್ಯ ವಸ್ತುಗಳನ್ನು ಒಳಗೊಂಡಿರುವ ಆಹಾರವನ್ನು;

(ii) ಯಾವ ಆಹಾರ ಪದಾರ್ಥವನ್ನು ಆಮದು ಮಾಡಿಕೊಳ್ಳುವುದಕ್ಕೆ, ಯಾವುದೇ ಅಧಿನಿಯಮದ ಅಥವಾ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಲೈಸೆನ್ಸ್ ಅಗತ್ಯವಾಗಿದೆಯೋ, ಆ ಯಾವುದೇ ಆಹಾರ ಪದಾರ್ಥವನ್ನು ಲೈಸೆನ್ಸ್‌ನ ಷರತ್ತುಗಳಿಗೆ ಅನುಸಾರವಾಗಿ ಅಲ್ಲದೆ;

(iii) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ವಿನಿಯಮದ ಇತರ ಯಾವುದೇ ಉಪಬಂಧವನ್ನು ಅಥವಾ ಯಾವುದೇ ಅಧಿನಿಯಮವನ್ನು ಉಲ್ಲಂಘಿಸಿ ಯಾವುದೇ ಆಹಾರ ಪದಾರ್ಥವನ್ನು

– ಭಾರತಕ್ಕೆ ಆಮದು ಮಾಡಿಕೊಳ್ಳತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ವಿದೇಶೀ ವ್ಯಾಪಾರ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1992 (1992ರ 22)ರ ಮೇರೆಗೆ ಆಹಾರ ಪದಾರ್ಥಗಳ ಆಮದನ್ನು ನಿಷೇಧಿಸುವಾಗ, ನಿರ್ಬಂಧಿಸುವಾಗ, ಅಥವಾ ಅನ್ಯಥಾ ನಿಯಂತ್ರಿಸುವಾಗ ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಮೇರೆಗೆ ಆಹಾರ ಪ್ರಾಧಿಕಾರವು ಗೊತ್ತುಪಡಿಸಿರುವ ಗುಣಮಟ್ಟಗಳನ್ನು ಅನುಸರಿಸತಕ್ಕದ್ದು.

## ಅಧ್ಯಾಯ VI

## ಆಹಾರ ಸುರಕ್ಷತೆಗೆ ಸಂಬಂಧಿಸಿದಂತೆ ವಿಶೇಷ ಜವಾಬ್ದಾರಿಗಳು

**26. ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನ ಜವಾಬ್ದಾರಿಗಳು.–** (1) ಪ್ರತಿಯೊಬ್ಬ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು, ತನ್ನ ನಿಯಂತ್ರಣದಲ್ಲಿ ಬರುವ ವ್ಯಾಪಾರ ವ್ಯವಹಾರಗಳ ವ್ಯಾಪ್ತಿಯಲ್ಲಿ ಉತ್ಪಾದನೆಯ, ಸಂಸ್ಕರಣೆಯ, ಆಮದಿನ, ವಿತರಣೆಯ ಮತ್ತು ಮಾರಾಟದ ಎಲ್ಲ ಹಂತಗಳಲ್ಲಿ ಆಹಾರ ಪದಾರ್ಥಗಳು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಅಗತ್ಯತೆಗಳನ್ನು ಪೂರೈಸುತ್ತವೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಸ್ವತಃ ತಾನು ಅಥವಾ ಅವನ ಪರವಾಗಿ ಯಾರೇ ವ್ಯಕ್ತಿಯ,–

(i) ಸುರಕ್ಷಿತವಲ್ಲದ ಯಾವುದೇ ಆಹಾರ ಪದಾರ್ಥವನ್ನು; ಅಥವಾ

(ii) ತಪ್ಪು ಮುದ್ರೆ ಹಾಕಿರುವ ಅಥವಾ ಕಳಪೆ ಗುಣಮಟ್ಟದ ಅಥವಾ ಬಾಹ್ಯ ವಸ್ತುಗಳನ್ನು ಒಳಗೊಂಡಿರುವ ಯಾವುದೇ ಆಹಾರ ಪದಾರ್ಥವನ್ನು; ಅಥವಾ

(iii) ಯಾವ ಆಹಾರ ಪದಾರ್ಥಕ್ಕೆ ಲೈಸೆನ್ಸ್ ಅಗತ್ಯವಾಗಿದೆಯೋ ಆ ಯಾವುದೇ ಆಹಾರ ಪದಾರ್ಥವನ್ನು ಲೈಸೆನ್ಸ್‌ನ ಷರತ್ತುಗಳಿಗೆ ಅನುಸಾರವಾಗಿಯಲ್ಲದೆ; ಅಥವಾ

(iv) ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಯಾವ ಆಹಾರ ಪದಾರ್ಥವನ್ನು ಆಹಾರ ಪ್ರಾಧಿಕಾರವು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ತತ್ಕಾಲದಲ್ಲಿ ನಿಷೇಧಿಸಿದೆಯೋ ಆ ಯಾವುದೇ ಆಹಾರ ಪದಾರ್ಥವನ್ನು; ಅಥವಾ

(v) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ವಿನಿಯಮದ ಇತರ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಯಾವುದೇ ಆಹಾರ ಪದಾರ್ಥವನ್ನು

– ತಯಾರಿಸತಕ್ಕದ್ದಲ್ಲ, ದಾಸ್ತಾನು ಮಾಡತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ವಿತರಣೆ ಮಾಡತಕ್ಕದ್ದಲ್ಲ.

(3) ಯಾರೇ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು, ಸೋಂಕು ರೋಗದಿಂದ, ಅಂಟುರೋಗದಿಂದ ಅಥವಾ ಅಸಹ್ಯಕರವಾದ ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯನ್ನು ನಿಯೋಜಿಸಿಕೊಳ್ಳತಕ್ಕದ್ದಲ್ಲ.

(4) ಯಾರೇ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು, ಆಹಾರ ಪದಾರ್ಥದ ಸ್ವರೂಪದ ಮತ್ತು ಗುಣಲಕ್ಷಣದ ಬಗ್ಗೆ ಮಾರಾಟಗಾರನಿಗೆ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಲಿಖಿತದಲ್ಲಿ ಖಾತರಿಯನ್ನು ಸಹ ನೀಡಿದ ಹೊರತು ಅವನು ಯಾರೇ ಮಾರಾಟಗಾರನಿಗೆ ಯಾವುದೇ ಆಹಾರ ಪದಾರ್ಥವನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕೆ ಇಡತಕ್ಕದ್ದಲ್ಲ:

ಪರಂತು, ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಯಾವುದೇ ಆಹಾರ ಪದಾರ್ಥದ ಮಾರಾಟಕ್ಕೆ ಸಂಬಂಧಿಸಿದಂತೆ ಮಾರಾಟಗಾರನಿಗೆ ನೀಡಿದ ಬಿಲ್ಲನ್ನು, ನಗದು ಮೆಮೋವನ್ನು ಅಥವಾ ದರ ಪಟ್ಟಿಯನ್ನು, ಆ ಬಿಲ್ಲಿನಲ್ಲಿ, ನಗದು ಮೆಮೊದಲ್ಲಿ ಅಥವಾ ದರಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಖಾತರಿ ಒಳಗೊಂಡಿರದಿದ್ದರೂ, ಈ ಪ್ರಕರಣದ ಮೇರೆಗೆ ಖಾತರಿಯೆಂಬುದಾಗಿ ಭಾವಿಸತಕ್ಕದ್ದು.

(5) ಸುರಕ್ಷಿತವಲ್ಲದ ಯಾವುದೇ ಆಹಾರವು, ಅದೇ ವರ್ಗದ ಅಥವಾ ಪ್ರಕಾರದ ಆಹಾರದ ಗುಂಪಿನ, ರಾಶಿಯ ಅಥವಾ ರವಾನೆ ಸರಕಿನ ಭಾಗವಾಗಿರುವಲ್ಲಿ ನಿರ್ದಿಷ್ಟ ಅವಧಿಯೊಳಗೆ ವಿವರವಾದ ನಿರ್ಧರಣೆಯನ್ನು ಮಾಡಿದ ನಂತರ, ಆ ಗುಂಪಿನಲ್ಲಿನ, ರಾಶಿಯಲ್ಲಿನ ಅಥವಾ ರವಾನೆ ಸರಕಿನಲ್ಲಿನ ಉಳಿದ ಆಹಾರವು ಸುರಕ್ಷಿತವಾದುದಲ್ಲ ಎಂಬ ಬಗ್ಗೆ ಯಾವುದೇ ಸಾಕ್ಷ್ಯ ಇಲ್ಲ ಎಂದು ಕಂಡು ಬಂದ ಹೊರತು, ಆ ಗುಂಪಿನಲ್ಲಿನ, ರಾಶಿಯಲ್ಲಿನ ಅಥವಾ ರವಾನೆ ಸರಕಿನಲ್ಲಿನ ಎಲ್ಲಾ ಆಹಾರವನ್ನು ಸಹ ಸುರಕ್ಷಿತವಾದುದಲ್ಲವೆಂದು ಭಾವಿಸತಕ್ಕದ್ದು:

ಪರಂತು, ಆ ಆಹಾರಕ್ಕೆ ಅನ್ವಯವಾಗುವ ನಿರ್ದಿಷ್ಟ ಉಪಬಂಧಗಳೊಂದಿಗೆ ಆ ಆಹಾರದ ಯಾವುದೇ ಅನುರೂಪತೆಯು, ಸಕ್ಷಮ ಪ್ರಾಧಿಕಾರಗಳಿಗೆ ಆ ಆಹಾರವನ್ನು ಮಾರುಕಟ್ಟೆಯಲ್ಲಿ ಇಡುವುದರ ಮೇಲೆ ನಿರ್ಬಂಧಗಳನ್ನು ವಿಧಿಸಲು ಅಥವಾ ಆಹಾರವು ಅನುಗುಣವಾಗಿದ್ದರೂ ಸುರಕ್ಷಿತವಾದುದಾಗಿಲ್ಲವೆಂದು ಅಂಥ ಪ್ರಾಧಿಕಾರಿಗಳಿಗೆ

ಸಂಶಯವುಂಟಾದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಆ ಆಹಾರವನ್ನೂ ಮಾರುಕಟ್ಟೆಯಿಂದ ಹಿಂದಕ್ಕೆ ಪಡೆಯುವಂತೆ ಅಗತ್ಯಪಡಿಸುವುದಕ್ಕೆ ಯುಕ್ತ ಕ್ರಮಗಳನ್ನು ಕೈಗೊಳ್ಳಲು ಬಾಧಕವುಂಟು ಮಾಡತಕ್ಕದ್ದಲ್ಲ.

**27. ತಯಾರಕರ, ಪ್ಯಾಕ್ ಮಾಡುವವರ, ಸಗಟು ವ್ಯಾಪಾರಿಗಳ, ವಿತರಕರ ಮತ್ತು ಮಾರಾಟಗಾರರ ಹೊಣೆಗಾರಿಕೆಗಳು.–** (1) ಆಹಾರ ಪದಾರ್ಥದ ತಯಾರಕನು ಅಥವಾ ಪ್ಯಾಕ್ ಮಾಡುವವನು, ಆಹಾರ ಪದಾರ್ಥವು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಅಗತ್ಯತೆಗಳನ್ನು ಪೂರೈಸದಿದ್ದರೆ ಅಂಥ ಆಹಾರ ಪದಾರ್ಥಕ್ಕೆ ಹೊಣೆಗಾರನಾಗಿರತಕ್ಕದ್ದು.

(2) ಸಗಟು ವ್ಯಾಪಾರಿಯು ಅಥವಾ ವಿತರಕನು,–

(ಎ) ಆಹಾರ ಪದಾರ್ಥದ ಅವಧಿಯು ಮುಕ್ತಾಯವಾದ ದಿನಾಂಕದ ತರುವಾಯ ಸರಬರಾಜು ಮಾಡಿರುವ; ಅಥವಾ

(ಬಿ) ತಯಾರಕನು ನೀಡಿರುವ ಸುರಕ್ಷತೆಯ ಸೂಚನೆಗಳನ್ನು ಉಲ್ಲಂಘಿಸಿ ದಾಸ್ತಾನು ಮಾಡಿರುವ ಅಥವಾ ಸರಬರಾಜು ಮಾಡಿರುವ; ಅಥವಾ

(ಸಿ) ಸುರಕ್ಷಿತವಲ್ಲದ ಅಥವಾ ತಪ್ಪು ಮುದ್ರೆ ಹಾಕಿರುವ; ಅಥವಾ

(ಡಿ) ಯಾವ ತಯಾರಕನಿಂದ ಆಹಾರ ಪದಾರ್ಥವನ್ನು ಸ್ವೀಕರಿಸಲಾಗಿದೆಯೋ ಆ ತಯಾರಕನನ್ನು ಗುರುತಿಸಲಾಗದಂಥ; ಅಥವಾ

(ಇ) ಈ ಅಧಿನಿಯಮದ ಉಪಬಂಧಗಳನ್ನು, ಅದರ ಮೇರೆಗೆ ರಚಿಸಿದ ನಿಯಮಗಳನ್ನು ಮತ್ತು ವಿನಿಯಮಗಳನ್ನು ಉಲ್ಲಂಘಿಸಿ ದಾಸ್ತಾನು ಮಾಡಿರುವ ಅಥವಾ ನಿರ್ವಹಿಸಿರುವ ಅಥವಾ ಇಟ್ಟುಕೊಂಡಿರುವ; ಅಥವಾ

(ಎಫ್) ಸುರಕ್ಷಿತವಾದುದಲ್ಲವೆಂದು ತಿಳಿದೂ ಅವನು ಸ್ವೀಕರಿಸಿರುವಂಥ ಯಾವುದೇ ಆಹಾರ ಪದಾರ್ಥಕ್ಕೆ

– ಈ ಅಧಿನಿಯಮದ ಮೇರೆಗೆ ಹೊಣೆಗಾರನಾಗಿರತಕ್ಕದ್ದು.

(3) ಮಾರಾಟಗಾರನು,–

(ಎ) ಆಹಾರ ಪದಾರ್ಥದ ಅವಧಿಯು ಮುಕ್ತಾಯವಾದ ದಿನಾಂಕದ ತರುವಾಯ ಮಾರಾಟ ಮಾಡಿರುವ;

(ಬಿ) ಅನೈರ್ಮಲ್ಯಕರ ಸ್ಥಿತಿಗಳಲ್ಲಿ ನಿರ್ವಹಿಸಿರುವ ಅಥವಾ ಇಟ್ಟಿರುವ; ಅಥವಾ

(ಸಿ) ತಪ್ಪು ಮುದ್ರೆ ಹಾಕಿರುವ; ಅಥವಾ

(ಡಿ) ಯಾವ ತಯಾರಕನಿಂದ ಅಥವಾ ವಿತರಕನಿಂದ ಅಂಥ ಆಹಾರ ಪದಾರ್ಥಗಳನ್ನು ಸ್ವೀಕರಿಸಲಾಯಿತೋ ಆ ತಯಾರಕನನ್ನು ಅಥವಾ ವಿತರಕನನ್ನು ಗುರುತಿಸಲಾಗದಂಥ; ಅಥವಾ

(ಇ) ಸುರಕ್ಷಿತವಾದುದಲ್ಲವೆಂದು ತಿಳಿದೂ ಅವನು ಸ್ವೀಕರಿಸಿರುವ ಯಾವುದೇ ಆಹಾರ ಪದಾರ್ಥಕ್ಕೆ

– ಈ ಅಧಿನಿಯಮದ ಮೇರೆಗೆ ಹೊಣೆಗಾರನಾಗಿರತಕ್ಕದ್ದು.

**28. ಆಹಾರ ಪದಾರ್ಥವನ್ನು ಹಿಂದಕ್ಕೆ ತರಿಸಿಕೊಳ್ಳುವ ಕಾರ್ಯವಿಧಾನಗಳು.–** (1) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು, ಅವನು ಸಂಸ್ಕರಿಸಿದ, ತಯಾರಿಸಿದ ಅಥವಾ ವಿತರಿಸಿದ ಆಹಾರ ಪದಾರ್ಥವು ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಥವಾ ವಿನಿಯಮಗಳಿಗೆ ಅನುಗುಣವಾಗಿ ಇಲ್ಲವೆಂದು ಪರಿಗಣಿಸಿದರೆ ಅಥವಾ ನಂಬಲು ಕಾರಣಗಳಿದಿದ್ದರೆ, ಅಂಥ ಆಹಾರ ಪದಾರ್ಥವನ್ನು ಹಿಂದಕ್ಕೆ ತರಿಸಿಕೊಳ್ಳುವುದಕ್ಕೆ ಕಾರಣಗಳನ್ನು ಸೂಚಿಸಿ ಮಾರುಕಟ್ಟೆಯಿಂದ ಮತ್ತು ಬಳಕೆದಾರರಿಂದ ಅಂಥ ಆಹಾರ ಪದಾರ್ಥವನ್ನು ಹಿಂದಕ್ಕೆ ತರಿಸಿಕೊಳ್ಳಲು ಅವನು ಕೂಡಲೇ ಕಾರ್ಯವಿಧಾನಗಳನ್ನು ಪ್ರಾರಂಭಿಸತಕ್ಕದ್ದು ಮತ್ತು ಆ ಬಗ್ಗೆ ಸಕ್ಷಮ ಪ್ರಾಧಿಕಾರಿಗಳಿಗೆ ತಿಳಿಸತಕ್ಕದ್ದು.

(2) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಮಾರುಕಟ್ಟೆಯಲ್ಲಿ ಇರಿಸಿದ ಆಹಾರವು ಬಳಕೆದಾರರಿಗೆ ಸುರಕ್ಷಿತವಲ್ಲದ್ದಾಗಬಹುದಾದಂಥ ಆಹಾರವೆಂದು ಪರಿಗಣಿಸಿದರೆ ಅಥವಾ ನಂಬಲು ಕಾರಣಗಳಿದ್ದರೆ ಅವನು ಸಕ್ಷಮ ಪ್ರಾಧಿಕಾರಿಗಳಿಗೆ ಕೂಡಲೇ ತಿಳಿಸತಕ್ಕದ್ದು ಮತ್ತು ಅವರೊಡನೆ ಸಹಕರಿಸತಕ್ಕದ್ದು.

(3) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು, ಬಳಕೆದಾರರಿಗೆ ಉಂಟಾಗುವ ಅಪಾಯಗಳನ್ನು ತಡೆಯಲು ತೆಗೆದುಕೊಂಡ ಕ್ರಮದ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಗೆ ತಿಳಿಸತಕ್ಕದ್ದು ಮತ್ತು ಯಾರೇ ವ್ಯಕ್ತಿಯು ಈ ಅಧಿನಿಯಮಕ್ಕೆ ಅನುಸಾರವಾಗಿ, ಸಕ್ಷಮ ಪ್ರಾಧಿಕಾರಗಳೊಂದಿಗೆ ಸಹಕರಿಸುವುದರಿಂದ, ಆಹಾರ ಪದಾರ್ಥದಿಂದ ಉಂಟಾಗುವ ಅಪಾಯವನ್ನು ತಡೆಗಟ್ಟಬಹುದಾಗಿದ್ದಲ್ಲಿ, ಕಡಿಮೆ ಮಾಡ ಬಹುದಾಗಿದ್ದಲ್ಲಿ, ಅಥವಾ ನಿವಾರಿಸ ಬಹುದಾಗಿದ್ದಲ್ಲಿ ಹಾಗೆ ಸಹಕರಿಸುವುದಕ್ಕೆ ಅವನಿಗೆ ಅಡ್ಡಿ ಉಂಟುಮಾಡತಕ್ಕದ್ದಲ್ಲ ಅಥವಾ ನಿರುತ್ತೇಜನಗೊಳಿಸತಕ್ಕದ್ದಲ್ಲ.

(4) ಪ್ರತಿಯೊಬ್ಬ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು, ಆಹಾರ ಪ್ರಾಧಿಕಾರವು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಆಹಾರ ಪದಾರ್ಥವನ್ನು ಹಿಂದಕ್ಕೆ ತರಿಸಿಕೊಳ್ಳುವ ಕಾರ್ಯವಿಧಾನಗಳಿಗೆ ಸಂಬಂಧಿಸಿದಂಥ ಷರತ್ತುಗಳನ್ನು ಮತ್ತು ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

## ಅಧ್ಯಾಯ VII

## ಅಧಿನಿಯಮದ ಜಾರಿ

**29. ಅಧಿನಿಯಮದ ಜಾರಿಗೆ ಜವಾಬ್ದಾರಿಯಾದ ಪ್ರಾಧಿಕಾರಗಳು.–** (1) ಆಹಾರ ಪ್ರಾಧಿಕಾರವು ಮತ್ತು ರಾಜ್ಯ ಆಹಾರ ಸುರಕ್ಷತಾ ಪ್ರಾಧಿಕಾರಗಳು ಈ ಅಧಿನಿಯಮದ ಜಾರಿಗೆ ಜವಾಬ್ದಾರಿಯಾಗಿರತಕ್ಕದ್ದು.

(2) ಆಹಾರ ಪ್ರಾಧಿಕಾರವು ಮತ್ತು ರಾಜ್ಯ ಆಹಾರ ಸುರಕ್ಷತಾ ಪ್ರಾಧಿಕಾರಗಳು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕರು ಆಹಾರ ವ್ಯಾಪಾರ ವ್ಯವಹಾರಗಳ ಎಲ್ಲ ಹಂತಗಳಲ್ಲಿ ಕಾನೂನಿನ ಸುಸಂಗತ ಅಗತ್ಯತೆಗಳನ್ನು ಪೂರೈಸಿದ್ದಾರೆಯೇ ಎಂಬ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ಪರಿಶೀಲಿಸತಕ್ಕದ್ದು.

(3) ಪ್ರಾಧಿಕಾರಗಳು, ಆಹಾರ ಸುರಕ್ಷತೆ ಮತ್ತು ಅಪಾಯದ ಬಗ್ಗೆ ಸಾರ್ವಜನಿಕರಿಗೆ ತಿಳಿಸುವುದು, ಆಹಾರ ಸುರಕ್ಷತೆಯ ಬಗ್ಗೆ ನಿಗಾ ಇಡುವುದು ಮತ್ತು ಆಹಾರ ವ್ಯಾಪಾರ ವ್ಯವಹಾರದ ಎಲ್ಲ ಹಂತಗಳು ಒಳಗೊಳ್ಳುವ ಇತರ

ಮೇಲ್ವಿಚಾರಣಾ ಕಾರ್ಯಚಟುವಟಿಕೆಗಳೂ ಒಳಗೊಂಡಂತೆ ಸಂದರ್ಭಗಳಿಗೆ ಸೂಕ್ತವಾಗುವ ನಿಯಂತ್ರಣ ವ್ಯವಸ್ಥೆಯೊಂದನ್ನು ಮತ್ತು ಇತರ ಕಾರ್ಯಚಟುವಟಿಕೆಗಳನ್ನು ನಿರ್ವಹಿಸತಕ್ಕದ್ದು.

(4) ಆಹಾರ ಸುರಕ್ಷತಾ ಅಧಿಕಾರಿಗಳು ಈ ಅಧಿನಿಯಮದ ಯಾವ ಉಪಬಂಧಗಳಿಗೆ ಸಂಬಂಧಿಸಿದಂತೆ ಬೇರೊಂದು ಪ್ರಾಧಿಕಾರಕ್ಕೆ ಸ್ಪಷ್ಟವಾಗಿ ಅಥವಾ ಅವಶ್ಯ ಇಂಗಿತದ ಮೂಲಕ ಕರ್ತವ್ಯವನ್ನು ವಹಿಸಿಲ್ಲವೋ ಆ ಉಪಬಂಧಗಳನ್ನು ತಮ್ಮ ಪ್ರದೇಶದ ವ್ಯಾಪ್ತಿಯಲ್ಲಿ ಜಾರಿಗೊಳಿಸತಕ್ಕದ್ದು ಮತ್ತು ಕಾರ್ಯಗತಗೊಳಿಸತಕ್ಕದ್ದು.

(5) ಈ ಅಧಿನಿಯಮದ ಮೇರೆಗಿನ ವಿನಿಯಮಗಳು, ಆಹಾರ ಸುರಕ್ಷತಾ ಅಧಿಕಾರಿಗಳಲ್ಲಿ ಯಾರೂ ಸಾಮಾನ್ಯವಾಗಿಯಾಗಲಿ ಅಥವಾ ನಿರ್ದಿಷ್ಟ ಬಗೆಯ ಪ್ರಕರಣಗಳಿಗೆ ಅಥವಾ ನಿರ್ದಿಷ್ಟ ಪ್ರದೇಶಕ್ಕೆ ಸಂಬಂಧಿಸಿದಂತೆಯಾಗಲಿ, ಅವುಗಳನ್ನು ಜಾರಿ ಮಾಡಬೇಕೋ ಮತ್ತು ಕಾರ್ಯಗತಗೊಳಿಸಬೇಕೋ ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅಂಥ ಯಾವುವೇ ವಿನಿಯಮಗಳು ಅಥವಾ ಆದೇಶಗಳು, ವಿನಿಯಮಗಳ ಅಥವಾ ಆದೇಶಗಳ ಅಥವಾ ಈ ಅಧಿನಿಯಮದ ಯಾವುದೇ ಉಪಬಂಧಗಳ ಅನುಷ್ಠಾನಕ್ಕೆ ಸಂಬಂಧಿಸಿದ ಯಾವುದೇ ಪ್ರಾಧಿಕಾರವು ಹಾಗೆ ಸಂಬಂಧಪಟ್ಟ ಬೇರೊಂದು ಪ್ರಾಧಿಕಾರಕ್ಕೆ, ಆ ವಿನಿಯಮಗಳ ಅಥವಾ ಆದೇಶಗಳ ಅಥವಾ ಉಪಬಂಧಗಳ ಮೇರೆಗೆ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ನೆರವನ್ನು ಮತ್ತು ಮಾಹಿತಿಯನ್ನು ನೀಡುವುದಕ್ಕೆ ಉಪಬಂಧ ಕಲ್ಪಿಸಬಹುದು.

(6) ಆಹಾರ ಸುರಕ್ಷತಾ ಆಯುಕ್ತನು ಮತ್ತು ಗೊತ್ತುಪಡಿಸಿದ ಅಧಿಕಾರಿಯು, ಆಹಾರ ಸುರಕ್ಷತಾ ಅಧಿಕಾರಿಗೆ ಪ್ರಧಾನ ಮಾಡಿರುವಂಥವೇ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವಂಥದ್ದೇ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

**30. ರಾಜ್ಯದ ಆಹಾರ ಸುರಕ್ಷತಾ ಆಯುಕ್ತ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಮೇರೆಗೆ ಗೊತ್ತುಪಡಿಸಿದ ಆಹಾರ ಸುರಕ್ಷತೆಯನ್ನು ಮತ್ತು ಅದರ ಗುಣಮಟ್ಟಗಳನ್ನು ಮತ್ತು ಇತರ ಅಗತ್ಯತೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವುದಕ್ಕಾಗಿ ರಾಜ್ಯಕ್ಕೆ ಆಹಾರ ಸುರಕ್ಷತಾ ಆಯುಕ್ತನನ್ನು ನೇಮಕ ಮಾಡತಕ್ಕದ್ದು.

(2) ಆಹಾರ ಸುರಕ್ಷತಾ ಆಯುಕ್ತನು ಈ ಮುಂದಿನ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು; ಎಂದರೆ:–

(ಎ) ರಾಜಪತ್ರದಲ್ಲಿ ಈ ಬಗ್ಗೆ ಅಧಿಸೂಚಿಸಿದ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಒಂದು ವರ್ಷಕ್ಕೆ ಮೀರದಂಥ ಅವಧಿಗೆ ಇಡೀ ರಾಜ್ಯದಲ್ಲಾಗಲೀ ಅಥವಾ ಯಾವುದೇ ಪ್ರದೇಶದಲ್ಲಾಗಲೀ ಅಥವಾ ಅದರ ಭಾಗದಲ್ಲಾಗಲೀ, ಯಾವುದೇ ಆಹಾರ ಪದಾರ್ಥದ ತಯಾರಿಕೆಯನ್ನು, ದಾಸ್ತಾನನ್ನು, ವಿತರಣೆಯನ್ನು ಅಥವಾ ಮಾರಾಟವನ್ನು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ನಿಷೇಧಿಸುವುದು;

(ಬಿ) ರಾಜ್ಯದಲ್ಲಿ ಆಹಾರದ ತಯಾರಿಕೆಯಲ್ಲಿ ಅಥವಾ ಸಂಸ್ಕರಣೆಯಲ್ಲಿ ತೊಡಗಿರುವ ಕೈಗಾರಿಕಾ ಘಟಕಗಳು, ವಿವಿಧ ಆಹಾರ ಪದಾರ್ಥಗಳಿಗಾಗಿ, ಆಹಾರ ಪ್ರಾಧಿಕಾರವು ಅಧಿಸೂಚಿಸಿರುವಂಥ ಗುಣಮಟ್ಟಗಳನ್ನು ಅನುಪಾಲನೆ ಮಾಡುತ್ತಿವೆಯೇ ಎಂಬುದನ್ನು ಕಂಡುಕೊಳ್ಳಲು ಅಂಥ ಘಟಕಗಳ ಸಮೀಕ್ಷೆಯನ್ನು ನಡೆಸುವುದು;

(ಸಿ) ಆಹಾರ ಸುರಕ್ಷತೆಯ ಬಗ್ಗೆ ಜಾಗೃತಿಯನ್ನು ಮೂಡಿಸುವುದಕ್ಕಾಗಿ ಆಹಾರ ಸುರಕ್ಷತಾ ಆಯುಕ್ತನ ಕಛೇರಿಯ ಸಿಬ್ಬಂದಿಗೆ ಮತ್ತು ಆಹಾರ ಸರಪಳಿಯಲ್ಲಿ ಬರುವ ವಿವಿಧ ವಲಯಗಳಿಗೆ ವ್ಯಾಪಕ ಶ್ರೇಣಿಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು ಅಥವಾ ಏರ್ಪಡಿಸುವುದು;

(ಡಿ) ನಿರ್ದಿಷ್ಟಪಡಿಸಲಾದಂತೆ ಗುಣಮಟ್ಟಗಳನ್ನು ಮತ್ತು ಇತರ ಅಗತ್ಯತೆಗಳನ್ನು ಸಮರ್ಥವಾಗಿ ಮತ್ತು ಏಕರೂಪವಾಗಿ ಅನುಷ್ಠಾನಗೊಳಿಸುವುದನ್ನು ಸುನಿಶ್ಚಿತ ಪಡಿಸಿಕೊಳ್ಳುವುದು ಮತ್ತು ಉನ್ನತ ಮಟ್ಟದ ವಸ್ತು ನಿಷ್ಠತೆಯನ್ನು ಹೊಣೆಗಾರಿಕೆಯನ್ನು ಕಾರ್ಯ ಸಾಧ್ಯತೆಯನ್ನು, ಪಾರದರ್ಶಕತೆಯನ್ನು ಮತ್ತು ವಿಶ್ವಾಸಾರ್ಹತೆಯನ್ನೂ ಸಹ ಸುನಿಶ್ಚಿತಪಡಿಸಿಕೊಳ್ಳುವುದು;

(ಇ) ಈ ಅಧಿನಿಯಮದ ಮೇರೆಗೆ ಕಾರಾವಾಸದ ಶಿಕ್ಷೆ ವಿಧಿಸಬಹುದಾದ ಅಪರಾಧಗಳಿಗಾಗಿ ಪ್ರಾಸಿಕ್ಯೂಷನ್ ಮಾಡಲು ಅನುಮತಿ ನೀಡುವುದು;

(ಎಫ್) ರಾಜ್ಯ ಸರ್ಕಾರವು ಆಹಾರ ಪ್ರಾಧಿಕಾರದೊಡನೆ ಸಮಾಲೋಚಿಸಿ ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳು.

(3) ಆಹಾರ ಸುರಕ್ಷತಾ ಆಯುಕ್ತನು ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ತಾನು ಅವಶ್ಯವೆಂದು ಮತ್ತು ನಿಹಿತವೆಂದು ಭಾವಿಸಬಹುದಾದ ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರವನ್ನು ಮತ್ತು ಪ್ರಕಾರ್ಯಗಳನ್ನು (ಗೊತ್ತುಪಡಿಸಿದ ಅಧಿಕಾರಿಯನ್ನು, ಆಹಾರ ಸುರಕ್ಷತಾ ಅಧಿಕಾರಿಯನ್ನು ಮತ್ತು ಆಹಾರ ವಿಶ್ಲೇಷಕರನ್ನು ನೇಮಕ ಮಾಡುವ ಅಧಿಕಾರವನ್ನು ಹೊರತುಪಡಿಸಿ) ತನ್ನ ಯಾರೇ ಅಧೀನ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**31. ಆಹಾರ ವ್ಯಾಪಾರ ವ್ಯವಹಾರಕ್ಕೆ ಲೈಸೆನ್ಸ್ ನೀಡುವುದು ಮತ್ತು ಅದರ ನೋಂದಣಿ.–** (1) ಯಾರೇ ವ್ಯಕ್ತಿಯು ಲೈಸೆನ್ಸ್ ಇಲ್ಲದೆ ಯಾವುದೇ ಆಹಾರ ವ್ಯಾಪಾರ ವ್ಯವಹಾರವನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಒಳಗೊಂಡಿರುವುದು ಯಾವುದೇ ಆಹಾರ ಪದಾರ್ಥವನ್ನು ಸ್ವತಃ ತಯಾರಿಸುವ ಅಥವಾ ಮಾರಾಟ ಮಾಡುವ ಸಣ್ಣ ತಯಾರಕನಿಗೆ ಅಥವಾ ಸಣ್ಣ ಚಿಲ್ಲರೆ ವ್ಯಾಪಾರಿಗೆ, ಬೀದಿ ವ್ಯಾಪಾರಿಗೆ, ಸಂಚಾರಿ ಮಾರಾಟಗಾರನಿಗೆ ಅಥವಾ ತಾತ್ಕಾಲಿಕ ಅಂಗಡಿಯನ್ನು ಹೊಂದಿರುವವನಿಗೆ ಅಥವಾ ಆಹಾರ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದ ಸಣ್ಣ ಪ್ರಮಾಣದ ಅಥವಾ ಗುಡಿ ಅಥವಾ ಅಂಥ ಇತರ ಕೈಗಾರಿಕೆಗಳಿಗೆ ಅಥವಾ ಅತಿ ಸಣ್ಣ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ಅನ್ವಯಿಸತಕ್ಕದ್ದಲ್ಲ; ಆದರೆ ಅವರು ಮಾನವ ಸೇವನೆಗೆ ಸುರಕ್ಷಿತ ಮತ್ತು ಆರೋಗ್ಯಕರ ಆಹಾರದ ಲಭ್ಯತೆಗೆ ಬಾಧಕವಾಗದಂತೆ ಅಥವಾ ಬಳಕೆದಾರರ ಹಿತಾಸಕ್ತಿಗಳಿಗೆ ಬಾಧಕವಾಗದಂತೆ, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರದಲ್ಲಿ ಮತ್ತು ಅಂಥ ರೀತಿಯಲ್ಲಿ ತಮ್ಮನ್ನು ನೋಂದಾಯಿಸಿಕೊಳ್ಳತಕ್ಕದ್ದು.

(3) ಯಾವುದೇ ಆಹಾರ ವ್ಯಾಪಾರ ವ್ಯವಹಾರವನ್ನು ಪ್ರಾರಂಭಿಸಲು ಅಥವಾ ನಡೆಸಲು ಇಚ್ಛಿಸುವ ಯಾರೇ ವ್ಯಕ್ತಿಯು, ಲೈಸೆನ್ಸ್‌ನ ಮಂಜೂರಾತಿಗಾಗಿ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಮತ್ತು ಫೀಜನ್ನು ಒಳಗೊಂಡ ಅರ್ಜಿಯನ್ನು ಗೊತ್ತುಪಡಿಸಿದ ಅಧಿಕಾರಿಗೆ ಸಲ್ಲಿಸತಕ್ಕದ್ದು.

(4) ಗೊತ್ತುಪಡಿಸಿದ ಅಧಿಕಾರಿಯು, ಉಪಪ್ರಕರಣ (3)ರ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸನ್ನು ಮಂಜೂರು ಮಾಡಬಹುದು ಅಥವಾ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಲೈಸೆನ್ಸನ್ನು ನಿರಾಕರಿಸುವುದು ಅವಶ್ಯಕವೆಂದು ಅವನಿಗೆ ಮನದಟ್ಟಾದರೆ ಅಹವಾಲನ್ನು ಹೇಳಿಕೊಳ್ಳಲು ಅರ್ಜಿದಾರನಿಗೆ ಯುಕ್ತ ಅವಕಾಶವನ್ನು ನೀಡಿದ ತರುವಾಯ ಮತ್ತು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಲೈಸೆನ್ಸನ್ನು ಮಂಜೂರು ಮಾಡಲು ನಿರಾಕರಿಸಬಹುದು ಮತ್ತು ಆದೇಶದ ಪ್ರತಿಯು ಅರ್ಜಿದಾರನಿಗೆ ದೊರೆಯುವಂತೆ ಮಾಡತಕ್ಕದ್ದು:

ಪರಂತು, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ಲೈಸೆನ್ಸನ್ನು ನೀಡದಿದ್ದರೆ ಅಥವಾ ಅರ್ಜಿದಾರನ ಅರ್ಜಿಯನ್ನು ತಿರಸ್ಕರಿಸದಿದ್ದರೆ, ಆತನು ಸದರಿ ಅವಧಿಯ ಮುಕ್ತಾಯದ ತರುವಾಯ, ಅವನು ಆಹಾರ ವ್ಯಾಪಾರ ವ್ಯವಹಾರವನ್ನು ಪ್ರಾರಂಭಿಸಬಹುದು ಮತ್ತು ಅಂಥ ಸಂದರ್ಭದಲ್ಲಿ ಗೊತ್ತುಪಡಿಸಿದ ಅಧಿಕಾರಿಯು ಲೈಸೆನ್ಸನ್ನು ನೀಡಲು ನಿರಾಕರಿಸತಕ್ಕದ್ದಲ್ಲ ಆದರೆ ಸುಧಾರಣೆಗಾಗಿ ನೋಟಿಸನ್ನು ನೀಡುವುದು ಅವಶ್ಯವೆಂದು ಅವನು ಪರಿಗಣಿಸಿದರೆ, ಪ್ರಕರಣ 32ರ ಮೇರೆಗೆ ಸುಧಾರಣೆಗಾಗಿ ನೋಟೀಸನ್ನು ನೀಡಬಹುದು ಮತ್ತು ಆ ಸಂಬಂಧದಲ್ಲಿ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(5) ಪ್ರತಿಯೊಂದು ಲೈಸೆನ್ಸ್, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಲಾದಂಥ ರೀತಿಯಲ್ಲಿ ಇರತಕ್ಕದ್ದು ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(6) ಗೊತ್ತುಪಡಿಸಿದ ಅಧಿಕಾರಿಯು ಒಂದು ಅಥವಾ ಹೆಚ್ಚು ಆಹಾರ ಪದಾರ್ಥಗಳಿಗೆ ಹಾಗೂ ಒಂದೇ ಪ್ರದೇಶದಲ್ಲಿನ ಬೇರೆಬೇರೆ ಕಾರ್ಯಸಂಸ್ಥೆಗಳಿಗೆ ಅಥವಾ ಆವರಣಗಳಿಗೆ ಒಂದೇ ಲೈಸೆನ್ಸನ್ನು ನೀಡಬಹುದು.

(7) ಆಹಾರ ಪದಾರ್ಥಗಳನ್ನು ಒಂದಕ್ಕಿಂತ ಹೆಚ್ಚು ಪ್ರದೇಶಗಳಲ್ಲಿ ಇರುವ ಬೇರೆ ಬೇರೆ ಆವರಣಗಳಲ್ಲಿ ತಯಾರಿಸಿದರೆ, ದಾಸ್ತಾನು ಮಾಡಿದರೆ, ಮಾರಾಟ ಮಾಡಿದರೆ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಿದರೆ, ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಮತ್ತು ಒಂದೇ ಪ್ರದೇಶದಲ್ಲಿ ಇರದ ಅಂಥ ಆವರಣಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಲೈಸೆನ್ಸನ್ನು ನೀಡತಕ್ಕದ್ದು.

(8) ಲೈಸೆನ್ಸ್ ಮಂಜೂರು ಮಾಡಲು ನಿರಾಕರಿಸಿದ ಆದೇಶದ ವಿರುದ್ಧ ಅಪೀಲನ್ನು ಆಹಾರ ಸುರಕ್ಷತಾ ಆಯುಕ್ತನಿಗೆ ಸಲ್ಲಿಸಲು ಅವಕಾಶವಿರತಕ್ಕದ್ದು.

(9) ಲೈಸೆನ್ಸನ್ನು ಈ ಮೊದಲೇ ಅಮಾನತು ಮಾಡಿದ್ದ ಅಥವಾ ರದ್ದು ಮಾಡಿದ್ದ ಹೊರತು, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಅದು ಜಾರಿಯಲ್ಲಿರತಕ್ಕದ್ದು:

ಪರಂತು, ಲೈಸೆನ್ಸ್‌ನ ನವೀಕರಣಕ್ಕಾಗಿ ಅರ್ಜಿಯನ್ನು ಲೈಸೆನ್ಸ್‌ನ ಸಿಂಧುತ್ವದ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಮೊದಲೇ ಸಲ್ಲಿಸಿದ್ದರೆ, ಆ ಅರ್ಜಿಯ ಮೇಲೆ ಆದೇಶವನ್ನು ಹೊರಡಿಸುವವರೆಗೆ ಲೈಸೆನ್ಸ್ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

(10) ಲೈಸೆನ್ಸ್, ಮೃತನ ವೈಯಕ್ತಿಕ ಪ್ರತಿನಿಧಿಯ ಅಥವಾ ಅವನ ಕುಟುಂಬದ ಇತರ ಯಾರೇ ಸದಸ್ಯನ ಪ್ರಯೋಜನಕ್ಕಾಗಿ,–

(ಎ) ಮೃತನ ಮರಣದ ದಿನದಿಂದ ಪ್ರಾರಂಭವಾಗುವ ಮೂರು ತಿಂಗಳ ಅವಧಿಯು; ಅಥವಾ

(ಬಿ) ಗೊತ್ತುಪಡಿಸಿದ ಅಧಿಕಾರಿಯು ಅನುಮತಿಸಬಹುದಾದಂಥ ಹೆಚ್ಚಿನ ಅವಧಿಯು

– ಮುಕ್ತಾಯವಾಗುವವರೆಗೆ ಅಸ್ತಿತ್ವದಲ್ಲಿರತಕ್ಕದ್ದು.

**32. ಸುಧಾರಣೆಗಾಗಿ ನೋಟೀಸುಗಳು.–** (1) ಗೊತ್ತುಪಡಿಸಿದ ಅಧಿಕಾರಿಯು, ಈ ಪ್ರಕರಣವು ಯಾವ ವಿನಿಯಮಗಳಿಗೆ ಅನ್ವಯವಾಗುವುದೋ ಆ ಯಾವುವೇ ವಿನಿಯಮಗಳನ್ನು ಪಾಲಿಸಲು ಯಾರೇ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ವಿಫಲನಾಗಿರುವನೆಂದು ನಂಬಲು ಯುಕ್ತ ಕಾರಣವನ್ನು ಹೊಂದಿದ್ದರೆ, ಅವನು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ನೋಟೀಸನ್ನು (ಈ ಅಧಿನಿಯಮದಲ್ಲಿ "ಸುಧಾರಣೆಗಾಗಿ ನೋಟೀಸು" ಎಂಬುದುದಾಗಿ ಉಲ್ಲೇಖಿಸಿದೆ) ಜಾರಿ ಮಾಡುವ ಮೂಲಕ.–

(ಎ) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ವಿನಿಯಮಗಳನ್ನು ಪಾಲಿಸಲು ವಿಫಲನಾಗಿದ್ದಾನೆಂದು ನಂಬಲು ಇರುವ ಕಾರಣಗಳನ್ನು ತಿಳಿಸಬಹುದು;

(ಬಿ) ವಿನಿಯಮಗಳನ್ನು ಹಾಗೆ ಪಾಲಿಸಲು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ವಿಫಲನಾದುದಕ್ಕೆ ಯಾವ ವಿಷಯಗಳು ಕಾರಣವಾದುವೊ ಆ ವಿಷಯಗಳನ್ನು ನಿರ್ದಿಷ್ಟಪಡಿಸಬಹುದು;

(ಸಿ) ವಿನಿಯಮಗಳ ಪಾಲನೆಯನ್ನು ಸುನಿಶ್ಚಿತಪಡಿಸುವ ಸಲುವಾಗಿ, ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು, ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸದರಿ ಪ್ರಾಧಿಕಾರವು ಅಭಿಪ್ರಾಯಪಡುವುದೋ ಆ ಕ್ರಮಗಳನ್ನು ನಿರ್ದಿಷ್ಟಪಡಿಸಬಹುದು; ಮತ್ತು

(ಡಿ) ಆ ಕ್ರಮಗಳನ್ನು ಅಥವಾ ಕೊನೇಪಕ್ಷ ಅವುಗಳಿಗೆ ತತ್ಸಮಾನವಾದಂಥ ಕ್ರಮಗಳನ್ನು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯುಕ್ತ ಅವಧಿಯೊಳಗೆ, (ಹದಿನಾಲ್ಕು ದಿನಗಳಿಗೆ ಕಡಿಮೆಯಲ್ಲದ) ತೆಗೆದುಕೊಳ್ಳುವಂತೆ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನನ್ನು ಅಗತ್ಯಪಡಿಸಬಹುದು.

(2) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಸುಧಾರಣೆಗಾಗಿ ನೋಟೀಸನ್ನು ಪಾಲಿಸಲು ವಿಫಲನಾದರೆ, ಆತನ ಲೈಸೆನ್ಸನ್ನು ಅಮಾನತುಗೊಳಿಸಬಹುದು.

(3) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು, ಸುಧಾರಣೆಗಾಗಿ ನೋಟೀಸನ್ನು ಪಾಲಿಸಲು ಮತ್ತೂ ವಿಫಲನಾದರೆ, ಗೊತ್ತುಪಡಿಸಿದ ಅಧಿಕಾರಿಯು, ಕಾರಣ ತೋರಿಸಲು ಲೈಸೆನ್ಸುದಾರನಿಗೆ ಅವಕಾಶವನ್ನು ನೀಡಿದ ತರುವಾಯ, ಅವನಿಗೆ ಮಂಜೂರು ಮಾಡಿರುವ ಲೈಸೆನ್ಸನ್ನು ರದ್ದುಗೊಳಿಸಬಹುದು:

ಪರಂತು, ಗೊತ್ತುಪಡಿಸಿದ ಅಧಿಕಾರಿಯು, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಯಾವುದೇ ಲೈಸೆನ್ಸನ್ನು ಕೂಡಲೇ ಅಮಾನತುಗೊಳಿಸಬಹುದು.

(4) ಯಾರೇ ವ್ಯಕ್ತಿಯು,–

(ಎ) ಸುಧಾರಣೆಗಾಗಿ ನೀಡಿದ ನೋಟೀಸಿನಿಂದ; ಅಥವಾ

(ಬಿ) ಸುಧಾರಣೆಗೆ ಸಂಬಂಧಿಸಿದಂತೆ ಪ್ರಮಾಣಪತ್ರವನ್ನು ನೀಡಲು ನಿರಾಕರಿಸುವುದರಿಂದ; ಅಥವಾ

(ಸಿ) ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ರದ್ದುಪಡಿಸಿರುವುದರಿಂದ ಅಥವಾ ಅಮಾನತುಗೊಳಿಸಿರುವುದರಿಂದ ಅಥವಾ ಹಿಂತೆಗೆದುಕೊಂಡಿರುವುದರಿಂದ

– ಬಾಧಿತನಾದಲ್ಲಿ ಅವನು, ಆಹಾರ ಸುರಕ್ಷತಾ ಆಯುಕ್ತನಿಗೆ ಅಪೀಲನ್ನು ಸಲ್ಲಿಸಬಹುದು. ಅದರ ಮೇಲೆ ಅವನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(5) ಅಂಥ ಅಪೀಲನ್ನು ಯಾವ ಅವಧಿಯೊಳಗೆ ಸಲ್ಲಿಸಬೇಕಾಗಿದೆಯೋ ಆ ಅವಧಿಯು,–

(ಎ) ಅಪೀಲು ಸಲಿಸಲು ಇಚ್ಛಿಸುವ ವ್ಯಕ್ತಿಗೆ ತೀರ್ಮಾನದ ನೋಟೀಸನ್ನು ಯಾವ ದಿನಾಂಕದಂದು ಜಾರಿಮಾಡಲಾಯಿತೋ ಆ ದಿನಾಂಕದಿಂದ ಹದಿನೈದು ದಿನಗಳು ಆಗಿರತಕ್ಕದ್ದು; ಅಥವಾ

(ಬಿ) ಉಪಪ್ರಕರಣ (1)ರ ಮೇರೆಗಿನ ಅಪೀಲಿನ ಸಂದರ್ಭದಲ್ಲಿ, ಸದರಿ ಅವಧಿ ಅಥವಾ ಸುಧಾರಣೆಗಾಗಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿ ಇವುಗಳಲ್ಲಿ ಯಾವುದು ಮುಂಚಿತವಾಗಿ ಮುಕ್ತಾಯಗೊಳ್ಳುವುದೋ ಆ ಅವಧಿ ಆಗಿರತಕ್ಕದ್ದು,–

**ವಿವರಣೆ:** ಈ ಉಪಪ್ರಕರಣದ ಉದ್ದೇಶಕ್ಕಾಗಿ, ದೂರನ್ನು ಸಲ್ಲಿಸಿದರೆ, ಅಪೀಲನ್ನು ಸಲ್ಲಿಸಿದಂತೆಯೇ ಎಂದು ಭಾವಿಸತಕ್ಕದ್ದು.

**33. ಪ್ರತಿಬಂಧ ಆದೇಶಗಳು.–** (1) (ಎ) ಯಾರೇ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಈ ಅಧಿನಿಯಮದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಮತ್ತು

(ಬಿ) ಯಾವ ನ್ಯಾಯಾಲಯದಿಂದ ಅಥವಾ ಯಾವ ನ್ಯಾಯಾಲಯದಲ್ಲಿ ಅವನು ಹಾಗೆ ಅಪರಾಧಿಯೆಂದು ನಿರ್ಣೀತನಾಗಿದ್ದಾನೋ ಆ ನ್ಯಾಯಾಲಯಕ್ಕೆ ಆ ಆಹಾರ ವ್ಯಾಪಾರ ವ್ಯವಹಾರದಿಂದ, ಆರೋಗ್ಯಕ್ಕೆ ಅಪಾಯ ಇದೆಯೆಂದು ಮನದಟ್ಟಾದರೆ, ಆ ನ್ಯಾಯಾಲಯವು, ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಆದೇಶದ ಮೂಲಕ ಈ ಮುಂದಿನ ಪ್ರತಿಬಂಧಗಳನ್ನು ವಿಧಿಸಬಹುದು, ಎಂದರೆ:–

(i) ಆಹಾರ ವ್ಯಾಪಾರ ವ್ಯವಹಾರದ ಉದ್ದೇಶಗಳಿಗಾಗಿ ಸಂಸ್ಕರಣೆ ಅಥವಾ ಉಪಚಾರದ ವಿಧಾನವನ್ನು ಬಳಸುವುದರ ಮೇಲೆ ಪ್ರತಿಬಂಧ;

(ii) ಆಹಾರ ವ್ಯಾಪಾರ ವ್ಯವಹಾರದ ಅಥವಾ ಅದೇ ವರ್ಗದ ಅಥವಾ ಪ್ರಕಾರದ ಇತರ ಯಾವುದೇ ಆಹಾರ ವ್ಯಾಪಾರ ವ್ಯವಹಾರದ ಉದ್ದೇಶಗಳಿಗಾಗಿ ಆವರಣಗಳನ್ನು ಅಥವಾ ಸಾಧನ ಸಾಮಗ್ರಿಗಳನ್ನು ಬಳಸುವುದರ ಮೇಲೆ ಪ್ರತಿಬಂಧ;

(iii) ಯಾವುದೇ ಆಹಾರ ವ್ಯಾಪಾರ ವ್ಯವಹಾರದ ಉದ್ದೇಶಕ್ಕಾಗಿ ಆವರಣಗಳನ್ನು ಅಥವಾ ಸಾಧನ ಸಾಮಗ್ರಿಗಳನ್ನು ಬಳಸುವುದರ ಮೇಲೆ ಪ್ರತಿಬಂಧ.

(2) ಯಾವುದೇ ಆಹಾರ ವ್ಯಾಪಾರ ವ್ಯವಹಾರದಲ್ಲಿ ಭಾಗವಹಿಸುವ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನ ಮೇಲೆ ಅಥವಾ ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ವರ್ಗದ ಅಥವಾ ಪ್ರಕಾರದ ಯಾವುದೇ ಆಹಾರ ವ್ಯಾಪಾರ ವ್ಯವಹಾರದ

ಮೇಲೆ ಪ್ರತಿಬಂಧ ವಿಧಿಸುವುದು ಅವಶ್ಯವೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಆದೇಶದ ಮೂಲಕ ಅದು ಹಾಗೆ ಮಾಡಬಹುದು.

(3) ಉಪಪ್ರಕರಣ (1)ರ ಅಥವಾ ಉಪಪ್ರಕರಣ (2)ರ ಮೇರೆಗೆ ಆದೇಶವನ್ನು (ಈ ಅಧಿನಿಯಮದಲ್ಲಿ 'ಪ್ರತಿಬಂಧಕ ಆದೇಶ' ಎಂದು ಉಲ್ಲೇಖಿಸಿದೆ) ಹೊರಡಿಸಿದ ತರುವಾಯ ಕಾರ್ಯಸಾಧ್ಯವಾದಷ್ಟು ಬೇಗನೆ, ಸಂಬಂಧಪಟ್ಟ ಆಹಾರ ಸುರಕ್ಷತಾ ಅಧಿಕಾರಿಯು,-

(ಎ) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ಆದೇಶದ ಒಂದು ಪ್ರತಿಯನ್ನು ಜಾರಿಮಾಡತಕ್ಕದ್ದು; ಮತ್ತು

(ಬಿ) ಉಪಪ್ರಕರಣ (1)ರ ಮೇರೆಗಿನ ಆದೇಶದ ಸಂದರ್ಭದಲ್ಲಿ, ಆಹಾರ ವ್ಯಾಪಾರ ವ್ಯವಹಾರದ ಉದ್ದೇಶಗಳಿಗಾಗಿ ಬಳಸುವಂಥ ಆವರಣಗಳ ಎದ್ದುಕಾಣುವ ಜಾಗದಲ್ಲಿ ಆದೇಶದ ಪ್ರತಿಯನ್ನು ಅಂಟಿಸತಕ್ಕದ್ದು ಮತ್ತು ಗೊತ್ತಿದ್ದೂ ಅಂಥ ಆದೇಶವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಮೂರು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(4) ಸಂಬಂಧಪಟ್ಟ ಆಹಾರ ಸುರಕ್ಷತಾ ಅಧಿಕಾರಿಯು, ಪ್ರತಿಬಂಧಕ ಆದೇಶವನ್ನು ಕೊನೆಗೊಳಿಸುವುದನ್ನು ಸಮರ್ಥಿಸುವ ಸಾಕಷ್ಟು ಕ್ರಮಗಳನ್ನು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ತೆಗೆದುಕೊಂಡಿದ್ದಾನೆಂಬ ಬಗ್ಗೆ ಪ್ರಮಾಣಪತ್ರವನ್ನು, ಅಂಥ ಪ್ರಮಾಣಪತ್ರಕ್ಕಾಗಿ ಕೋರಿ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಸಲ್ಲಿಸಿದ ಅರ್ಜಿಯ ಮೇಲೆ ಅವನು ಅಂಥ ಕ್ರಮಗಳನ್ನು ತೆಗೆದುಕೊಂಡಿದ್ದಾನೆಂದು ತನಗೆ ಮನವರಿಕೆಯಾದ ಏಳು ದಿನಗಳ ಒಳಗೆ, ಗೊತ್ತುಪಡಿಸಿದ ಅಧಿಕಾರಿಯ ಅನುಮೋದನೆ ಪಡೆದುಕೊಂಡು ನೀಡತಕ್ಕದ್ದು ಅಥವಾ ಸದರಿ ಅಧಿಕಾರಿಯು, –

(ಎ) ತನಗೆ ಹಾಗೆ ಮನವರಿಕೆಯಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಕಾರ್ಯಸಾಧ್ಯವಾದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ ಹದಿನಾಲ್ಕು ದಿನಗಳೊಳಗೆ ನಿರ್ಧರಿಸತಕ್ಕದ್ದು; ಮತ್ತು

(ಬಿ) ತನಗೆ ಹಾಗೆ ಮನವರಿಕೆಯಾಗಿಲ್ಲವೆಂದು ಆತನು ನಿರ್ಧರಿಸಿದರೆ, ಆ ನಿರ್ಧರಣೆಗೆ ಕಾರಣಗಳನ್ನು ತಿಳಿಸಿ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ನೋಟೀಸನ್ನು ನೀಡತಕ್ಕದ್ದು.

(5) ಪ್ರತಿಬಂಧಕ ಆದೇಶವನ್ನು ಹೊರಡಿಸಿದ ನಂತರ, ಆರು ತಿಂಗಳಿಗೆ ಕಡಿಮೆಯಿಲ್ಲದ ಅವಧಿಯೊಳಗೆ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಸಲ್ಲಿಸಿದ ಅರ್ಜಿಯ ಮೇಲೆ ಪ್ರತಿಬಂಧಕ ಆದೇಶವನ್ನು ಕೊನೆಗೊಳಿಸುವುದನ್ನು ಸಮರ್ಥಿಸುವ ಸಾಕಷ್ಟು ಕ್ರಮಗಳನ್ನು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ತೆಗೆದುಕೊಂಡಿದ್ದಾನೆಂದು ನ್ಯಾಯಾಲಯಕ್ಕೆ ಮನವರಿಕೆಯಾದ ನಂತರ ಪ್ರತಿಬಂಧಕ ಆದೇಶವು ಪರಿಣಾಮಕಾರಿಯಾಗಿರುವುದು ನಿಂತು ಹೋಗತಕ್ಕದ್ದು.

(6) ನ್ಯಾಯಾಲಯವು, ಪ್ರಕರಣದ ಎಲ್ಲಾ ಸನ್ನಿವೇಶಗಳನ್ನು ಅದರಲ್ಲೂ ಮುಖ್ಯವಾಗಿ ಆದೇಶವನ್ನು ನೀಡಿದಾಗಿನಿಂದ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನ ನಡತೆಯನ್ನು ಗಮನದಲ್ಲಿಟ್ಟುಕೊಂಡು, ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಸಲ್ಲಿಸಿದ ಅರ್ಜಿಯ ಮೇಲೆ ನಿರ್ದೇಶನ ನೀಡುವುದು ಸೂಕ್ತವೆಂದು ನ್ಯಾಯಾಲಯವು ಭಾವಿಸಿದರೆ, ನಿರ್ದೇಶನವನ್ನು ನೀಡತಕ್ಕದ್ದು; ಆದರೆ ಅಂಥ ಅರ್ಜಿಯನ್ನು,-

(ಎ) ಪ್ರತಿಬಂಧ ಆದೇಶವನ್ನು ನೀಡಿದ ನಂತರ ಆರು ತಿಂಗಳೊಳಗೆ; ಅಥವಾ

(ಬಿ) ಅಂಥ ನಿರ್ದೇಶನಕ್ಕಾಗಿ ಕೋರಿ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಹಿಂದಿನ ಅರ್ಜಿಯನ್ನು ಸಲ್ಲಿಸಿದ ನಂತರ ಮೂರು ತಿಂಗಳುಗಳೊಳಗೆ

– ಸಲ್ಲಿಸಿರದಿದ್ದರೆ ಅಂಥ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ,–

(i) ಮೇಲೆ ಮಾಡಿದ ಯಾವುದೇ ಉಲ್ಲೇಖವು, ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ಅದು ಅನ್ವಯವಾಗುವಂತೆಯೇ ಆಹಾರ ವ್ಯಾಪಾರ ವ್ಯವಹಾರದ ವ್ಯವಸ್ಥಾಪಕನಿಗೂ ಅನ್ವಯವಾಗತಕ್ಕದ್ದು; ಮತ್ತು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ಮಾಡಿದ ಯಾವುದೇ ಉಲ್ಲೇಖವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ii) ಆಹಾರ ವ್ಯಾಪಾರ ವ್ಯವಹಾರಕ್ಕೆ ಸಂಬಂಧಪಟ್ಟಂತೆ "ವ್ಯವಸ್ಥಾಪಕ" ಎಂದರೆ, ದಿನನಿತ್ಯದ ವ್ಯಾಪಾರ ವ್ಯವಹಾರವನ್ನು ಅಥವಾ ವ್ಯಾಪಾರ ವ್ಯವಹಾರದ ಯಾವುದೇ ಭಾಗವನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಯಾರಿಗೆ ವಹಿಸಿದ್ದನೊ ಆ ಯಾರೇ ವ್ಯಕ್ತಿ.

**34. ತುರ್ತು ಪ್ರತಿಬಂಧ ನೋಟೀಸುಗಳು ಮತ್ತು ಆದೇಶಗಳು.–** (1) ಗೊತ್ತುಪಡಿಸಿದ ಅಧಿಕಾರಿಗೆ ಯಾವುದೇ ಆಹಾರ ವ್ಯಾಪಾರ ವ್ಯವಹಾರದಿಂದ ಆರೋಗ್ಯಕ್ಕೆ ಅಪಾಯ ಉಂಟಾಗುವ ಪರಿಸ್ಥಿತಿ ಇದೆ ಎಂದು ಮನವರಿಕೆಯಾದರೆ, ಅವನು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ನೋಟೀಸನ್ನು (ಈ ಅಧಿನಿಯಮದಲ್ಲಿ "ತುರ್ತು ಪ್ರತಿಬಂಧ ನೋಟೀಸು" ಎಂದು ಉಲ್ಲೇಖಿಸಲಾಗಿದೆ) ನೀಡಿದ ತರುವಾಯ ಪ್ರತಿಬಂಧವನ್ನು ವಿಧಿಸುವುದಕ್ಕಾಗಿ ಆಹಾರ ಸುರಕ್ಷತಾ ಆಯುಕ್ತನಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) ಆಹಾರ ಸುರಕ್ಷತಾ ಆಯುಕ್ತನಿಗೆ, ಅಂಥ ಅಧಿಕಾರಿಯು ಸಲ್ಲಿಸಿದ ಅರ್ಜಿಯ ಮೇಲೆ ಯಾವುದೇ ಆಹಾರ ವ್ಯಾಪಾರ ವ್ಯವಹಾರದಿಂದ ಆರೋಗ್ಯಕ್ಕೆ ಅಪಾಯವುಂಟಾಗುವ ಪರಿಸ್ಥಿತಿಯಿದೆ ಎಂದು ಮನವರಿಕೆಯಾದರೆ, ಅವನು ಆದೇಶದ ಮೂಲಕ ಪ್ರತಿಬಂಧವನ್ನು ವಿಧಿಸತಕ್ಕದ್ದು.

(3) ಗೊತ್ತುಪಡಿಸಿದ ಅಧಿಕಾರಿಯು, ತುರ್ತು ಪ್ರತಿಬಂಧ ಆದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸುವ ತನ್ನ ಆಶಯವನ್ನು ತಿಳಿಸಿ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ನೋಟೀಸನ್ನು ಅರ್ಜಿಯ ದಿನಾಂಕಕ್ಕೆ ಕನಿಷ್ಠಪಕ್ಷ ಒಂದು ದಿನ ಮುಂಚೆ ನೀಡಿದ್ದ ಹೊರತು, ತುರ್ತು ಪ್ರತಿಬಂಧ ಆದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ.

(4) ತುರ್ತು ಪ್ರತಿಬಂಧಕ ಆದೇಶವನ್ನು ಮಾಡಿದ ತರುವಾಯ ಕಾರ್ಯಸಾಧ್ಯವಾದಷ್ಟು ಬೇಗನೆ, ಗೊತ್ತುಪಡಿಸಿದ ಅಧಿಕಾರಿಯು ಆಹಾರ ಸುರಕ್ಷತಾ ಅಧಿಕಾರಿಯನ್ನು,–

(ಎ) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ಆದೇಶದ ಒಂದು ಪ್ರತಿಯನ್ನು ಜಾರಿ ಮಾಡುವಂತೆ; ಅಥವಾ

(ಬಿ) ಆ ವ್ಯಾಪಾರ ವ್ಯವಹಾರದ ಉದ್ದೇಶಗಳಿಗಾಗಿ ಬಳಸುವಂಥ ಆವರಣಗಳ ಎದ್ದು ಕಾಣುವ ಜಾಗದಲ್ಲಿ ಆದೇಶದ ಪ್ರತಿಯನ್ನು ಅಂಟಿಸುವಂತೆ

– ಅಗತ್ಯಪಡಿಸತಕ್ಕದ್ದು ಮತ್ತು ಅಂಥ ಆದೇಶವನ್ನು ಗೊತ್ತಿದ್ದೂ ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(5) ತುರ್ತು ಪ್ರತಿಬಂಧ ಆದೇಶವನ್ನು ಕೊನೆಗೊಳಿಸುವುದನ್ನು ಸಮರ್ಥಿಸುವ ಸಾಕಷ್ಟು ಕ್ರಮಗಳನ್ನು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ತೆಗೆದುಕೊಂಡಿರುವನೆಂದು ಗೊತ್ತುಪಡಿಸಿದ ಅಧಿಕಾರಿಗೆ ಮನವರಿಕೆಯಾದ ಬಗ್ಗೆ ಪ್ರಮಾಣ ಪತ್ರವನ್ನು ಅವನು ನೀಡಿದ ನಂತರ ತುರ್ತು ಪ್ರತಿಬಂಧ ಆದೇಶವು ಪರಿಣಾಮಕಾರಿಯಾಗಿರುವುದು ನಿಂತು ಹೋಗತಕ್ಕದ್ದು.

(6) ಗೊತ್ತುಪಡಿಸಿದ ಅಧಿಕಾರಿಯು, ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಅಂಥ ಪ್ರಮಾಣಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಏಳು ದಿನಗಳ ಒಳಗೆ ಉಪಪ್ರಕರಣ (5)ರ ಮೇರೆಗೆ ಒಂದು ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ತನಗೆ ಮನವರಿಕೆಯಾಗದಿದ್ದರೆ ಸದರಿ ಅಧಿಕಾರಿಯು ಅಂಥ ನಿರ್ಣಯಕ್ಕೆ ಕಾರಣಗಳನ್ನು ತಿಳಿಸಿ ಹತ್ತು ದಿನಗಳ ಅವಧಿಯೊಳಗೆ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ನೋಟೀಸನ್ನು ನೀಡತಕ್ಕದ್ದು.

**35. ಆಹಾರ ವಿಷ ಕುರಿತ ಅಧಿಸೂಚನೆ.–** ಆಹಾರ ಪ್ರಾಧಿಕಾರವು, ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸ್ಥಳೀಯ ಪ್ರದೇಶದಲ್ಲಿ ತಮ್ಮ ವೃತ್ತಿಯನ್ನು ನಡೆಸುತ್ತಿರುವ ನೋಂದಾಯಿತ ವೈದ್ಯಕೀಯ ವೃತ್ತಿಗರನ್ನು, ತಮ್ಮ ಗಮನಕ್ಕೆ ಬರುವ ಆಹಾರ ವಿಷ ಕುರಿತ ಎಲ್ಲ ಘಟನೆಗಳನ್ನು ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗೆ ವರದಿ ಮಾಡುವಂತೆ ಅಗತ್ಯಪಡಿಸಬಹುದು.

**36. ಗೊತ್ತುಪಡಿಸಿದ ಅಧಿಕಾರಿ.–** (1) ಆಹಾರ ಸುರಕ್ಷತಾ ಆಯುಕ್ತನು, ವಿನಿಮಯಗಳ ಮೂಲಕ ನಿರ್ದಿಷ್ಟಪಡಿಸಲಾದಂಥ ಪ್ರದೇಶದಲ್ಲಿ ಆಹಾರ ಸುರಕ್ಷತಾ ನಿರ್ವಹಣೆಯ ಪ್ರಭಾರದಲ್ಲಿರಲು ಉಪ ವಿಭಾಗಾಧಿಕಾರಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಗೊತ್ತುಪಡಿಸಿದ ಅಧಿಕಾರಿಯನ್ನು ಆದೇಶದ ಮೂಲಕ ನೇಮಕ ಮಾಡತಕ್ಕದ್ದು.

(2) ಪ್ರತಿಯೊಂದು ಜಿಲ್ಲೆಗೆ ಒಬ್ಬ ಗೊತ್ತುಪಡಿಸಿದ ಅಧಿಕಾರಿ ಇರತಕ್ಕದ್ದು.

(3) ಗೊತ್ತುಪಡಿಸಿದ ಅಧಿಕಾರಿಯು ನೆರವೇರಿಸಬೇಕಾದ ಪ್ರಕಾರ್ಯಗಳು ಈ ಕೆಳಗಿನಂತೆ ಇರತಕ್ಕದ್ದು, ಎಂದರೆ:–

(ಎ) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕರಿಗೆ ಲೈಸೆನ್ಸನ್ನು ನೀಡುವುದು ಅಥವಾ ಅದನ್ನು ರದ್ದುಪಡಿಸುವುದು;

(ಬಿ) ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಮತ್ತು ವಿನಿಯಮಗಳನ್ನು ಉಲ್ಲಂಘಿಸುವಂಥ ಯಾವುದೇ ಆಹಾರ ಪದಾರ್ಥದ ಮಾರಾಟವನ್ನು ನಿಷೇಧಿಸುವುದು;

(ಸಿ) ತಮ್ಮ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಬರುವಂಥ ಆಹಾರ ಸುರಕ್ಷತಾ ಅಧಿಕಾರಿಯಿಂದ ವರದಿಯನ್ನು ಮತ್ತು ಆಹಾರ ಪದಾರ್ಥಗಳ ಮಾದರಿಗಳನ್ನು ಸ್ವೀಕರಿಸುವುದು ಮತ್ತು ಅವುಗಳನ್ನು ವಿಶ್ಲೇಷಣೆ ಮಾಡಿಸುವುದು;

(ಡಿ) ಕಾರಾವಾಸ ಶಿಕ್ಷೆಯಿಂದ ದಂಡನೀಯವಾಗುವ ಉಲ್ಲಂಘನೆಗಳ ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುವಂತೆ ಆಹಾರ ಸುರಕ್ಷತಾ ಆಯುಕ್ತನಿಗೆ ಶಿಫಾರಸುಗಳನ್ನು ಮಾಡುವುದು;

(ಇ) ಜುಲ್ಮಾನೆಯಿಂದ ದಂಡನೀಯವಾಗುವ ಉಲ್ಲಂಘನೆಗಳ ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್‌ಗೆ ಮಂಜೂರಾತಿ ನೀಡುವುದು ಅಥವಾ ಪ್ರಾಸಿಕ್ಯೂಷನ್‌ಗಳನ್ನು ಪ್ರಾರಂಭಿಸುವುದು;

(ಎಫ್) ಆಹಾರ ಸುರಕ್ಷತಾ ಅಧಿಕಾರಿಗಳು ಮಾಡಿದ ಎಲ್ಲ ತಪಾಸಣೆಗಳ ಮತ್ತು ಅವರ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಅವರು ತೆಗೆದುಕೊಂಡ ಕ್ರಮದ ದಾಖಲೆಯನ್ನು ಇಡುವುದು;

(ಜಿ) ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಯಾವುದೇ ಉಲ್ಲಂಘನೆಗೆ ಸಂಬಂಧಿಸಿದಂತೆ ಲಿಖಿತದಲ್ಲಿ ನೀಡಬಹುದಾದ ಯಾವುದೇ ದೂರಿನ ಬಗ್ಗೆ ತನಿಖೆ ಮಾಡಿಸುವುದು;

(ಹೆಚ್) ಆಹಾರ ಸುರಕ್ಷತಾ ಅಧಿಕಾರಿಯ ವಿರುದ್ಧ ಲಿಖಿತದಲ್ಲಿ ನೀಡಬಹುದಾದ ಯಾವುದೇ ದೂರಿನ ಬಗ್ಗೆ ತನಿಖೆ ನಡೆಸುವುದು; ಮತ್ತು

(ಐ) ಆಹಾರ ಸುರಕ್ಷತಾ ಆಯುಕ್ತನು ವಹಿಸಿಕೊಡಬಹುದಾದಂಥ ಇತರ ಕರ್ತವ್ಯಗಳನ್ನು ನೇರವೇರಿಸುವುದು.

37. **ಆಹಾರ ಸುರಕ್ಷತಾ ಅಧಿಕಾರಿ.–** (1) ಆಹಾರ ಸುರಕ್ಷತಾ ಆಯುಕ್ತನು, ಕೇಂದ್ರ ಸರ್ಕಾರವು ನಿಯಮಿಸಿದ ಅರ್ಹತೆಗಳನ್ನು ಹೊಂದಿರುವ, ತಾನು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಗಳನ್ನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಮೇರೆಗಿನ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ, ಅವರಿಗೆ ತಾನು ವಹಿಸಿಕೊಡಬಹುದಾದಂಥ ಸ್ಥಳೀಯ ಪ್ರದೇಶಗಳಿಗೆ ಆಹಾರ ಸುರಕ್ಷತಾ ಅಧಿಕಾರಿಗಳನ್ನಾಗಿ ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು.

(2) ರಾಜ್ಯ ಸರ್ಕಾರವು, ನಿರ್ದಿಷ್ಟಪಡಿಸಿದ ಅಧಿಕಾರ ವ್ಯಾಪ್ತಿಯೊಳಗೆ ಆಹಾರ ಸುರಕ್ಷತಾ ಅಧಿಕಾರಿಯ ಪ್ರಕಾರ್ಯಗಳನ್ನು ನಿರ್ವಹಿಸಲು ಉಪಪ್ರಕರಣ (1)ರ ಮೇರೆಗೆ ಗೊತ್ತುಪಡಿಸಿದ ಅರ್ಹತೆಗಳನ್ನು ಹೊಂದಿರುವ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು.

38. **ಆಹಾರ ಸುರಕ್ಷತಾ ಅಧಿಕಾರಿಯ ಅಧಿಕಾರಗಳು.–** (1) ಆಹಾರ ಸುರಕ್ಷತಾ ಅಧಿಕಾರಿಯು,–

(ಎ) ಈ ಅಧಿನಿಯಮದ ಯಾವುವೇ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಿದ ವಿನಿಯಮಗಳ ಅಥವಾ ಆದೇಶಗಳ ಮೇರೆಗಿನ ವ್ಯವಹರಣೆಗಳಲ್ಲಿ ಸಾಕ್ಷ್ಯವಾಗಿ ಅಗತ್ಯಪಡಿಸಬಹುದಾದಂಥವುಗಳೆಂದು ತಾನು ನಂಬಲು ಕಾರಣ ಇರುವಂಥ,–

(i) ಮಾನವ ಬಳಕೆಗಾಗಿ ಮಾರಾಟ ಮಾಡಲು ಉದ್ದೇಶಿಸಿರುವುದಾಗಿ ಅಥವಾ ಮಾರಾಟ ಮಾಡಿರುವುದಾಗಿ ಅವನಿಗೆ ಕಂಡು ಬರುವ ಯಾವುದೇ ಆಹಾರದ ಅಥವಾ ಯಾವುದೇ ಪದಾರ್ಥದ; ಅಥವಾ

(ii) ಯಾವುವೇ ಅಂಥ ಆವರಣಗಳ ಮೇಲೆ ಅಥವಾ ಅವುಗಳಲ್ಲಿ ಅವನಿಗೆ ಕಂಡುಬಂದ ಯಾವುದೇ ಆಹಾರ ಪದಾರ್ಥದ ಅಥವಾ ವಸ್ತುವಿನ

– ಮಾದರಿಯನ್ನು ತೆಗೆದುಕೊಳ್ಳಬಹುದು; ಅಥವಾ

(ಬಿ) ಯಾವ ಆಹಾರ ಪದಾರ್ಥವು, ಈ ಅಧಿನಿಯಮವನ್ನು ಅಥವಾ ಅದರ ಮೇರೆಗೆ ರಚಿಸಿದ ವಿನಿಯಮಗಳನ್ನು ಉಲ್ಲಂಘಿಸಿದೆಯೆಂದು ಆಹಾರ ಸುರಕ್ಷತಾ ಅಧಿಕಾರಿಗೆ ಕಂಡುಬರುವುದೋ ಆ ಯಾವುದೇ ಆಹಾರ ಪದಾರ್ಥವನ್ನು ವಶಪಡಿಸಿಕೊಳ್ಳಬಹುದು; ಮತ್ತು

(ಸಿ) ಮಾದರಿಯನ್ನು ತೆಗೆದುಕೊಂಡ ತರುವಾಯ ಅಂಥ ಆಹಾರ ಪದಾರ್ಥವನ್ನು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನ ಸುರಕ್ಷಿತ ಅಭಿರಕ್ಷೆಯಲ್ಲಿ ಇಡಬಹುದು;

ಮತ್ತು ಈ ಎರಡೂ ಪ್ರಕರಣಗಳಲ್ಲಿ ಯಾವ ಸ್ಥಳೀಯ ಪ್ರದೇಶದ ಒಳಗೆ ಅಂಥ ಮಾದರಿಯನ್ನು ತೆಗೆದುಕೊಳ್ಳಲಾಯಿತೋ ಆ ಸ್ಥಳೀಯ ಪ್ರದೇಶದ ಆಹಾರ ವಿಶ್ಲೇಷಕನಿಗೆ, ವಿಶ್ಲೇಷಣೆಗಾಗಿ ಅದನ್ನು ಕಳುಹಿಸಬಹುದು:

ಪರಂತು, ಆಹಾರ ಸುರಕ್ಷತಾ ಅಧಿಕಾರಿಯು ಅಂಥ ಆಹಾರ ಪದಾರ್ಥವನ್ನು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನ ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟಾಗ, ಆಹಾರ ಸುರಕ್ಷತಾ ಅಧಿಕಾರಿಯು ಸೂಕ್ತವೆಂದು ಭಾವಿಸುವ ಒಂದು ಅಥವಾ ಹೆಚ್ಚು ಭದ್ರತೆಗಳೊಂದಿಗೆ ಅಂಥ ಪದಾರ್ಥದ ಮೌಲ್ಯಕ್ಕೆ ಸಮನಾದ ಹಣದ ಮೊತ್ತಕ್ಕಾಗಿ ಬಾಂಡನ್ನು ಬರೆದುಕೊಡಲು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನನ್ನು ಅಗತ್ಯಪಡಿಸಬಹುದು ಮತ್ತು ತದನುಸಾರವಾಗಿ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಬಾಂಡನ್ನು ಬರೆದುಕೊಡತಕ್ಕದ್ದು.

(2) ಆಹಾರ ಸುರಕ್ಷತಾ ಅಧಿಕಾರಿಯು, ಆಹಾರ ಪದಾರ್ಥವನ್ನು ಯಾವ ಸ್ಥಳದಲ್ಲಿ ತಯಾರಿಸಲಾಗುತ್ತಿದೆಯೋ, ಅಥವಾ ಮಾರಾಟಕ್ಕಾಗಿ ದಾಸ್ತಾನು ಮಾಡಲಾಗಿದೆಯೋ, ಅಥವಾ ಯಾವುದೇ ಇತರ ಆಹಾರ ಪದಾರ್ಥದ ತಯಾರಿಕೆಗಾಗಿ ದಾಸ್ತಾನು ಮಾಡಲಾಗಿದೆಯೋ ಅಥವಾ ಮಾರಾಟಕ್ಕಾಗಿ ಇಡಲಾಗಿದೆಯೋ ಅಥವಾ ಪ್ರದರ್ಶಿಸಲಾಗಿದೆಯೋ ಮತ್ತು ಯಾವ ಸ್ಥಳದಲ್ಲಿ ಯಾವುದೇ ಕಲಬೆರೆಕೆಕಾರಕಗಳನ್ನು ತಯಾರಿಸಲಾಗುತ್ತಿದೆಯೋ ಅಥವಾ ಇಡಲಾಗಿದೆಯೋ ಆ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು ಮತ್ತು ತಪಾಸಣೆ ಮಾಡಬಹುದು ಮತ್ತು ಅಂಥ ಆಹಾರ ಪದಾರ್ಥಗಳ ಮಾದರಿಗಳನ್ನು ಅಥವಾ ಕಲಬೆರೆಕೆಕಾರಕಗಳನ್ನು ವಿಶ್ಲೇಷಣೆಗಾಗಿ ತೆಗೆದುಕೊಳ್ಳಬಹುದು.

(3) ಯಾವುದೇ ಮಾದರಿಯನ್ನು ತೆಗೆದುಕೊಂಡಾಗ, ಅದರ ಬೆಲೆಯನ್ನು, ಅಹಾರ ಪದಾರ್ಥವನ್ನು ಸಾಮಾನ್ಯವಾಗಿ ಸಾರ್ವಜನಿಕರಿಗೆ ಯಾವ ಬೆಲೆಯಲ್ಲಿ ಮಾರಾಟ ಮಾಡಲಾಗುವುದೋ ಆ ಬೆಲೆಯಲ್ಲಿ ಲೆಕ್ಕ ಹಾಕಿ ಯಾವ ವ್ಯಕ್ತಿಯಿಂದ ಮಾದರಿಯನ್ನು ತೆಗೆದುಕೊಳ್ಳಲಾಯಿತೋ, ಆ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

(4) ಉಪಪ್ರಕರಣ (1)ರ (ಬಿ) ಖಂಡದ ಮೇರೆಗೆ ವಶಪಡಿಸಿಕೊಂಡ ಯಾವುದೇ ಆಹಾರ ಪದಾರ್ಥವು ಬೇಗನೆ ಹಾಳಾಗುವ ಸ್ವರೂಪದ್ದಾಗಿದ್ದಾಗ ಮತ್ತು ಆಹಾರ ಸುರಕ್ಷತಾ ಅಧಿಕಾರಿಗೆ, ಅಂಥ ಆಹಾರ ಪದಾರ್ಥವು ಮಾನವ ಬಳಕೆಗೆ ಸೂಕ್ತವಾದುದಲ್ಲವೆನ್ನುವಷ್ಟು ಕೆಟ್ಟು ಹೋಗಿದೆಯೆಂದು ಮನವರಿಕೆಯಾದಲ್ಲಿ ಆಹಾರ ಸುರಕ್ಷತಾ ಅಧಿಕಾರಿಯು ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ಲಿಖಿತ ನೋಟೀಸನ್ನು ನೀಡಿದ ತರುವಾಯ, ಅಂಥ ಪದಾರ್ಥವನ್ನು ನಾಶಪಡಿಸುವಂತೆ ಮಾಡಬಹುದು.

(5) ಆಹಾರ ಸುರಕ್ಷತಾ ಅಧಿಕಾರಿಯು, ಈ ಪ್ರಕರಣದ ಮೇರೆಗೆ ಯಾವುದೇ ಸ್ಥಳವನ್ನು ಪ್ರವೇಶಿಸುವ ಮತ್ತು ತಪಾಸಣೆ ಮಾಡುವ ಅಧಿಕಾರಗಳನ್ನು ಚಲಾಯಿಸುವಾಗ, ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಮೇರೆಗೆ ಹೊರಡಿಸಿದ ಶೋಧನೆಯ ವಾರೆಂಟನ್ನು ಜಾರಿಗೊಳಿಸುವ ಪೊಲೀಸ್ ಅಧಿಕಾರಿಯು ಒಂದು ಸ್ಥಳವನ್ನು ಶೋಧನೆ ಮತ್ತು ತಪಾಸಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಆ ಸಂಹಿತೆಯಲ್ಲಿರುವ ಉಪಬಂಧಗಳನ್ನು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅನುಸರಿಸತಕ್ಕದ್ದು.

(6) ಯಾವುದೇ ಆಹಾರ ಪದಾರ್ಥದ ತಯಾರಕನ ಅಥವಾ ವಿತರಕನ ಅಥವಾ ಡೀಲರನ ಸ್ವಾಧೀನದಲ್ಲಿ ಕಂಡು ಬರುವ ಅಥವಾ ಅಂಥ ಆವರಣವಾಗಿ ಅವನ ಅಧಿಭೋಗದಲ್ಲಿರುವ ಯಾವುದೇ ಆವರಣದಲ್ಲಿ ಕಂಡು ಬರುವ ಯಾವುದೇ ಕಲಬೆರಕೆಕಾರಕನನ್ನು, ಅದು ತನ್ನ ಬಳಿ ಇರುವುದಕ್ಕೆ ಕಾರಣವನ್ನು ಆಹಾರ ಸುರಕ್ಷತಾ ಅಧಿಕಾರಿಗೆ ಮನವರಿಕೆಯಾಗುವಂತೆ ನೀಡಲು ಅವನು ಅಸಮರ್ಥನಾದಾಗ ಮತ್ತು ಅವನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಕಂಡು ಬರುವ ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ತನಿಖೆಗೆ ಅಥವಾ ವ್ಯವಹರಣೆಗೆ ಉಪಯುಕ್ತವಾಗಬಹುದಾದ ಅಥವಾ ಸುಸಂಗತವಾಗಬಹುದಾದ ಯಾವುದೇ ಲೆಕ್ಕ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಆಹಾರ ಸುರಕ್ಷತಾ ಅಧಿಕಾರಿಯು ವಶಪಡಿಸಿಕೊಳ್ಳಬಹುದು ಮತ್ತು ಅಂಥ ಕಲಬೆರಕೆಕಾರಕದ ಮಾದರಿಯನ್ನು ವಿಶ್ಲೇಷಣೆಗಾಗಿ ಆಹಾರ ವಿಶ್ಲೇಷಕನಿಗೆ ಕಳುಹಿಸಿಕೊಡಬಹುದು:

ಪರಂತು, ಆಹಾರ ಸುರಕ್ಷತಾ ಅಧಿಕಾರಿಯು, ಅವನು ಯಾವ ಪ್ರಾಧಿಕಾರಕ್ಕೆ ಅಧೀನನಾಗಿರುವನೋ ಆ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಅಂಥ ಲೆಕ್ಕ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ವಶಪಡಿಸಿಕೊಳ್ಳತಕ್ಕದ್ದಲ್ಲ.

(7) ಆಹಾರ ಸುರಕ್ಷತಾ ಅಧಿಕಾರಿಯು ಉಪಪ್ರಕರಣ (1)ರ (ಎ) ಖಂಡದ ಅಥವಾ ಉಪಪ್ರಕರಣ (2)ರ ಅಥವಾ ಉಪಪ್ರಕರಣ (4)ರ ಅಥವಾ ಉಪಪ್ರಕರಣ (6)ರ ಮೇರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಾಗ, ಅಂಥ ಕ್ರಮವನ್ನು ತೆಗೆದುಕೊಳ್ಳುವ ಸಮಯದಲ್ಲಿ ಉಪಸ್ಥಿತರಿರುವಂತೆ ಒಬ್ಬರನ್ನು ಅಥವಾ ಹೆಚ್ಚು ವ್ಯಕ್ತಿಗಳನ್ನು ಅವನು ಕೋರಬಹುದು ಮತ್ತು ಅವನ ಸಹಿಯನ್ನು ಅಥವಾ ಅವರ ಸಹಿಗಳನ್ನು ಪಡೆಯತಕ್ಕದ್ದು.

(8) ಉಪಪ್ರಕರಣ (6)ರ ಮೇರೆಗೆ ಯಾವುವೇ ಲೆಕ್ಕ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ವಶಪಡಿಸಿಕೊಂಡಾಗ, ಆಹಾರ ಸುರಕ್ಷತಾ ಅಧಿಕಾರಿಯು, ಯಾವ ವ್ಯಕ್ತಿಯಿಂದ ಅವುಗಳನ್ನು ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದಂಥ ರೀತಿಯಲ್ಲಿ ಆ ವ್ಯಕ್ತಿಯೇ ಪ್ರಮಾಣೀಕರಿಸಿದಂಥ ಅವುಗಳ ಪ್ರತಿಗಳನ್ನು ಅಥವಾ ಅವುಗಳಿಂದ ಉದ್ಧೃತ ಭಾಗಗಳನ್ನು ತೆಗೆದುಕೊಂಡ ನಂತರ, ಅವುಗಳನ್ನು ವಶಕ್ಕೆ ತೆಗದುಕೊಂಡ ದಿನಾಂಕದಿಂದ ಮೂವತ್ತು ದಿನಗಳಿಗೆ ಮೀರದ ಅವಧಿಯೊಳಗೆ ಹಿಂದಿರುಗಿಸತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ಹಾಗೆ ಪ್ರಮಾಣೀಕರಿಸಲು ನಿರಾಕರಿಸಿದಾಗ ಮತ್ತು ಈ ಅಧಿನಿಯಮದ ಮೇರೆಗೆ ಅವನ ವಿರುದ್ಧ ಪ್ರಾಸಿಕ್ಯೂಷನ್ ಹೂಡಿದ್ದಾಗ, ನ್ಯಾಯಾಲಯವು ಪ್ರಮಾಣೀಕರಿಸಿದಂಥ ಅವುಗಳ ಪ್ರತಿಗಳನ್ನು ಮತ್ತು ಅವುಗಳಿಂದ ಉದ್ಧೃತ ಭಾಗಗಳನ್ನು ತೆಗೆದುಕೊಂಡ ನಂತರವಷ್ಟೇ ಅಂಥ ಲೆಕ್ಕ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಅವನಿಗೆ ಹಿಂದಿರುಗಿಸತಕ್ಕದ್ದು.

(9) ಉಪಪ್ರಕರಣ (6)ರ ಮೇರೆಗೆ ಯಾವುದೇ ಕಲಬೆರಕೆಕಾರಕವನ್ನು ವಶಪಡಿಸಿಕೊಂಡಾಗ, ಅಂಥ ಕಲಬೆರಕೆಕಾರಕವು ಕಲಬೆರಕೆಯ ಉದ್ದೇಶಗಳಿಗಾಗಿ ಇರುವಂಥದ್ದಲ್ಲ ಎಂದು ಸಾಬೀತುಪಡಿಸುವ ಹೊಣೆಗಾರಿಕೆಯು ಯಾವ ವ್ಯಕ್ತಿಯ ಸ್ವಾಧೀನದಿಂದ ಅಂಥ ಕಲಬೆರಕೆಕಾರಕವನ್ನು ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಯ ಮೇಲೆ ಇರತಕ್ಕದ್ದು.

(10) ಆಹಾರ ಸುರಕ್ಷತಾ ಆಯುಕ್ತನು, ಆಹಾರ ಸುರಕ್ಷತಾ ಅಧಿಕಾರಿಯ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಕಾಲ ಕಾಲಕ್ಕೆ ನೀಡಬಹುದು, ಅವುಗಳಿಗೆ ಆಹಾರ ಸುರಕ್ಷತಾ ಅಧಿಕಾರಿಯು ಬದ್ಧನಾಗಿರತಕ್ಕದ್ದು:

ಪರಂತು, ಆಹಾರ ಸುರಕ್ಷತಾ ಆಯುಕ್ತನು ಅಂಥ ಆಹಾರ ಸುರಕ್ಷತಾ ಅಧಿಕಾರಿಯ ಅಧಿಕಾರಗಳನ್ನು ನಿರ್ದಿಷ್ಟಪಡಿಸಿದ ಅವಧಿಗೆ ರದ್ದುಗೊಳಿಸಲೂಬಹುದು.

**39. ಕೆಲವು ಪ್ರಕರಣಗಳಲ್ಲಿ ಆಹಾರ ಸುರಕ್ಷತಾ ಅಧಿಕಾರಿಯ ಹೊಣೆಗಾರಿಕೆ.–** ಯಾರೇ ಆಹಾರ ಸುರಕ್ಷತಾ ಅಧಿಕಾರಿಯು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಮೇರೆಗೆ ಅಧಿಕಾರಗಳನ್ನು ಚಲಾಯಿಸುವಾಗ, ಅವನು,–

(ಎ) ಕಿರುಕುಳ ನೀಡುವಂತೆ ಮತ್ತು ಯಾವುದೇ ಸೂಕ್ತ ಆಧಾರವಿಲ್ಲದೆ ಯಾವುದೇ ಆಹಾರ ಪದಾರ್ಥವನ್ನು ಅಥವಾ ಕಲಬೆರಕೆಕಾರಕವನ್ನು ವಶಪಡಿಸಿಕೊಂಡರೆ; ಅಥವಾ

(ಬಿ) ಅವನ ಕರ್ತವ್ಯವನ್ನು ನಿರ್ವಹಿಸುವುದಕ್ಕಾಗಿ ಯಾರೇ ವ್ಯಕ್ತಿಗೆ ತೊಂದರೆ ಉಂಟು ಮಾಡುವ ಯಾವುದೇ ಇತರ ಕೃತ್ಯವನ್ನು ಎಸಗುವುದು ಅವಶ್ಯವೆಂದು ನಂಬಲು ಕಾರಣವಿಲ್ಲದೆ ಇದ್ದಾಗ ಹೊರತು ಅಂಥ ಕೃತ್ಯವನ್ನು ಎಸಗಿದರೆ

– ಈ ಅಧಿನಿಯಮದ ಮೇರೆಗೆ ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು:

ಪರಂತು, ಆಹಾರ ಸುರಕ್ಷತಾ ಅಧಿಕಾರಿಯ ವಿರುದ್ಧ ಯಾವುದೇ ಸುಳ್ಳು ದೂರನ್ನು ನೀಡಿದ್ದು ಮತ್ತು ಹಾಗೆ ಸುಳ್ಳು ದೂರು ಎಂದು ಸಾಬೀತಾದ ಸಂದರ್ಭದಲ್ಲಿ, ಫಿರ್ಯಾದುದಾರನು ಈ ಅಧಿನಿಯಮದ ಮೇರೆಗೆ ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**40. ಖರೀದಿದಾರನು ಆಹಾರವನ್ನು ವಿಶ್ಲೇಷಣೆ ಮಾಡಿಸುವುದು.–** (1) ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದೂ, ಆಹಾರ ಸುರಕ್ಷತಾ ಅಧಿಕಾರಿಯನ್ನು ಹೊರತು ಪಡಿಸಿ ಯಾವುದೇ ಆಹಾರ ಪದಾರ್ಥದ ಖರೀದಿದಾರನನ್ನು,

ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಆಹಾರ ವಿಶ್ಲೇಷಕನಿಂದ ಅಂಥ ಆಹಾರ ಪದಾರ್ಥವನ್ನು ವಿಶ್ಲೇಷಣೆ ಮಾಡಿಸಿಕೊಳ್ಳುವುದಕ್ಕೆ ಮತ್ತು ಅಂಥ ಅವಧಿಯೊಳಗೆ ಆಹಾರ ವಿಶ್ಲೇಷಕನಿಂದ ಅವನ ವಿಶ್ಲೇಷಣೆಯ ವರದಿಯನ್ನು ಪಡೆಯುವುದಕ್ಕೆ ಅಡ್ಡಿಯುಂಟು ಮಾಡುತ್ತದೆಂದು ಭಾವಿಸತಕ್ಕದ್ದಲ್ಲ:

ಪರಂತು, ಅಂಥ ಖರೀದಿದಾರನು ಅಂಥ ಆಹಾರ ಪದಾರ್ಥವನ್ನು ಹಾಗೆ ವಿಶ್ಲೇಷಣೆ ಮಾಡಿಸಿಕೊಳ್ಳುವ ತನ್ನ ಆಶಯವನ್ನು ಆಹಾರ ಪದಾರ್ಥವನ್ನು ಖರೀದಿಸುವ ಸಮಯದಲ್ಲಿ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ ತಿಳಿಸತಕ್ಕದ್ದು:

ಮತ್ತೂ ಪರಂತು, ಆಹಾರ ಪದಾರ್ಥವು ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಥವಾ ವಿನಿಯಮಗಳಿಗೆ ಅನುಗುಣವಾಗಿಲ್ಲವೆಂದು ಆಹಾರ ವಿಶ್ಲೇಷಕನ ವರದಿಯಿಂದ ಕಂಡು ಬಂದರೆ, ಖರೀದಿದಾರನು ಈ ಪ್ರಕರಣದ ಮೇರೆಗೆ ತಾನು ಸಂದಾಯ ಮಾಡಿದ ಶುಲ್ಕವನ್ನು ವಾಪಸ್ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(2) ಮಾದರಿಯು, ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಮತ್ತು ವಿನಿಯಮಗಳನ್ನು ಉಲ್ಲಂಘಿಸಿರುವುದಾಗಿ ಆಹಾರ ವಿಶ್ಲೇಷಕನಿಗೆ ಕಂಡು ಬಂದ ಸಂದರ್ಭದಲ್ಲಿ ಆಹಾರ ವಿಶ್ಲೇಷಕನು ಪ್ರಾಸಿಕ್ಯೂಷನ್‌ಗಾಗಿ ಪ್ರಕರಣ 42ರಲ್ಲಿ ನಿರೂಪಿಸಿರುವ ಕಾರ್ಯವಿಧಾನವನ್ನು ಅನುಸರಿಸುವ ಸಲುವಾಗಿ ಗೊತ್ತುಪಡಿಸಿದ ಅಧಿಕಾರಿಗೆ ತನ್ನ ವರದಿಯನ್ನು ಕಳುಹಿಸತಕ್ಕದ್ದು.

**41. ಶೋಧನೆ ಮಾಡಲು, ವಶಪಡಿಸಿಕೊಳ್ಳಲು, ತನಿಖೆ ಮಾಡಲು, ಪ್ರಾಸಿಕ್ಯೂಷನ್ ಹೂಡಲು ಅಧಿಕಾರ ಮತ್ತು ಅವುಗಳ ಕಾರ್ಯವಿಧಾನ.–** (1) ಪ್ರಕರಣ 31ರ ಉಪಪ್ರಕರಣ (2)ರಲ್ಲಿ ಏನೇ ಒಳಗೊಂಡಿದ್ದರೂ, ಆಹಾರ ಸುರಕ್ಷತಾ ಅಧಿಕಾರಿಯು, ಆಹಾರಕ್ಕೆ ಸಂಬಂಧಪಟ್ಟ ಯಾವುದೇ ಅಪರಾಧವನ್ನು ಮಾಡುವಲ್ಲಿ ಯಾವುದೇ ಸ್ಥಳವು, ಯಾವುದೇ ಆಹಾರ ಪದಾರ್ಥವು ಅಥವಾ ಕಲಬೆರಕೆಕಾರಕವು ಒಳಗೊಂಡಿರುವದೆಂದು ಅವುಗಳ ಬಗ್ಗೆ ಸಕಾರಣ ಯುಕ್ತ ಸಂಶಯ ಇದ್ದರೆ ಅಂಥ ಯಾವುದೇ ಸ್ಥಳವನ್ನು ಶೋಧನೆ ಮಾಡಬಹುದು, ಯಾವುದೇ ಆಹಾರ ಪದಾರ್ಥವನ್ನು ಅಥವಾ ಕಲಬೆರಕೆಕಾರಕವನ್ನು ವಶಪಡಿಸಿಕೊಳ್ಳಬಹುದು ಮತ್ತು ಆ ತರುವಾಯ ತಾನು ತೆಗೆದುಕೊಂಡ ಕ್ರಮಗಳನ್ನು ಗೊತ್ತುಪಡಿಸಿದ ಅಧಿಕಾರಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು:

ಪರಂತು, ಶೋಧನೆಗೆ ಸಾಕ್ಷಿದಾರರು, ಶೋಧನೆ ಮಾಡಿದ ಸ್ಥಳವು ಯಾವ ಪ್ರದೇಶದಲ್ಲಿ ಇರುವುದೋ ಆ ಪ್ರದೇಶದ ನಿವಾಸಿಗಳಲ್ಲ ಎಂಬ ಸಂಗತಿಯ ಕಾರಣ ಮಾತ್ರದಿಂದಲೇ ಶೋಧನೆಯನ್ನು ಕ್ರಮಬದ್ಧವಾದುದಲ್ಲವೆಂದು ಭಾವಿಸತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು, ಶೋಧನೆಗೆ, ವಶಪಡಿಸಿಕೊಳ್ಳುವುದಕ್ಕೆ, ಸಮನ್ ಮಾಡುವುದಕ್ಕೆ, ತನಿಖೆ ಮಾಡುವುದಕ್ಕೆ ಮತ್ತು ಪ್ರಾಸಿಕ್ಯೂಷನ್ ಹೂಡುವದಕ್ಕೆ ಸಂಬಂಧಪಟ್ಟಂತೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಇರುವ ಉಪಬಂಧಗಳು ಈ ಅಧಿನಿಯಮದ ಮೇರೆಗೆ ಆಹಾರ ಸುರಕ್ಷತಾ ಅಧಿಕಾರಿಯು ತೆಗೆದುಕೊಂಡ ಎಲ್ಲ ಕ್ರಮಗಳಿಗೆ ಸಾಧ್ಯವಾಗಬಹುದಾದಷ್ಟರಮಟ್ಟಿಗೆ ಅನ್ವಯವಾಗತಕ್ಕದ್ದು.

**42. ಪ್ರಾಸಿಕ್ಯೂಷನ್‌ನನ್ನು ಪ್ರಾರಂಭಿಸಲು ಕಾರ್ಯವಿಧಾನ.–** (1) ಆಹಾರ ಸುರಕ್ಷತಾ ಅಧಿಕಾರಿಯು, ಆಹಾರ ವ್ಯಾಪಾರ ವ್ಯವಹಾರವನ್ನು ತಪಾಸಣೆ ಮಾಡಲು, ಮಾದರಿಗಳನ್ನು ಪಡೆಯಲು ಮತ್ತು ಅವುಗಳನ್ನು ವಿಶ್ಲೇಷಣೆಗಾಗಿ ಆಹಾರ ವಿಶ್ಲೇಷಕನಿಗೆ ಕಳುಹಿಸಲು ಜವಾಬ್ದಾರನಾಗಿರತಕ್ಕದ್ದು.

(2) ಆಹಾರ ವಿಶ್ಲೇಷಕನು ಆಹಾರ ಸುರಕ್ಷತಾ ಅಧಿಕಾರಿಯಿಂದ ಮಾದರಿಯನ್ನು ಸ್ವೀಕರಿಸಿದ ತರುವಾಯ, ಮಾದರಿಯನ್ನು ವಿಶ್ಲೇಷಿಸತಕ್ಕದ್ದು ಮತ್ತು ಮಾದರಿಯ ಗುಣಪರಿಶೀಲನೆಯ ಮತ್ತು ವಿಶ್ಲೇಷಣೆಯ ವಿಧಾನವನ್ನು ತಿಳಿಸಿ ವಿಶ್ಲೇಷಣಾ ವರದಿಯನ್ನು ಹದಿನಾಲ್ಕು ದಿನಗಳ ಒಳಗೆ ಆಹಾರ ಸುರಕ್ಷತಾ ಆಯುಕ್ತನಿಗೆ ಸಲ್ಲಿಸಿ ಅದರ ಒಂದು ಪ್ರತಿಯನ್ನು ಗೊತ್ತುಪಡಿಸಿದ ಅಧಿಕಾರಿಗೆ ಕಳುಹಿಸತಕ್ಕದ್ದು.

(3) ಗೊತ್ತುಪಡಿಸಿದ ಅಧಿಕಾರಿಯು, ಆಹಾರ ವಿಶ್ಲೇಷಕನ ವರದಿಯನ್ನು ಪರಿಶೀಲಿಸಿದ ತರುವಾಯ ಉಲ್ಲಂಘನೆಯು ಕಾರಾವಾಸದಿಂದ ದಂಡನೀಯವಾದುದಾಗಿದೆಯೇ ಅಥವಾ ಜುಲ್ಮಾನೆಯಿಂದ ಮಾತ್ರ ದಂಡನೀಯವಾದುದಾಗಿದೆಯೇ ಎಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಕಾರಾವಾಸದಿಂದ ದಂಡನೀಯವಾಗಬಹುದಾದ ಉಲ್ಲಂಘನೆಯ ಸಂದರ್ಭದಲ್ಲಿ, ಪ್ರಾಸಿಕ್ಯೂಷನ್‌ಗೆ ಅನುಮತಿಗಾಗಿ ಕೋರಿ ಅವನು ತನ್ನ ಶಿಫಾರಸುಗಳನ್ನು ಹದಿನಾಲ್ಕು ದಿನಗಳ ಒಳಗೆ ಆಹಾರ ಸುರಕ್ಷತಾ ಆಯುಕ್ತನಿಗೆ ಕಳುಹಿಸಿಕೊಡತಕ್ಕದ್ದು.

(4) ಆಹಾರ ಸುರಕ್ಷತಾ ಆಯುಕ್ತನು, ತಾನು ಸೂಕ್ತವೆಂದು ಭಾವಿಸಿದರೆ, ಅಪರಾಧದ ಗಂಭೀರತೆಯನ್ನು ಆಧರಿಸಿ, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅವಧಿಯೊಳಗೆ, ಆ ವಿಷಯವನ್ನು,-

(ಎ) ಮೂರು ವರ್ಷಗಳವರೆಗಿನ ಅವಧಿಯ ಕಾರಾವಾಸದಿಂದ ದಂಡನೀಯವಾಗುವ ಅಪರಾಧಗಳ ಸಂದರ್ಭದಲ್ಲಿ ಸಾಮಾನ್ಯ ಅಧಿಕಾರವ್ಯಾಪ್ತಿಯ ನ್ಯಾಯಾಲಯಕ್ಕೆ ಒಪ್ಪಿಸಬೇಕೇ; ಅಥವಾ

(ಬಿ) ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿರುವಲ್ಲಿ ಮೂರು ವರ್ಷಗಳಿಗಿಂಥ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾಗುವ ಅಪರಾಧಗಳ ಸಂದರ್ಭದಲ್ಲಿ, ಅಂಥ ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸಬೇಕೇ ಮತ್ತು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸದಿರುವ ಸಂದರ್ಭದಲ್ಲಿ, ಅಂಥ ಪ್ರಕರಣಗಳನ್ನು ಸಾಮಾನ್ಯ ಅಧಿಕಾರ ವ್ಯಾಪ್ತಿಯ ನ್ಯಾಯಾಲಯವೇ ಅಧಿವಿಚಾರಣೆ ಮಾಡಬೇಕೆ

– ಎಂಬುದನ್ನು ತೀರ್ಮಾನಿಸತಕ್ಕದ್ದು.

(5) ಆಹಾರ ಸುರಕ್ಷತಾ ಆಯುಕ್ತನು, ಗೊತ್ತುಪಡಿಸಿದ ಅಧಿಕಾರಿಗೆ ಅಥವಾ ಸಂಬಂಧಪಟ್ಟ ಆಹಾರ ಸುರಕ್ಷತಾ ಅಧಿಕಾರಿಗೆ ತನ್ನ ತೀರ್ಮಾನವನ್ನು ತಿಳಿಸತಕ್ಕದ್ದು, ಆಹಾರ ಸುರಕ್ಷತಾ ಅಧಿಕಾರಿಯು ಸಂದರ್ಭಾನುಸಾರ, ಸಾಮಾನ್ಯ ಅಧಿಕಾರ ವ್ಯಾಪ್ತಿಯ ನ್ಯಾಯಾಲಯಗಳಲ್ಲಿ ಅಥವಾ ವಿಶೇಷ ನ್ಯಾಯಾಲಯದಲ್ಲಿ ಪ್ರಾಸಿಕ್ಯೂಷನ್‌ನನ್ನು ಪ್ರಾರಂಭಿಸತಕ್ಕದ್ದು ಮತ್ತು ಪ್ರಕರಣ 40ರ ಮೇರೆಗೆ ಮಾದರಿಯನ್ನು ತೆಗೆದುಕೊಂಡಿದ್ದರೆ, ಖರೀದಿದಾರನಿಗೆ ಕೂಡ ಆ ತೀರ್ಮಾನವನ್ನು ತಿಳಿಸತಕ್ಕದ್ದು.

## ಅಧ್ಯಾಯ VIII

## ಆಹಾರದ ವಿಶ್ಲೇಷಣೆ

**43. ಪ್ರಯೋಗಾಲಯಗಳಿಗೆ, ಸಂಶೋಧನಾ ಸಂಸ್ಥೆಗಳಿಗೆ ಮತ್ತು ರೆಫರಲ್ ಆಹಾರ ಪ್ರಯೋಗಾಲಯಕ್ಕೆ ಮನ್ನಣೆ ಮತ್ತು ಮಾನ್ಯತೆ ನೀಡಿಕೆ.–** (1) ಆಹಾರ ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ಆಹಾರ ವಿಶ್ಲೇಷಕರು ಮಾದರಿಗಳನ್ನು ವಿಶ್ಲೇಷಣೆ ಮಾಡುವ ಉದ್ದೇಶಕ್ಕಾಗಿ, ಪರೀಕ್ಷಾ ಮತ್ತು ಮಾಪನಾಂಕ ನೀಡಿಕೆ ಪ್ರಯೋಗಾಲಯಗಳಿಗೆ ಮಾನ್ಯತೆ ನೀಡಿಕೆ ರಾಷ್ಟ್ರೀಯ ಮಂಡಳಿಯಿಂದ ಅಥವಾ ಇತರ ಯಾವುದೇ ಮಾನ್ಯತೆ ನೀಡಿಕೆ ಏಜೆನ್ಸಿಯಿಂದ ಮಾನ್ಯತೆ ಪಡೆದ ಆಹಾರ ಪ್ರಯೋಗಾಲಯಗಳನ್ನು ಮತ್ತು ಸಂಶೋಧನಾ ಸಂಸ್ಥೆಗಳನ್ನು ಅಧಿಸೂಚಿಸಬಹುದು.

(2) ಆಹಾರ ಪ್ರಾಧಿಕಾರವು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಮತ್ತು ವಿನಿಯಮಗಳ ಮೂಲಕ ರೆಫರಲ್ ಆಹಾರ ಪ್ರಯೋಗಾಲಯಕ್ಕೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ನಿರ್ವಹಿಸಲು ಒಂದು ಅಥವಾ ಹೆಚ್ಚು ರೆಫರಲ್ ಆಹಾರ ಪ್ರಯೋಗಾಲಯವನ್ನು ಅಥವಾ ಪ್ರಯೋಗಾಲಯಗಳನ್ನು, ಅಧಿಸೂಚನೆಯ ಮೂಲಕ ಸ್ಥಾಪಿಸತಕ್ಕದ್ದು ಅಥವಾ ಅವುಗಳಿಗೆ ಮನ್ನಣೆ ನೀಡತಕ್ಕದ್ದು.

(3) ಆಹಾರ ಪ್ರಾಧಿಕಾರವು,–

(ಎ) ಆಹಾರ ಪ್ರಯೋಗಾಲಯದ ಮತ್ತು ರೆಫರಲ್ ಆಹಾರ ಪ್ರಯೋಗಾಲಯದ ಪ್ರಕಾರ್ಯಗಳನ್ನು ಮತ್ತು ಅಂಥ ಪ್ರಕಾರ್ಯಗಳನ್ನು ಯಾವ ಸ್ಥಳೀಯ ಪ್ರದೇಶದೊಳಗೆ ಅಥವಾ ಪ್ರದೇಶಗಳೊಳಗೆ ನಿರ್ವಹಿಸಬಹುದೋ ಆ ಸ್ಥಳೀಯ ಪ್ರದೇಶವನ್ನು ಅಥವಾ ಪ್ರದೇಶಗಳನ್ನು;

(ಬಿ) ವಿಶ್ಲೇಷಣೆಗಾಗಿ ಅಥವಾ ಪರೀಕ್ಷೆಗಳಿಗಾಗಿ ಆಹಾರ ಪದಾರ್ಥಗಳ ಮಾದರಿಗಳನ್ನು ಸದರಿ ಪ್ರಯೋಗಾಲಯಕ್ಕೆ ಒಪ್ಪಿಸುವುದಕ್ಕಾಗಿಯ ಕಾರ್ಯವಿಧಾನವನ್ನು, ಅದರ ಮೇಲೆ ಪ್ರಯೋಗಾಲಯಗಳು ನೀಡುವ ವರದಿಗಳ ನಮೂನೆಗಳನ್ನು ಮತ್ತು ಅಂಥ ವರದಿಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬಹುದಾದ ಫೀಜನ್ನು; ಮತ್ತು

(ಸಿ) ತನ್ನ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸದರಿ ಪ್ರಯೋಗಾಲಯಕ್ಕೆ ಸಾಧ್ಯವಾಗಿಸಲು ಅವಶ್ಯಕವಾಗಬಹುದಾದ ಅಥವಾ ವಿಹಿತವೆನಿಸಬಹುದಾದ ಇತರ ವಿಷಯಗಳನ್ನು

– ನಿರ್ದಿಷ್ಟಪಡಿಸುವ ವಿನಿಯಮಗಳನ್ನು ರಚಿಸಬಹುದು.

**44. ಆಹಾರ ಸುರಕ್ಷತಾ ಪರಿಶೋಧನೆಗಾಗಿ ಸಂಘ ಸಂಸ್ಥೆಗೆ ಅಥವಾ ಏಜೆನ್ಸಿಗೆ ಮನ್ನಣೆ ನೀಡುವುದು.–** ಆಹಾರ ಪ್ರಾಧಿಕಾರವು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಮೇರೆಗೆ ಅಗತ್ಯಪಡಿಸಿದಂತೆ ಆಹಾರ ಸುರಕ್ಷತಾ ಪರಿಶೋಧನೆಯ ಮತ್ತು ಆಹಾರ ಸುರಕ್ಷತಾ ನಿರ್ವಹಣಾ ಪದ್ಧತಿಗಳನ್ನು ಪಾಲಿಸಿರುವುದನ್ನು ಪರೀಶಿಲಿಸುವ ಉದ್ದೇಶಗಳಿಗಾಗಿ ಯಾವುದೇ ಸಂಘ ಸಂಸ್ಥೆಗೆ ಅಥವಾ ಏಜೆನ್ಸಿಗೆ ಮನ್ನಣೆ ನೀಡಬಹುದು.

**45. ಆಹಾರ ವಿಶ್ಲೇಷಕರು.–** ಆಹಾರ ಸುರಕ್ಷತಾ ಆಯುಕ್ತನು, ಕೇಂದ್ರ ಸರ್ಕಾರವು ನಿಯಮಿಸಿದ ಅರ್ಹತೆಗಳನ್ನು ಹೊಂದಿರುವ, ತಾನು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಗಳನ್ನು ಆಹಾರ ಸುರಕ್ಷತಾ ಆಯುಕ್ತನು ಅವರಿಗೆ ವಹಿಸಿಕೊಡಬಹುದಾದಂಥ ಸ್ಥಳೀಯ ಪ್ರದೇಶಗಳಿಗೆ ಆಹಾರ ವಿಶ್ಲೇಷಕರನ್ನಾಗಿ ಅಧಿಸೂಚನೆಯ ಮೂಲಕ ನೇಮಿಸಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಆಹಾರ ಪದಾರ್ಥದ ತಯಾರಿಕೆಯಲ್ಲಿ ಅಥವಾ ಮಾರಾಟದಲ್ಲಿ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಆಹಾರ ವಿಶ್ಲೇಷಕನನ್ನಾಗಿ ನೇಮಕ ಮಾಡತಕ್ಕದ್ದಲ್ಲ:

ಮತ್ತು ಪರಂತು, ಬೇರೆ ಬೇರೆ ಆಹಾರ ಪದಾರ್ಥಗಳಿಗಾಗಿ ಬೇರೆ ಬೇರೆ ಆಹಾರ ವಿಶ್ಲೇಷಕರನ್ನು ನೇಮಕ ಮಾಡಬಹುದು.

**46. ಆಹಾರ ವಿಶ್ಲೇಷಕನ ಪ್ರಕಾರ್ಯಗಳು.–** (1) ವಿಶ್ಲೇಷಣೆಗಾಗಿ ಮಾದರಿಯನ್ನು ಒಳಗೊಂಡಿರುವ ಪ್ಯಾಕೇಜನ್ನು ಆಹಾರ ಸುರಕ್ಷತಾ ಅಧಿಕಾರಿಯಿಂದ ಅಥವಾ ಇತರ ಯಾರೇ ವ್ಯಕ್ತಿಯಿಂದ ಸ್ವೀಕರಿಸಿದ ಮೇಲೆ, ಆಹಾರ ವಿಶ್ಲೇಷಕನು, ಧಾರಕದ ಮತ್ತು ಹೊರಹೊದಿಕೆಯ ಮೇಲಿನ ಮೊಹರನ್ನು, ಪ್ರತ್ಯೇಕವಾಗಿ ಸ್ವೀಕರಿಸಿದ ಮಾದರಿ ಮುದ್ರೆಯೊಂದಿಗೆ ಹೋಲಿಸಿ ನೋಡತಕ್ಕದ್ದು ಮತ್ತು ಅದರ ಮೇಲಿರುವ ಮೊಹರಿನ ಸ್ಥಿತಿಗತಿಗಳನ್ನು ಬರೆದಿಡತಕ್ಕದ್ದು:

ಪರಂತು, ಆಹಾರ ವಿಶ್ಲೇಷಕನು ಸ್ವೀಕರಿಸಿದ ಮಾದರಿ ಇರುವ ಧಾರಕವು ಒಡೆದು ಹೋಗಿರುವ ಸ್ಥಿತಿಯಲ್ಲಿ ಇರುವುದಾಗಿ ಅಥವಾ ವಿಶ್ಲೇಷಣೆಗೆ ಅನರ್ಹವಾಗಿರುವುದಾಗಿ ಕಂಡುಬಂದ ಸಂದರ್ಭದಲ್ಲಿ, ಅವನು, ಅಂಥ ಮಾದರಿಯನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ ಗೊತ್ತುಪಡಿಸಿದ ಅಧಿಕಾರಿಗೆ ಆ ಬಗ್ಗೆ ತಿಳಿಸತಕ್ಕದ್ದು ಮತ್ತು ಮಾದರಿಯ ಎರಡನೇ ಭಾಗವನ್ನು ಕಳುಹಿಸುವುದಕ್ಕಾಗಿ ಅವನಿಗೆ ಕೋರಿಕೆ ಪತ್ರವನ್ನು ಸಲ್ಲಿಸತಕ್ಕದ್ದು.

(2) ಆಹಾರ ವಿಶ್ಲೇಷಕನು, ಆಹಾರ ಸುರಕ್ಷತಾ ಅಧಿಕಾರಿಯು ಅಥವಾ ಈ ಅಧಿನಿಯಮದ ಮೇರೆಗೆ ಅಧಿಕೃತಗೊಳಿಸಲಾದ ಇತರ ಯಾರೇ ವ್ಯಕ್ತಿಯು ಅವನಿಗೆ ಕಳುಹಿಸಬಹುದಾದಂಥ ಆಹಾರ ಪದಾರ್ಥದ ಮಾದರಿಗಳನ್ನು ವಿಶ್ಲೇಷಣೆ ಮಾಡಿಸತಕ್ಕದ್ದು.

(3) ಆಹಾರ ವಿಶ್ಲೇಷಕನು, ಯಾವುದೇ ಮಾದರಿಯನ್ನು ವಿಶ್ಲೇಷಣೆಗಾಗಿ ಸ್ವೀಕರಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳ ಅವಧಿಯೊಳಗಾಗಿ,–

(i) ಅಂಥ ಮಾದರಿಯನ್ನು ಪ್ರಕರಣ 38ರ ಅಥವಾ ಪ್ರಕರಣ 47ರ ಮೇರೆಗೆ ಸ್ವೀಕರಿಸಿದ್ದಲ್ಲಿ ಮಾದರಿಯನ್ನು ತೆಗೆದುಕೊಂಡ ಮತ್ತು ವಿಶ್ಲೇಷಣೆಯ ವಿಧಾನವನ್ನು ಸೂಚಿಸಿ ವರದಿಯ ನಾಲ್ಕು ಪ್ರತಿಗಳನ್ನು ಗೊತ್ತುಪಡಿಸಿದ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು; ಮತ್ತು

(ii) ಅಂಥ ಮಾದರಿಯನ್ನು ಪ್ರಕರಣ 40ರ ಮೇರೆಗೆ ಸ್ವೀಕರಿಸಿದ್ದಲ್ಲಿ, ಮಾದರಿಯನ್ನು ತೆಗೆದುಕೊಂಡ ಮತ್ತು ವಿಶ್ಲೇಷಣೆಯ ವಿಧಾನವನ್ನು ಸೂಚಿಸಿ ವರದಿಯ ಪ್ರತಿಯನ್ನು ಅಂಥ ಆಹಾರ ಪದಾರ್ಥವನ್ನು ಖರೀದಿಸಿದ ವ್ಯಕ್ತಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಅದರ ಪ್ರತಿಯನ್ನು ಗೊತ್ತುಪಡಿಸಿದ ಅಧಿಕಾರಿಗೆ ಕಳುಹಿಸತಕ್ಕದ್ದು:

ಪರಂತು, ಮಾದರಿಯನ್ನು ಸ್ವೀಕರಿಸಿದ ಹದಿನಾಲ್ಕು ದಿನಗಳೊಳಗೆ ಅದನ್ನು ವಿಶ್ಲೇಷಿಸಲು ಸಾಧ್ಯವಾಗದ ಸಂದರ್ಭದಲ್ಲಿ, ಆಹಾರ ವಿಶ್ಲೇಷಕನು, ಅದಕ್ಕೆ ಕಾರಣಗಳನ್ನು ನೀಡಿ ಮತ್ತು ವಿಶ್ಲೇಷಣೆಗೆ ಬೇಕಾಗುವ ಕಾಲವನ್ನು ನಿರ್ದಿಷ್ಟಪಡಿಸಿ ಗೊತ್ತುಪಡಿಸಿದ ಅಧಿಕಾರಿಗೆ ಮತ್ತು ಆಹಾರ ಸುರಕ್ಷತಾ ಆಯುಕ್ತರಿಗೆ ತಿಳಿಸತಕ್ಕದ್ದು.

(4) ಆಹಾರ ವಿಶ್ಲೇಷಕನ ವರದಿಯ ವಿರುದ್ಧ ಗೊತ್ತುಪಡಿಸಿದ ಅಧಿಕಾರಿಗೆ ಅಪೀಲನ್ನು ಸಲ್ಲಿಸಲು ಅವಕಾಶವಿರತಕ್ಕದ್ದು, ಆ ಅಧಿಕಾರಿಯು ಆ ವಿಷಯವನ್ನು ಆಹಾರ ಪ್ರಾಧಿಕಾರವು ಅಧಿಸೂಚಿಸಿದ ರೆಫರಲ್ ಆಹಾರ ಪ್ರಯೋಗಾಲಯಕ್ಕೆ ಅದರ ಅಭಿಪ್ರಾಯಕ್ಕಾಗಿ ಕಳುಹಿಸಬೇಕೆಂದು ನಿರ್ಧರಿಸಿದರೆ, ಅವನು ಹಾಗೆ ಮಾಡತಕ್ಕದ್ದು.

**47. ಮಾದರಿಯನ್ನು ತೆಗೆದುಕೊಳ್ಳುವುದು ಮತ್ತು ವಿಶ್ಲೇಷಣೆ.–** (1) ಆಹಾರ ಸುರಕ್ಷತಾ ಅಧಿಕಾರಿಯು, ಆಹಾರದ ಮಾದರಿಯನ್ನು ವಿಶ್ಲೇಷಣೆಗಾಗಿ ತೆಗೆದುಕೊಂಡಾಗ, ಅವನು,–

(ಎ) ಮಾದರಿಯನ್ನು ಹಾಗೆ ವಿಶ್ಲೇಷಣೆ ಮಾಡಿಸುವ ತನ್ನ ಉದ್ದೇಶವನ್ನು, ತಿಳಿಸಿ, ಮಾದರಿಯನ್ನು ಯಾವ ವ್ಯಕ್ತಿಯಿಂದ ತೆಗೆದುಕೊಳ್ಳಲಾಯಿತೋ ಆ ವ್ಯಕ್ತಿಗೆ ಮತ್ತು ಯಾವ ವ್ಯಕ್ತಿಯ ಹೆಸರು, ವಿಳಾಸ ಮತ್ತು ಇತರ ವಿವರಗಳನ್ನು ಬಹಿರಂಗಪಡಿಸಲಾಗಿದೆಯೋ ಅಂಥ ವ್ಯಕ್ತಿ ಯಾರಾದಾರೂ ಇದ್ದರೆ ಆ ವ್ಯಕ್ತಿಗೆ ಲಿಖಿತ ನೋಟೀಸನ್ನು ನೀಡತಕ್ಕದ್ದು;

(ಬಿ) ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಉಪಬಂಧಿಸಬಹುದಾದ ವಿಶೇಷ ಪ್ರಕರಣಗಳಲ್ಲಿ ಹೊರತುಪಡಿಸಿ, ಮಾದರಿಯನ್ನು ನಾಲ್ಕು ಭಾಗಗಳಾಗಿ ವಿಭಾಗಿಸತಕ್ಕದ್ದು. ಮತ್ತು ಅನುಮತಿಸಬಹುದಾದಂಥ ರೀತಿಯಲ್ಲಿ ಪ್ರತಿಯೊಂದು ಭಾಗಕ್ಕೆ ಗುರುತು ಮಾಡತಕ್ಕದ್ದು ಮತ್ತು ಮೊಹರು ಹಾಕತಕ್ಕದ್ದು ಅಥವಾ ಅಂಟಿಸಿ ಭದ್ರಪಡಿಸತಕ್ಕದ್ದು ಮತ್ತು ಯಾವ ವ್ಯಕ್ತಿಯಿಂದ ಮಾದರಿಯನ್ನು ತೆಗೆದುಕೊಳ್ಳಲಾಯಿತೋ ಆ ವ್ಯಕ್ತಿಯ ಸಹಿಯನ್ನು ಅಥವಾ ಹೆಬ್ಬೆಟ್ಟು ಗುರುತನ್ನು ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಜಾಗದಲ್ಲಿ ಮತ್ತು ಅಂಥ ರೀತಿಯಲ್ಲಿ ತೆಗೆದುಕೊಳ್ಳತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ತನ್ನ ಸಹಿ ಮಾಡಲು ಅಥವಾ ತನ್ನ ಹೆಬ್ಬೆಟ್ಟು ಗುರುತನ್ನು ಹಾಕಲು ನಿರಾಕರಿಸಿದಲ್ಲಿ, ಆಹಾರ ಸುರಕ್ಷತಾ ಅಧಿಕಾರಿಯು, ಒಬ್ಬ ಅಥವಾ ಹೆಚ್ಚು ಸಾಕ್ಷಿದಾರರನ್ನು ಕರೆಯಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯ ಸಹಿಗೆ ಅಥವಾ ಹೆಬ್ಬೆಟ್ಟು ಗುರುತಿಗೆ ಬದಲಾಗಿ, ಅವನ ಸಹಿಯನ್ನು ಅಥವಾ ಹೆಬ್ಬೆಟ್ಟು ಗುರುತನ್ನು ತೆಗೆದುಕೊಳ್ಳತಕ್ಕದ್ದು.

(ಸಿ) (i) ಆ ಮಾದರಿಯ ಭಾಗಗಳಲ್ಲಿ ಒಂದನ್ನು, ವಿಶ್ಲೇಷಣೆಗಾಗಿ ಆಹಾರ ವಿಶ್ಲೇಷಕನಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಆ ಸಂಗತಿಯನ್ನು ಗೊತ್ತುಪಡಿಸಿದ ಅಧಿಕಾರಿಗೆ ತಿಳಿಸತಕ್ಕದ್ದು;

(ii) ಎರಡು ಭಾಗಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿ ಇಡುವುದಕ್ಕಾಗಿ ಗೊತ್ತುಪಡಿಸಿದ ಅಧಿಕಾರಿಗೆ ಕಳುಹಿಸತಕ್ಕದ್ದು; ಮತ್ತು

(iii) ಉಳಿದ ಒಂದು ಭಾಗವನ್ನು ವಿಶ್ಲೇಷಣೆಗಾಗಿ ಮಾನ್ಯತೆ ಪಡೆದ ಪ್ರಯೋಗಾಲಯಕ್ಕೆ ಕಳುಹಿಸಬೇಕೆಂದು, ಆಹಾರ, ವ್ಯಾಪಾರ, ವ್ಯವಹಾರ ಮುನವರ್ತಕನು ಕೋರಿಕೊಂಡರೆ, ಆ ಪ್ರಯೋಗಾಲಯಕ್ಕೆ ಅದನ್ನು ವಿಶ್ಲೇಷಣೆಗಾಗಿ ಕಳುಹಿಸಿ, ಗೊತ್ತುಪಡಿಸಿದ ಅಧಿಕಾರಿಗೆ ಆ ಸಂಗತಿಯನ್ನು ತಿಳಿಸತಕ್ಕದ್ದು:

ಪರಂತು, (i) ಮತ್ತು (ii)ನೇ ಉಪ ಖಂಡಗಳ ಮೇರೆಗೆ ಸ್ವೀಕರಿಸಿದ ಪರೀಕ್ಷಾ ವರದಿಗಳಲ್ಲಿ ವ್ಯತ್ಯಾಸವಿರುವುದು ಕಂಡು ಬಂದರೆ, ಆಗ, ಗೊತ್ತುಪಡಿಸಿದ ಅಧಿಕಾರಿಯು ತನ್ನ ಅಭಿರಕ್ಷೆಯಲ್ಲಿ ಇಟ್ಟಿರುವ ಮಾದರಿಯ ಒಂದು ಭಾಗವನ್ನು ವಿಶ್ಲೇಷಣೆಗಾಗಿ ರೆಫರಲ್ ಪ್ರಯೋಗಾಲಯಕ್ಕೆ ಕಳುಹಿಸತಕ್ಕದ್ದು, ಅದರ ಮೇಲೆ ಆ ಪ್ರಯೋಗಾಲಯದ ನಿರ್ಣಯವು ಅಂತಿಮವಾದುದಾಗಿರತಕ್ಕದ್ದು.

(2) ಯಾವುದೇ ಆಹಾರ ಪದಾರ್ಥದ ಅಥವಾ ಕಲಬೆರಕೆಕಾರಕದ ಮಾದರಿಯನ್ನು ತೆಗೆದುಕೊಂಡಾಗ, ಆಹಾರ ಸುರಕ್ಷತಾ ಅಧಿಕಾರಿಯು ನಿಕಟ ತರುವಾಯದ ಕೆಲಸದ ದಿನದಂದೇ ಸಂಬಂಧಪಟ್ಟ ಪ್ರದೇಶದ ಆಹಾರ ವಿಶ್ಲೇಷಕನಿಗೆ ಮಾದರಿಯನ್ನು ವಿಶ್ಲೇಷಣೆಗಾಗಿ ಮತ್ತು ವರದಿಗಾಗಿ ಕಳುಹಿಸತಕ್ಕದ್ದು.

(3) ಆಹಾರ ವಿಶ್ಲೇಷಕನಿಗೆ ಕಳುಹಿಸಿದ ಮಾದರಿಯ ಭಾಗವು ಕಳೆದು ಹೋದರೆ ಅಥವಾ ಹಾನಿಗೊಂಡರೆ, ಆಹಾರ ವಿಶ್ಲೇಷಕನು ಅಥವಾ ಆಹಾರ ಸುರಕ್ಷತಾ ಅಧಿಕಾರಿಯು ಗೊತ್ತುಪಡಿಸಿದ ಅಧಿಕಾರಿಗೆ ಸಲ್ಲಿಸಿದ ಕೋರಿಕೆಯ ಮೇಲೆ ಗೊತ್ತುಪಡಿಸಿದ ಅಧಿಕಾರಿಯು, ತನಗೆ ಕಳುಹಿಸಿದ್ದ ಮಾದರಿಯ ಭಾಗಗಳಲ್ಲಿ ಒಂದನ್ನು ವಿಶ್ಲೇಷಣೆಗಾಗಿ ಆಹಾರ ವಿಶ್ಲೇಷಕನಿಗೆ ಕಳುಹಿಸತಕ್ಕದ್ದು.

(4) ವಶಪಡಿಸಿಕೊಂಡ ಆಹಾರ ಪದಾರ್ಥವನ್ನು ಅಥವಾ ಕಲಬೆರೆಕೆಕಾರಕವನ್ನು, ಅದನ್ನು ನಾಶಪಡಿಸಿರದಿದ್ದರೆ, ಸಾಧ್ಯವಾದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ ಆಹಾರ ವಿಶ್ಲೇಷಕನ ವರದಿಯನ್ನು ಸ್ವೀಕರಿಸಿದ ತರುವಾಯದ ಏಳು ದಿನಗಳ ಒಳಗೆ ಗೊತ್ತುಪಡಿಸಿದ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು:

ಪರಂತು, ಯಾವ ವ್ಯಕ್ತಿಯಿಂದ ಆಹಾರ ಪದಾರ್ಥವನ್ನು ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಯು ಈ ಬಗ್ಗೆ ಗೊತ್ತುಪಡಿಸಿದ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಿದರೆ, ಗೊತ್ತುಪಡಿಸಿದ ಅಧಿಕಾರಿಯು ಲಿಖಿತ ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ತನ್ನ ಮುಂದೆ ಅಂಥ ಪದಾರ್ಥವನ್ನು ಹಾಜರುಪಡಿಸುವಂತೆ ಆಹಾರ ಸುರಕ್ಷತಾ ಅಧಿಕಾರಿಗೆ ನಿರ್ದೇಶಿಸತಕ್ಕದ್ದು.

(5) ಆಮದು ಮಾಡಿಕೊಂಡ ಆಹಾರ ಪದಾರ್ಥಗಳ ಸಂದರ್ಭದಲ್ಲಿ, ಆಹಾರ ಪ್ರಾಧಿಕಾರದ ಅಧಿಕೃತ ಅಧಿಕಾರಿಯು ಅದರ ಮಾದರಿಯನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅದನ್ನು ಅಧಿಸೂಚಿತ ಪ್ರಯೋಗಾಲಯದ ಆಹಾರ ವಿಶ್ಲೇಷಕನಿಗೆ ವಿಶ್ಲೇಷಣೆಗಾಗಿ ಕಳುಹಿಸತಕ್ಕದ್ದು ಮತ್ತು ಆ ಆಹಾರ ವಿಶ್ಲೇಷಕನು ಐದು ದಿನಗಳ ಅವಧಿಯೊಳಗೆ ವರದಿಯನ್ನು ಅಧಿಕೃತ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು.

(6) ಗೊತ್ತುಪಡಿಸಿದ ಅಧಿಕಾರಿಯು, ಆಹಾರ ಸುರಕ್ಷತಾ ಅಧಿಕಾರಿಯು, ಅಧಿಕೃತ ಅಧಿಕಾರಿಯು ಮತ್ತು ಆಹಾರ ವಿಶ್ಲೇಷಕನು, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

## ಅಧ್ಯಾಯ IX

## ಅಪರಾಧಗಳು ಮತ್ತು ದಂಡಗಳು

**48. ಅಪರಾಧಗಳಿಗೆ ಸಂಬಂಧಪಟ್ಟ ಸಾಮಾನ್ಯ ಉಪಬಂಧಗಳು.–** (1) ಒಬ್ಬ ವ್ಯಕ್ತಿಯು ಯಾವುದೇ ಆಹಾರ ಪದಾರ್ಥವನ್ನು ಸೇವನೆಗಾಗಿ ಮಾರಾಟ ಮಾಡಬಹುದು ಅಥವಾ ಮಾರಾಟಕ್ಕಾಗಿ ಇಡಬಹುದು ಅಥವಾ ವಿತರಿಸಬಹುದು ಎಂಬ ತಿಳುವಳಿಕೆಯನ್ನು ಹೊಂದಿದ್ದು ಈ ಮುಂದಿನ ಒಂದು ಅಥವಾ ಹೆಚ್ಚಿನ ಕಾರ್ಯಚಟುವಟಿಕೆಗಳ ಮೂಲಕ ಆ ಆಹಾರ ಪದಾರ್ಥವನ್ನು ಆರೋಗ್ಯಕ್ಕೆ ಹಾನಿಕಾರಕವಾದುದನ್ನಾಗಿ ಮಾಡಬಹುದು, ಎಂದರೆ:–

(ಎ) ಯಾವುದೇ ವಸ್ತುವನ್ನು ಅಥವಾ ಪದಾರ್ಥವನ್ನು ಆಹಾರಕ್ಕೆ ಸೇರಿಸುವುದು;

(ಬಿ) ಆಹಾರದ ತಯಾರಿಕೆಯಲ್ಲಿ ಯಾವುದೇ ವಸ್ತುವನ್ನು ಅಥವಾ ಪದಾರ್ಥವನ್ನು ಘಟಕಾಂಶವನ್ನಾಗಿ ಬಳಸುವುದು;

(ಸಿ) ಆಹಾರದಿಂದ ಯಾವುವೇ ಘಟಕಾಂಶಗಳನ್ನು ತೆಗೆಯುವುದು;

(ಡಿ) ಆಹಾರವನ್ನು ಇತರ ಯಾವುದೇ ಸಂಸ್ಕರಣೆಗೆ ಅಥವಾ ಉಪಚಾರಕ್ಕೆ ಒಳಪಡಿಸುವುದು.

(2) ಯಾವುದೇ ಆಹಾರವು ಅಸುರಕ್ಷಿತವೇ ಅಥವಾ ಆರೋಗ್ಯಕ್ಕೆ ಹಾನಿಕರವೇ ಎಂಬುದನ್ನು ನಿರ್ಧರಿಸುವಾಗ,–

(ಎ) (i) ಬಳಕೆದಾರನು ಆಹಾರವನ್ನು ಬಳಸುವಂಥ ಸಾಮಾನ್ಯ ಪರಿಸ್ಥಿತಿಗಳನ್ನು ಮತ್ತು ಉತ್ಪಾದನೆ, ಸಂಸ್ಕರಣೆ ಮತ್ತು ವಿತರಣೆಯ ಪ್ರತಿ ಹಂತದಲ್ಲಿ ಅದರ ನಿರ್ವಹಣೆಯನ್ನು;

(ii) ಲೇಬಲ್ ಮೇಲಿನ ಮಾಹಿತಿ ಅಥವಾ ನಿರ್ದಿಷ್ಟ ಆಹಾರವನ್ನು ಅಥವಾ ಆಹಾರಗಳ ವರ್ಗವನ್ನು ಸೇವಿಸುವ ವ್ಯಕ್ತಿಯ ಆರೋಗ್ಯದ ಮೇಲಲ್ಲದೇ ಮುಂದಿನ ಪೀಳಿಗೆಗಳ ಆರೋಗ್ಯದ ಮೇಲೂ ಆ ಆಹಾರವು ಉಂಟು ಮಾಡುವ ಸಂಭವನೀಯವಾದ, ತಕ್ಷಣವಾದ ಅಥವಾ ಅಲ್ಪಾವಧಿಯ ಅಥವಾ ದೀರ್ಘಾವಧಿಯ ಪರಿಣಾಮಗಳು ಮಾತ್ರವಲ್ಲದೆ, ಆ ಆಹಾರದಿಂದ ಆಗುವ ನಿರ್ದಿಷ್ಟ ಪ್ರತಿಕೂಲ ಆರೋಗ್ಯ ಪರಿಣಾಮಗಳ ನಿವಾರಣೆಗೆ ಸಂಬಂಧಿಸಿದಂತೆ ಬಳಕೆದಾರರಿಗೆ ಸಾಮಾನ್ಯವಾಗಿ ಲಭ್ಯವಾಗುವ ಇತರ ಮಾಹಿತಿಯೂ ಒಳಗೊಂಡಂತೆ ಬಳಕೆದಾರನಿಗೆ ಒದಗಿಸಿದ ಮಾಹಿತಿಯನ್ನು;

(iii) ಸಂಭವನೀಯ ಸಂಚಿತ ವಿಷಕಾರಿ ಪರಿಣಾಮಗಳನ್ನು;

(iv) ಆಹಾರವನ್ನು ನಿರ್ದಿಷ್ಟ ವರ್ಗದ ಬಳಕೆದಾರರಿಗೆ ನೀಡಲು ಉದ್ದೇಶಿಸಿರುವಲ್ಲಿ ಆ ವರ್ಗದ ಬಳಕೆದಾರರ ನಿರ್ದಿಷ್ಟ ಆರೋಗ್ಯ ಸೂಕ್ಷ್ಮತೆಗಳನ್ನು; ಮತ್ತು

(v) ಆಹಾರವನ್ನು ಸಾಮಾನ್ಯ ಪ್ರಮಾಣಗಳಲ್ಲಿ ಸೇವಿಸುವ ವ್ಯಕ್ತಿಯ ಆರೋಗ್ಯದ ಮೇಲೆ ಮುಖ್ಯವಾಗಿ ಅದೇ ಸಂಯೋಜನೆಯ ಆಹಾರದಿಂದಾಗುವ ಸಂಭವನೀಯವಾದ ಸಂಚಿತ ಪರಿಣಾಮವನ್ನು ಸಹ;

(ಬಿ) ಮೂಲ ಆಹಾರವಾಗಿರುವ, ಪದಾರ್ಥದ ಗುಣಮಟ್ಟ ಅಥವಾ ಶುದ್ಧತೆಯು, ನಿರ್ದಿಷ್ಟಪಡಿಸಿದ ಮಾನಕಕ್ಕಿಂತ ಕೆಳಮಟ್ಟದ್ದಾಗಿರುವಲ್ಲಿ ಅಥವಾ ಪ್ರಮಾಣಗಳಲ್ಲಿರುವ ಅದರ ಘಟಕಾಂಶಗಳ ವ್ಯತ್ಯಸ್ಥನೀಯತೆಯ ನಿರ್ದಿಷ್ಟಪಡಿಸಿದ ಮಿತಿಗಳೊಳಗೆ ಇಲ್ಲದಿರುವಲ್ಲಿ ಎರಡು ಸಂದರ್ಭಗಳಲ್ಲಿ ನೈಸರ್ಗಿಕ ಕಾರಣಗಳಿಂದಾಗಿ ಮತ್ತು ಮಾನವ ಪ್ರಯತ್ನದ ನಿಯಂತ್ರಣವನ್ನು ಮೀರಿದ ಕಾರಣದಿಂದಾಗಿ ಮಾತ್ರವೇ, ಅಂಥ ಪದಾರ್ಥವನ್ನು ಅಸುರಕ್ಷಿತವಾದುದೆಂದು ಅಥವಾ ಕಳಪೆ ಗುಣಮಟ್ಟದ್ದೆಂದು ಅಥವಾ ಬಾಹ್ಯ ವಸ್ತುವನ್ನು ಒಳಗೊಂಡಿದೆಯೆಂದು ಭಾವಿಸತಕ್ಕದ್ದಲ್ಲ ಎಂಬ ಸಂಗತಿಯನ್ನು

– ಗಮನದಲ್ಲಿ ಇಟ್ಟುಕೊಂಡಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಹಾನಿ"ಯಲ್ಲಿ ಖಾಯಂ ಆದುದ್ದಾಗಿರಲಿ ಅಥವಾ ತಾತ್ಕಾಲಿಕವಾದುದಾಗಿರಲಿ, ಯಾವುದೇ ದುರ್ಬಲತೆ ಒಳಗೊಳ್ಳುತ್ತದೆ ಮತ್ತು "ಆರೋಗ್ಯಕ್ಕೆ ಹಾನಿಕರ" ಎಂಬುದನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

**49. ದಂಡಕ್ಕೆ ಸಂಬಂಧಪಟ್ಟ ಸಾಮಾನ್ಯ ಉಪಬಂಧಗಳು.–** ಈ ಅಧ್ಯಾಯದ ಮೇರೆಗೆ ದಂಡದ ಪ್ರಮಾಣವನ್ನು ನಿರ್ಧರಿಸುವಾಗ, ಸಂದರ್ಭಾನುಸಾರ, ದಂಡನೆ ನಿರ್ಧರಣಾ ಅಧಿಕಾರಿಯು ಅಥವಾ ನ್ಯಾಯಾಧಿಕರಣವು ಈ ಮುಂದಿನವುಗಳಿಗೆ ಎಂದರೆ:–

(ಎ) ಉಲ್ಲಂಘನೆಯ ಪರಿಣಾಮವಾಗಿ, ಎಲ್ಲೆಲ್ಲಿ ಪ್ರಮಾಣವನ್ನು ನಿರ್ಣಯಿಸಬಹುದೋ ಅಲ್ಲೆಲ್ಲ, ಗಳಿಸಿದ ಮೊಬಲಗಿಗೆ ಅಥವಾ ಪಡೆದ ಅನುಚಿತ ಪ್ರಯೋಜನಕ್ಕೆ;

(ಬಿ) ಉಲ್ಲಂಘನೆಯ ಪರಿಣಾಮವಾಗಿ ಯಾರೇ ವ್ಯಕ್ತಿಗೆ ಉಂಟಾದ ಅಥವಾ ಉಂಟಾಗುವ ಸಾಧ್ಯತೆಯಿರುವ ನಷ್ಟದ ಮೊಬಲಗಿಗೆ;

(ಸಿ) ಉಲ್ಲಂಘನೆಯ ಪುನರಾವರ್ತಿತ ಸ್ವರೂಪಕ್ಕೆ;

(ಡಿ) ಉಲ್ಲಂಘನೆಯು ಅವನ ತಿಳುವಳಿಕೆಗೆ ಬಾರದೆ ಆದದ್ದೆ ಎಂಬುದಕ್ಕೆ; ಮತ್ತು

(ಇ) ಇತರ ಯಾವುದೇ ಸುಸಂಗತ ಅಂಶಕ್ಕೆ

– ಯುಕ್ತ ಗಮನ ನೀಡತಕ್ಕದ್ದು.

**50. ಕೇಳಿದ ಸ್ವರೂಪದ್ದಲ್ಲದ ಅಥವಾ ಸತ್ವದ್ದಲ್ಲದ ಅಥವಾ ಗುಣಮಟ್ಟದ್ದಲ್ಲದ ಆಹಾರವನ್ನು ಮಾರಾಟ ಮಾಡುವುದಕ್ಕೆ ದಂಡ.–** ಯಾವ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ವಿನಿಯಮಗಳನ್ನು ಪಾಲಿಸದಿರುವ ಅಥವಾ ಖರೀದಿದಾರರು ಕೇಳಿದ ಸ್ವರೂಪದಲ್ಲದ ಅಥವಾ ಸತ್ವದಲ್ಲದ ಅಥವಾ ಗುಣಮಟ್ಟದಲ್ಲದ ಹಾನಿಕಾರಕವಾದ ಯಾವುದೇ ಆಹಾರವನ್ನು ಖರೀದಿದಾರನಿಗೆ ಮಾರಾಟ ಮಾಡುತ್ತಾನೋ ಆ ಯಾರೇ ವ್ಯಕ್ತಿಯು ಐದು ಲಕ್ಷ ರೂಪಾಯಿಗಳಿಗೆ ಮೀರದ ದಂಡಕ್ಕೆ ಗುರಿಯಾಗತಕ್ಕದ್ದು:

ಪರಂತು, ಪ್ರಕರಣ 31ರ ಉಪಪ್ರಕರಣ (2)ರ ಮೇರೆಗೆ ಒಳಗೊಂಡ ವ್ಯಕ್ತಿಗಳು, ಅಂಥ ಪಾಲನೆ ಮಾಡದಿರುವುದಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರದ ದಂಡಕ್ಕೆ ಗುರಿಯಾಗತಕ್ಕದ್ದು.

**51. ಕಳಪೆ ಗುಣಮಟ್ಟದ ಆಹಾರಕ್ಕಾಗಿ ದಂಡ.–** ಯಾವ ವ್ಯಕ್ತಿಯು, ತಾನಾಗಿಯಾಗಲಿ ಅಥವಾ ಆತನ ಪರವಾಗಿ ಇತರ ಯಾರೇ ವ್ಯಕ್ತಿಯಾಗಲಿ ಕಳಪೆ ಗುಣಮಟ್ಟದ ಯಾವುದೇ ಆಹಾರ ಪದಾರ್ಥವನ್ನು ಮಾನವ ಸೇವನೆಗಾಗಿ ಮಾರಾಟ ಮಾಡಲು ತಯಾರಿಸುವನೋ ಅಥವಾ ದಾಸ್ತಾನು ಮಾಡುವನೋ ಅಥವಾ ಮಾರಾಟ ಮಾಡುವನೋ ಅಥವಾ ವಿತರಿಸುವನೋ ಅಥವಾ ಆಮದು ಮಾಡಿಕೊಳ್ಳುವನೋ ಆ ಯಾರೇ ವ್ಯಕ್ತಿಯು ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

**52. ಆಹಾರಕ್ಕೆ ತಪ್ಪು ಮುದ್ರೆ ಹಾಕಿದ್ದಕ್ಕಾಗಿ ದಂಡ.–** (1) ಯಾವ ವ್ಯಕ್ತಿಯು, ತಾನಾಗಿಯಾಗಿಯಾಗಲಿ ಅಥವಾ ಆತನ ಪರವಾಗಿ ಇತರ ಯಾರೇ ವ್ಯಕ್ತಿಯಾಗಲಿ ತಪ್ಪು ಮುದ್ರೆ ಹಾಕಿದ ಯಾವುದೇ ಆಹಾರ ಪದಾರ್ಥವನ್ನು ಮಾನವ ಸೇವನೆಗಾಗಿ ಮಾರಾಟ ಮಾಡಲು ತಯಾರಿಸುವನೋ ಅಥವಾ ದಾಸ್ತಾನು ಮಾಡುವನೋ ಅಥವಾ ವಿತರಿಸುವನೋ ಅಥವಾ ಆಮದು ಮಾಡಿಕೊಳ್ಳುವನೋ ಆ ಯಾರೇ ವ್ಯಕ್ತಿಯು ಮೂರು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

(2) ದಂಡನೆ ನಿರ್ಧರಣಾ ಅಧಿಕಾರಿಯು, ಈ ಪ್ರಕರಣದ ಮೇರೆಗಿನ ಅಪರಾಧದ ತಪ್ಪಿತಸ್ಥನೆಂದು ಕಂಡುಬಂದ ವ್ಯಕ್ತಿಗೆ ದೋಷವನ್ನು ಸರಿಪಡಿಸಲು, ಸರಿಪಡಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ನಿರ್ದೇಶನ ನೀಡಬಹುದು ಅಥವಾ ಅಂಥ ಆಹಾರ ಪದಾರ್ಥವನ್ನು ನಾಶಪಡಿಸತಕ್ಕದ್ದು.

**53. ತಪ್ಪುದಾರಿಗೆಳೆಯುವ ಜಾಹೀರಾತನ್ನು ನೀಡಿದ್ದಕ್ಕಾಗಿ ದಂಡ.–** (1) ಯಾವ ವ್ಯಕ್ತಿಯು,–

(ಎ) ಯಾವುದೇ ಆಹಾರವನ್ನು ತಪ್ಪು ತಪ್ಪಾಗಿ ವಿವರಿಸಿರುವಂಥ; ಅಥವಾ

(ಬಿ) ಯಾವುದೇ ಆಹಾರದ ಸ್ವರೂಪ ಅಥವಾ ಸತ್ವ ಅಥವಾ ಗುಣಮಟ್ಟಕ್ಕೆ ಸಂಬಂಧಪಟ್ಟಂತೆ ತಪ್ಪುದಾರಿಗೆಳೆಯುವ ಸಂಭವವಿರುವಂಥ ಅಥವಾ ಸುಳ್ಳು ಖಾತರಿಯನ್ನು ನೀಡುವ

– ಜಾಹೀರಾತನ್ನು ಪ್ರಕಟಿಸುವನೋ ಅಥವಾ ಆ ಜಾಹೀರಾತಿನ ಪ್ರಕಟಣೆಗೆ ಪಕ್ಷಕಾರನಾಗಿರುವನೊ ಆ ಯಾರೇ ವ್ಯಕ್ತಿಯು ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

(2) ಯಾವುದೇ ವ್ಯವಹರಣೆಯಲ್ಲಿ, ಯಾವ ಆಹಾರ ಪದಾರ್ಥದ ಸಂಬಂಧದಲ್ಲಿ ಉಲ್ಲಂಘನೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆಯೋ ಆ ಯಾವುದೇ ಆಹಾರ ಪದಾರ್ಥಕ್ಕೆ ಸಂಬಂಧಿಸಿದ ಲೇಬಲ್ ಅಥವಾ ಜಾಹೀರಾತು, ಆಹಾರದ ಸಂಯೋಜನೆಯ ನಿಖರವಾದ ವಿವರಣೆಯನ್ನು ಒಳಗೊಂಡಿದೆ ಎಂಬ ಸಂಗತಿಯ ಉಲ್ಲಂಘನೆಯನ್ನು ಮಾಡಲಾಗಿದೆ ಎಂದು ನಿರ್ಣಯಿಸುವುದಕ್ಕೆ ನ್ಯಾಯಾಲಯವನ್ನು ಅಡ್ಡಿಪಡಿಸತಕ್ಕದ್ದಲ್ಲ.

**54. ಆಹಾರವು ಬಾಹ್ಯ ವಸ್ತುವನ್ನು ಒಳಗೊಂಡಿರುವುದಕ್ಕಾಗಿ ದಂಡ.–** ಯಾರೇ ವ್ಯಕ್ತಿಯು, ತಾನಾಗಿಯಾಗಿಯಾಗಲಿ ಅಥವಾ ಆತನ ಪರವಾಗಿ ಇತರ ಯಾರೇ ವ್ಯಕ್ತಿಯೇ ಆಗಲಿ ಬಾಹ್ಯ ವಸ್ತುವನ್ನು ಒಳಗೊಂಡಿರುವ ಯಾವುದೇ ಆಹಾರ ಪದಾರ್ಥವನ್ನು ಮಾನವ ಸೇವನೆಗಾಗಿ ಮಾರಾಟ ಮಾಡಲು ತಯಾರಿಸಿದರೆ ಅಥವಾ ದಾಸ್ತಾನು ಮಾಡಿದರೆ ಅಥವಾ ವಿತರಿಸಿದರೆ ಅಥವಾ ಆಮದು ಮಾಡಿಕೊಂಡರೆ ಅವನು ಒಂದು ಲಕ್ಷ ರೂಪಾಯಿಯವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

**55. ಆಹಾರ ಸುರಕ್ಷತಾ ಅಧಿಕಾರಿಯ ನಿರ್ದೇಶನಗಳನ್ನು ಪಾಲಿಸಲು ತಪ್ಪಿದಕ್ಕೆ ದಂಡ.–** ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು ಅಥವಾ ಆಮದುದಾರನು ಈ ಅಧಿನಿಯಮದ ಅಗತ್ಯತೆಗಳನ್ನು ಅಥವಾ ನಿಯಮಗಳನ್ನು ಅಥವಾ ವಿನಿಯಮಗಳನ್ನು ಅಥವಾ ಆಹಾರ ಸುರಕ್ಷತಾ ಅಧಿಕಾರಿಯು ನಿರ್ದೇಶಿಸಿದಂತೆ, ಅವುಗಳ ಮೇರೆಗೆ ಹೊರಡಿಸಿದ ಆದೇಶಗಳ ಅಗತ್ಯತೆಗಳನ್ನು, ಯುಕ್ತ ಕಾರಣವಿಲ್ಲದೆ ಪಾಲಿಸಲು ತಪ್ಪಿದರೆ, ಅವನು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

**56. ಆಹಾರವನ್ನು ಅನಾರೋಗ್ಯಕರವಾಗಿ ಅಥವಾ ಅನೈರ್ಮಲ್ಯಕರ ಸ್ಥಿತಿಗಳಲ್ಲಿ ಸಂಸ್ಕರಿಸುವುದಕ್ಕೆ ಅಥವಾ ತಯಾರಿಸುವುದಕ್ಕೆ ದಂಡ.–** ಯಾವ ವ್ಯಕ್ತಿಯು, ತಾನಾಗಿಯಾಗಿಯಾಗಲಿ ಅಥವಾ ಆತನ ಪರವಾಗಿ ಇತರ ಯಾರೇ ವ್ಯಕ್ತಿಯಾಗಲಿ ಅನಾರೋಗ್ಯಕರ ಅಥವಾ ಅನೈರ್ಮಲ್ಯಕರ ಸ್ಥಿತಿಗಳಲ್ಲಿ ಯಾವುದೇ ಆಹಾರ ಪದಾರ್ಥವನ್ನು ಮಾನವ ಸೇವನೆಗಾಗಿ ತಯಾರಿಸುವನೋ ಅಥವಾ ಸಂಸ್ಕರಿಸುವನೋ ಆ ಯಾರೇ ವ್ಯಕ್ತಿಯು ಒಂದು ಲಕ್ಷ ರೂಪಾಯಿಯವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಗುರಿಯಾಗತಕ್ಕದ್ದು.

**57. ಕಲಬೆರಕೆಕಾರಕವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದಕ್ಕಾಗಿ ದಂಡ.–** (1) ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ಯಾವ ವ್ಯಕ್ತಿಯು ತಾನಾಗಿಯಾಗಿಯಾಗಲಿ ಅಥವಾ ಆತನ ಪರವಾಗಿ ಇತರ ಯಾರೇ ವ್ಯಕ್ತಿಯಾಗಲಿ, ಯಾವುದೇ ಕಲಬೆರಕೆಕಾರಕವನ್ನು ಆಮದು ಮಾಡಿಕೊಂಡರೆ ಅಥವಾ ಮಾರಾಟ ಮಾಡುವುದಕ್ಕಾಗಿ ತಯಾರಿಸಿದರೆ ಅಥವಾ ದಾಸ್ತಾನು ಮಾಡಿದರೆ, ಮಾರಾಟ ಮಾಡಿದರೆ ಅಥವಾ ವಿತರಿಸಿದರೆ ಆ ಯಾರೇ ವ್ಯಕ್ತಿಯು,–

(i) ಅಂಥ ಕಲಬೆರಕೆಕಾರಕವು ಆರೋಗ್ಯಕ್ಕೆ ಹಾನಿಕಾರಕವಲ್ಲದಿದ್ದರೆ, ಎರಡು ಲಕ್ಷ ರೂಪಾಯಿಗಳನ್ನು ಮೀರದ ದಂಡಕ್ಕೆ;

(ii) ಅಂಥ ಕಲಬೆರಕೆಕಾರಕವು ಆರೋಗ್ಯಕ್ಕೆ ಹಾನಿಕಾರಕವಾಗಿದ್ದಲ್ಲಿ, ಹತ್ತು ಲಕ್ಷ ರೂಪಾಯಿಗಳನ್ನು ಮೀರದ ದಂಡಕ್ಕೆ

– ಗುರಿಯಾಗತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗಿನ ವ್ಯವಹರಣೆಯಲ್ಲಿ, ಆರೋಪಿಯು, ಅಂಥ ಕಲಬೆರಕೆಕಾರಕವನ್ನು ಯಾರೇ ಇತರ ವ್ಯಕ್ತಿಯ ಪರವಾಗಿ ಹೊಂದಿರುವುದು ಪ್ರತಿರಕ್ಷೆಯಾಗತಕ್ಕದ್ದಲ್ಲ.

**58. ಯಾವ ಉಲ್ಲಂಘನೆಗಳಿಗೆ ನಿರ್ದಿಷ್ಟ ದಂಡಕ್ಕೆ ಉಪಬಂಧಿಸಿಲ್ಲವೋ ಆ ಉಲ್ಲಂಘನೆಗಳಿಗಾಗಿ ದಂಡ.–** ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಯಾವ ಉಲ್ಲಂಘನೆಗೆ ಈ ಅಧ್ಯಾಯದಲ್ಲಿ ದಂಡವನ್ನು ಪ್ರತ್ಯೇಕವಾಗಿ ಉಪಬಂಧಿಸಿಲ್ಲವೋ, ಅಂಥ ಉಲ್ಲಂಘನೆಯನ್ನು ಮಾಡುವ ಯಾರೇ ವ್ಯಕ್ತಿಯು, ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂತ ದಂಡಕ್ಕೆ ಗುರಿಯಾಗತಕ್ಕದ್ದು.

**59. ಸುರಕ್ಷಿತವಲ್ಲದ ಆಹಾರಕ್ಕಾಗಿ ದಂಡನೆ.–** ಯಾವ ವ್ಯಕ್ತಿಯು, ತಾನಾಗಿಯಾಗಿಯಾಗಲಿ ಅಥವಾ ಆತನ ಪರವಾಗಿ ಇತರ ಯಾರೇ ವ್ಯಕ್ತಿಯಾಗಲೀ ಯಾವ ಆಹಾರ ಪದಾರ್ಥವು ಮಾನವ ಸೇವನೆಗೆ ಸುರಕ್ಷಿತವಲ್ಲವೋ ಆ ಯಾವುದೇ ಆಹಾರ ಪದಾರ್ಥವನ್ನು ಮಾರಾಟ ಮಾಡಲು ತಯಾರಿಸುತ್ತಾನೋ ಅಥವಾ ದಾಸ್ತಾನು ಮಾಡುವನೋ ಅಥವಾ ಮಾರಾಟ ಮಾಡುತ್ತಾನೋ ಅಥವಾ ವಿತರಿಸುತ್ತಾನೋ ಅಥವಾ ಆಮದು ಮಾಡಿಕೊಳ್ಳುತ್ತಾನೋ ಆ ಯಾರೇ ವ್ಯಕ್ತಿಯು,–

(i) ಅಂಥ ವಿಫಲತೆಯಿಂದ ಅಥವಾ ಉಲ್ಲಂಘನೆಯಿಂದ ಹಾನಿಯಾಗದಿದ್ದಲ್ಲಿ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ;

(ii) ಅಂಥ ವಿಫಲತೆಯಿಂದ ಅಥವಾ ಉಲ್ಲಂಘನೆಯಿಂದ ತೀವ್ರತರವಲ್ಲದ ಹಾನಿ ಉಂಟಾದಲ್ಲಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಮೂರು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ;

(iii) ಅಂಥ ವಿಫಲತೆಯಿಂದ ಅಥವಾ ಉಲ್ಲಂಘನೆಯಿಂದ ತೀವ್ರತರವಾದ ಹಾನಿ ಉಂಟಾದಲ್ಲಿ ಆರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ;

(iv) ಅಂಥ ವಿಫಲತೆಯಿಂದ ಅಥವಾ ಉಲ್ಲಂಘನೆಯಿಂದ ಮರಣ ಸಂಭವಿಸಿದರೆ, ಏಳು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯ ಆದರೆ ಆಜೀವ ಕಾರಾವಾಸಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದ ಜುಲ್ಮಾನೆಯಿಂದ ಸಹ

– ದಂಡಿತನಾಗತಕ್ಕದ್ದು.

**60. ವಶಪಡಿಸಿಕೊಂಡ ಬಾಬುಗಳ ಬಗ್ಗೆ ಹಸ್ತಕ್ಷೇಪ ಮಾಡುವುದಕ್ಕಾಗಿ ದಂಡನೆ.–** ಈ ಅಧಿನಿಯಮದ ಮೇರೆಗೆ ವಶಪಡಿಸಿಕೊಂಡ ಯಾವುದೇ ಆಹಾರವನ್ನು, ವಾಹನವನ್ನು, ಸಾಧನ ಸಾಮಗ್ರಿಯನ್ನು, ಪ್ಯಾಕೇಜನ್ನು ಅಥವಾ ಲೇಬಲಿಂಗನ್ನು

ಅಥವಾ ಜಾಹೀರಾತು ಸಾಮಗ್ರಿಯನ್ನು ಅಥವಾ ಇತರ ವಸ್ತುವನ್ನು ಒಬ್ಬ ವ್ಯಕ್ತಿಯು ಆಹಾರ ಸುರಕ್ಷತಾ ಅಧಿಕಾರಿಯ ಅನುಮತಿಯಿಲ್ಲದೆ ಇಟ್ಟುಕೊಂಡರೆ, ಸ್ಥಳಾಂತರಿಸಿದರೆ ಅಥವಾ ಅಕ್ರಮವಾಗಿ ಬದಲಾಯಿಸಿದರೆ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**61. ಸುಳ್ಳು ಮಾಹಿತಿಗಾಗಿ ದಂಡನೆ.–** ಒಬ್ಬ ವ್ಯಕ್ತಿಯು, ಈ ಅಧಿನಿಯಮದ ಮೇರೆಗಿನ ಅಗತ್ಯತೆಗೆ ಅಥವಾ ನಿರ್ದೇಶನಕ್ಕೆ ಸಂಬಂಧಿಸಿದಂತೆ, ಆ ವ್ಯಕ್ತಿಯು ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವಂಥದ್ದು ಎಂದು ತಿಳಿದಿರುವ ಯಾವುದೇ ಮಾಹಿತಿಯನ್ನು ಒದಗಿಸಿದರೆ ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸಿದರೆ ಆತನು, ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**62. ಆಹಾರ ಸುರಕ್ಷತಾ ಅಧಿಕಾರಿಗೆ ಅಡ್ಡಿಯುಂಟು ಮಾಡುವುದಕ್ಕಾಗಿ ಅಥವಾ ಆಹಾರ ಸುರಕ್ಷತಾ ಅಧಿಕಾರಿಯಂತೆ ನಟಿಸುವುದಕ್ಕಾಗಿ ದಂಡನೆ.–** ಒಬ್ಬ ವ್ಯಕ್ತಿಯು ಆಹಾರ ಸುರಕ್ಷತಾ ಅಧಿಕಾರಿಯು ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಯುಕ್ತ ಕಾರಣವಿಲ್ಲದೆ ಪ್ರತಿರೋಧಿಸಿದರೆ, ಅಡ್ಡಿಯುಂಟು ಮಾಡಿದರೆ ಅಥವಾ ಅಡ್ಡಿಯುಂಟು ಮಾಡಲು ಪ್ರಯತ್ನಿಸಿದರೆ, ಅವನಂತೆ ನಟಿಸಿದರೆ, ಹೆದರಿಸಿದರೆ, ಬೆದರಿಸಿದರೆ ಅಥವಾ ಹಲ್ಲೆ ಮಾಡಿದರೆ, ಅವನು ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**63. ಲೈಸೆನ್ಸ್ ಇಲ್ಲದೆ ವ್ಯಾಪಾರ ವ್ಯವಹಾರವನ್ನು ನಡೆಸುವುದಕ್ಕಾಗಿ ದಂಡನೆ.–** ಯಾವ ವ್ಯಕ್ತಿಯನ್ನು ಅಥವಾ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನನ್ನು ಲೈಸೆನ್ಸ್ ಪಡೆಯಲು ಅಗತ್ಯಪಡಿಸಲಾಗಿದೆಯೋ ಆ ಯಾರೇ ವ್ಯಕ್ತಿಯು ಅಥವಾ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನು (ಈ ಅಧಿನಿಯಮದ ಪ್ರಕರಣ 31ರ ಉಪಪ್ರಕರಣ (2)ರ ಮೇರೆಗೆ ಲೈಸೆನ್ಸ್ ಪಡೆಯುವುದರಿಂದ ವಿನಾಯಿತಿಗೊಳಿಸಿರುವ ವ್ಯಕ್ತಿಗಳನ್ನು ಹೊರತುಪಡಿಸಿ) ತಾನಾಗಿಯೇ ಅಥವಾ ಅವನ ಪರವಾಗಿ ಯಾರೇ ವ್ಯಕ್ತಿಯು ಲೈಸೆನ್ಸ್ ಇಲ್ಲದೆ ಯಾವುದೇ ಆಹಾರ ಪದಾರ್ಥವನ್ನು ತಯಾರಿಸಿದರೆ, ಮಾರಾಟ ಮಾಡಿದರೆ, ದಾಸ್ತಾನು ಮಾಡಿದರೆ ಅಥವಾ ವಿತರಿಸಿದರೆ ಅಥವಾ ಆಮದು ಮಾಡಿಕೊಂಡರೆ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**64. ತರುವಾಯದ ಅಪರಾಧಗಳಿಗಾಗಿ ದಂಡನೆ.–** (1) ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಈ ಹಿಂದೆ ಅಪರಾಧಿ ಎಂದು ನಿರ್ಣೀತವಾದ ನಂತರವೂ ಅದೇ ಅಪರಾಧವನ್ನು ಮಾಡಿದರೆ ಮತ್ತು ಅದೇ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದರೆ ಅವನು,–

(i) ಅದೇ ಅಪರಾಧಕ್ಕಾಗಿ ಉಪಬಂಧಿಸಿರುವ ಗರಿಷ್ಠ ದಂಡನೆಗೆ ಒಳಪಟ್ಟು, ಮೊದಲನೇ ಅಪರಾಧ ನಿರ್ಣಯವಾದ ಮೇಲೆ ವಿಧಿಸಬಹುದಾಗಿದ್ದಂಥ ದಂಡನೆಯ ದುಪ್ಪಟ್ಟು ದಂಡನೆಗೆ ಗುರಿಯಾಗತಕ್ಕದ್ದು;

(ii) ಅಪರಾಧವು ಮುಂದುವರೆಯುದಿರುವಂಥದ್ದಾಗಿರುವಲ್ಲಿ, ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ, ದೈನಂದಿನ ಆಧಾರದ ಮೇಲೆ ಹೆಚ್ಚಿನ ಜುಲ್ಮಾನೆಗೆ ಗುರಿಯಾಗತಕ್ಕದ್ದು; ಮತ್ತು

(iii) ಅವನ ಲೈಸೆನ್ಸ್ ರದ್ದುಪಡಿಸುವುದಕ್ಕೆ ಗುರಿಯಾಗತಕ್ಕದ್ದು.

(2) ನ್ಯಾಯಾಲಯವು ಅಪರಾಧಿಯ ಹೆಸರನ್ನು ಮತ್ತು ನಿವಾಸ ಸ್ಥಳವನ್ನು, ಅಪರಾಧವನ್ನು ಮತ್ತು ವಿಧಿಸಿದ ದಂಡವನ್ನು ನ್ಯಾಯಾಲಯವು ನಿರ್ದೇಶಿಸಬಹುದಾದಂಥ ವಾರ್ತಾಪತ್ರಿಕೆಗಳಲ್ಲಿ ಅಥವಾ ಅಂಥ ರೀತಿಯಲ್ಲಿ ಅಪರಾಧಿಯ ವೆಚ್ಚದಲ್ಲಿ ಪ್ರಕಟಿಸುವಂತೆ ಸಹ ಮಾಡಬಹುದು ಮತ್ತು ಅಂಥ ಪ್ರಕಟಣೆಯ ವೆಚ್ಚಗಳನ್ನು ಅಪರಾಧ ನಿರ್ಣಯಕ್ಕೆ ಸಂಬಂಧಿಸಿದ ವೆಚ್ಚದ ಭಾಗವೆಂದು ಭಾವಿಸತಕ್ಕದ್ದು ಮತ್ತು ಅದು ಜುಲ್ಮಾನೆಯನ್ನು ವಸೂಲಿ ಮಾಡುವಂಥ ರೀತಿಯಲ್ಲಿಯೇ ವಸೂಲಿ ಮಾಡುವಂಥದ್ದಾಗಿರತಕ್ಕದ್ದು.

**65. ಬಳಕೆದಾರನಿಗೆ ಹಾನಿ ಉಂಟಾದ ಅಥವಾ ಅವನು ಮರಣ ಹೊಂದಿದ ಸಂದರ್ಭದಲ್ಲಿ ನಷ್ಟಪರಿಹಾರ.–** (1) ಈ ಅಧ್ಯಾಯದ ಇತರ ಉಪಬಂಧಗಳಿಗೆ ಬಾಧಕವಾಗದಂತೆ, ಯಾವ ವ್ಯಕ್ತಿಯು ತಾನಾಗಿಯಾಗಿಯೇ ಆಗಲಿ ಅಥವಾ ಆತನ ಪರವಾಗಿ ಇತರ ಯಾರೇ ವ್ಯಕ್ತಿಯೇ ಆಗಲಿ ಬಳಕೆದಾರನಿಗೆ ಹಾನಿಯುಂಟು ಮಾಡುವ ಅಥವಾ ಅವನ ಮರಣಕ್ಕೆ ಕಾರಣವಾಗುವ ಯಾವುದೇ ಆಹಾರ ಪದಾರ್ಥವನ್ನು ತಯಾರಿಸುವನೋ ಅಥವಾ ವಿತರಿಸುವನೋ ಅಥವಾ ಮಾರಾಟ ಮಾಡುವನೋ ಅಥವಾ ಆಮದು ಮಾಡಿಕೊಳ್ಳುವನೋ ಆ ಯಾರೇ ವ್ಯಕ್ತಿಗೆ, ಸಂದರ್ಭಾನುಸಾರ, ದಂಡನೆ ನಿರ್ಧರಣಾ ಅಧಿಕಾರಿಯು ಅಥವಾ ನ್ಯಾಯಾಲಯವು ಹಾನಿಗೆ ಒಳಗಾದ ವ್ಯಕ್ತಿಗೆ ಅಥವಾ ಮೃತಪಟ್ಟ ವ್ಯಕ್ತಿಯ ಕಾನೂನುಸಮ್ಮತ ಪ್ರತಿನಿಧಿಗೆ,–

(ಎ) ಮರಣದ ಸಂದರ್ಭದಲ್ಲಿ ಐದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದ;

(ಬಿ) ತೀವ್ರತರವಾದ ಹಾನಿ ಉಂಟಾದ ಸಂದರ್ಭದಲ್ಲಿ ಮೂರು ಲಕ್ಷ ರೂಪಾಯಿಗಳಿಗೆ ಮೀರದ; ಮತ್ತು

(ಸಿ) ಹಾನಿಯ ಎಲ್ಲ ಇತರ ಪ್ರಕರಣಗಳಲ್ಲಿ ಒಂದು ಲಕ್ಷ ರೂಪಾಯಿಗೆ ಮೀರದ

– ನಷ್ಟಪರಿಹಾರದ ಮೊತ್ತವನ್ನು ಸಂದಾಯ ಮಾಡುವಂತೆ ನಿರ್ದೇಶಿಸುವುದು ಕಾನೂನುಬದ್ಧವಾಗಿರತಕ್ಕದ್ದು:

ಪರಂತು, ನಷ್ಟಪರಿಹಾರವನ್ನು ಆದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ ಘಟನೆಯು ಸಂಭವಿಸಿದ ದಿನಾಂಕದಿಂದ ಆರು ತಿಂಗಳುಗಳಿಗಿಂತ ತಡವಾಗದಂತೆ ಸಂದಾಯ ಮಾಡತಕ್ಕದ್ದು.

ಮತ್ತೂ ಪರಂತು, ಮರಣ ಉಂಟಾದ ಸಂದರ್ಭದಲ್ಲಿ, ಘಟನೆಯು ಸಂಭವಿಸಿದ ಮೂವತ್ತು ದಿನಗಳೊಳಗೆ ಮೃತನ ಹತ್ತಿರದ ಸಂಬಂಧಿಗಳಿಗೆ ಮಧ್ಯಂತರ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(2) ಯಾರೇ ವ್ಯಕ್ತಿಯನ್ನು, ತೀವ್ರತರವಾದ ಹಾನಿಗೆ ಅಥವಾ ಮರಣಕ್ಕೆ ಕಾರಣವಾಗುವ ಅಪರಾಧದ ತಪ್ಪಿತಸ್ಥನೆಂದು ತೀರ್ಮಾನಿಸಿದಲ್ಲಿ, ದಂಡನೆ ನಿರ್ಧರಣಾ ಅಧಿಕಾರಿಯು ಅಥವಾ ನ್ಯಾಯಾಲಯವು, ತಪ್ಪಿತಸ್ಥನಾಗಿರುವ ವ್ಯಕ್ತಿಯ ಹೆಸರನ್ನು ಮತ್ತು ನಿವಾಸದ ಸ್ಥಳವನ್ನು, ಅಪರಾಧವನ್ನು ಮತ್ತು ವಿಧಿಸಿದ ದಂಡವನ್ನು ಅಥವಾ ದಂಡನೆ ನಿರ್ಧರಣಾ ಅಧಿಕಾರಿಯು ಅಥವಾ ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ವಾರ್ತಾ ಪತ್ರಿಕೆಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಅಪರಾಧಿಯ ವೆಚ್ಚದಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಅಂಥ ಪ್ರಕಟಣೆಯ ವೆಚ್ಚಗಳನ್ನು ಅಪರಾಧ ನಿರ್ಣಯಕ್ಕೆ

ಸಂಬಂಧಿಸಿದ ವೆಚ್ಚದ ಭಾಗವೆಂದು ಭಾವಿಸತಕ್ಕದ್ದು ಮತ್ತು ಅದು ಜುಲ್ಮಾನೆಯನ್ನು ವಸೂಲು ಮಾಡುವಂಥ ರೀತಿಯಲ್ಲಿಯೇ ವಸೂಲು ಮಾಡುವಂಥದ್ದು ಆಗಿರತಕ್ಕದ್ದು.

(3) ದಂಡನೆ ನಿರ್ಧರಣಾ ಅಧಿಕಾರಿ ಅಥವಾ ನ್ಯಾಯಾಲಯವು,–

(ಎ) ಬಳಕೆದಾರನಿಗೆ ತೀವ್ರತರವಾದ ಹಾನಿಯುಂಟಾದ ಅಥವಾ ಅವನು ಮೃತಪಟ್ಟ ಸಂದರ್ಭದಲ್ಲಿ, ಲೈಸೆನ್ಸ್‌ನ ರದ್ದಿಯಾತಿಗೆ ಮಾರುಕಟ್ಟೆಯಿಂದ ಆಹಾರವನ್ನು ಹಿಂಪಡೆಯುವುದಕ್ಕೆ, ಕಾರ್ಯ ಸಂಸ್ಥೆಯನ್ನು ಅಥವಾ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವದಕ್ಕೆ ಸಹ ಆದೇಶಿಸಬಹುದು;

(ಬಿ) ಇತರ ಪ್ರಕರಣಗಳಲ್ಲಿ ನಿರ್ಬಂಧಕ ಆದೇಶಗಳನ್ನು ಹೊರಡಿಸಬಹುದು.

**66. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರದ ನಿರ್ವಹಣೆಗಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಕಂಪನಿಯು ಬೇರೆ ಬೇರೆ ಕಾರ್ಯ ಸಂಸ್ಥೆಗಳನ್ನು ಅಥವಾ ಶಾಖೆಗಳನ್ನು ಅಥವಾ ಯಾವುದೇ ಕಾರ್ಯಸಂಸ್ಥೆಯಲ್ಲಿ ಅಥವಾ ಶಾಖೆಯಲ್ಲಿ ಬೇರೆ ಬೇರೆ ಘಟಕಗಳನ್ನು ಹೊಂದಿರುವಲ್ಲಿ, ಕಂಪನಿಯು ಆಹಾರ ಸುರಕ್ಷತೆಗೆ ಹೊಣೆಗಾರನೆಂದು ನಾಮನಿರ್ದೇಶನ ಮಾಡಿರುವ ಅಂಥ ಕಾರ್ಯಸಂಸ್ಥೆಯ, ಶಾಖೆಯ, ಘಟಕದ ಸಂಬಂಧಪಟ್ಟ ಮುಖ್ಯಸ್ಥನು ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು ಅಂಥ ಕಾರ್ಯಸಂಸ್ಥೆಯ, ಶಾಖೆಯ ಅಥವಾ ಘಟಕದ ಸಂಬಂಧದಲ್ಲಿ ಆದ ಉಲ್ಲಂಘನೆಗೆ ಹೊಣೆಗಾರನಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯು, ಆ ಅಪರಾಧವು ತನ್ನ ಅರಿವಿಗೆ ಬಾರದಂತೆ ನಡೆದಿದೆ ಎಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆ ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಅವನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಯಾರೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾದುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮ್‌ಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಫರ್ಮಿನ ಒಬ್ಬ ಪಾಲುದಾರ.

**67. ಆಹಾರ ಪದಾರ್ಥಗಳ ಆಮದಿನ ಸಂದರ್ಭದಲ್ಲಿ ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ಇತರ ಯಾವುದೇ ಅಧಿನಿಯಮದ ಮೇರೆಗೆ ಉಪಬಂಧಿಸಿದ ದಂಡಗಳ ಜೊತೆಗೆ ದಂಡ ವಿಧಿಸುವುದು.–** (1) ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಮತ್ತು ವಿನಿಯಮಗಳನ್ನು ಉಲ್ಲಂಘಿಸಿ ಯಾವುದೇ ಆಹಾರ ಪದಾರ್ಥವನ್ನು ಆಮದು ಮಾಡಿಕೊಳ್ಳುವ ಯಾರೇ ವ್ಯಕ್ತಿಯು, ವಿದೇಶಿ ವ್ಯಾಪಾರ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1992 (1992ರ 22) ಮತ್ತು ಸೀಮಾ ಸುಂಕ ಅಧಿನಿಯಮ, 1962 (1962ರ 52)ರ ಉಪಬಂಧಗಳ ಮೇರೆಗೆ ಅವನು ಗುರಿಯಾಗಬಹುದಾದ ಯಾವುದೇ ದಂಡದ ಜೊತೆಗೆ ಈ ಅಧಿನಿಯಮದ ಮೇರೆಗಿನ ದಂಡಕ್ಕೂ ಸಹ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಅವನ ವಿರುದ್ಧ ವ್ಯವಹರಣೆಯನ್ನು ನಡೆಸತಕ್ಕದ್ದು.

(2) ವಿದೇಶಿ ವ್ಯಾಪಾರ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1992 (1992ರ 22) ಅಥವಾ ಸಂದರ್ಭಾನುಸಾರ, ಸೀಮಾ ಸುಂಕ ಅಧಿನಿಯಮ, 1962 (1962ರ 52) ಅಥವಾ ಇತರ ಯಾವುದೇ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರವು ಅನುಮತಿಸಿದರೆ, ಅಂಥ ಯಾವುದೇ ಆಹಾರ ಪದಾರ್ಥವನ್ನು ನಾಶಪಡಿಸತಕ್ಕದ್ದು ಅಥವಾ ಆಮದುದಾರನಿಗೆ ಹಿಂದಿರುಗಿಸತಕ್ಕದ್ದು.

## ಅಧ್ಯಾಯ X

## ನ್ಯಾಯನಿರ್ಣಯ ಮತ್ತು ಆಹಾರ ಸುರಕ್ಷತಾ ಅಪೀಲು ನ್ಯಾಯಾಧಿಕರಣ

**68. ನ್ಯಾಯನಿರ್ಣಯ.–** (1) ಈ ಅಧ್ಯಾಯದ ಮೇರೆಗೆ ನ್ಯಾಯನಿರ್ಣಯದ ಉದ್ದೇಶಗಳಿಗಾಗಿ, ಆರೋಪಿಸಲಾದ ಅಪರಾಧವನ್ನು ಯಾವ ಜಿಲ್ಲೆಯಲ್ಲಿ ಮಾಡಲಾಗಿದೆಯೋ ಆ ಜಿಲ್ಲೆಯ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅಧಿಕಾರಿಯನ್ನು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ನ್ಯಾಯನಿರ್ಣಯ ಮಾಡುವುದಕ್ಕಾಗಿ, ದಂಡನೆ ನಿರ್ಧರಣಾ ಅಧಿಕಾರಿಯನ್ನಾಗಿ ರಾಜ್ಯ ಸರ್ಕಾರವು ಅಧಿಸೂಚಿಸತಕ್ಕದ್ದು.

(2) ದಂಡನೆ ನಿರ್ಧರಣಾ ಅಧಿಕಾರಿಯು, ವಿಷಯಕ್ಕೆ ಸಂಬಂಧಿಸಿದಂತೆ ಮನವಿಯನ್ನು ಸಲ್ಲಿಸಲು ವ್ಯಕ್ತಿಗೆ ಸೂಕ್ತ ಅವಕಾಶವನ್ನು ನೀಡಿದ ತರುವಾಯ ಮತ್ತು ಅಂಥ ವಿಚಾರಣೆಯನ್ನು ಮಾಡಿದ ಮೇಲೆ ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಅಥವಾ ವಿನಿಯಮಗಳನ್ನು ವ್ಯಕ್ತಿಯು ಉಲ್ಲಂಘಿಸಿರುವನೆಂದು ತನಗೆ ಮನವರಿಕೆಯಾದರೆ, ಆ ಅಪರಾಧಕ್ಕೆ ಸಂಬಂಧಿಸಿದ ಉಪಬಂಧಗಳಿಗೆ ಅನುಸಾರವಾಗಿ ತಾನು ಸೂಕ್ತವೆಂದು ಭಾವಿಸುವಂಥ ದಂಡವನ್ನು ವಿಧಿಸತಕ್ಕದ್ದು.

(3) ದಂಡನೆ ನಿರ್ಧರಣಾ ಅಧಿಕಾರಿಯು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದು, ಮತ್ತು,–

(ಎ) ಅವನ ಮುಂದೆ ನಡೆಯುವ ಎಲ್ಲ ವ್ಯವಹರಣೆಗಳನ್ನು ಭಾರತ ದಂಡ ಸಂಹಿತೆ (1860ರ 45) ಯ ಪ್ರಕರಣ 193 ಮತ್ತು 228ರ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕದ್ದು;

(ಬಿ) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರ ಪ್ರಕರಣ 345 ಮತ್ತು ಪ್ರಕರಣ 346ರ ಉದ್ದೇಶಗಳಿಗಾಗಿ ಅದನ್ನು ನ್ಯಾಯಾಲಯವೆಂದು ಭಾವಿಸತಕ್ಕದ್ದು.

(4) ಈ ಅಧ್ಯಾಯದ ಮೇರೆಗೆ ದಂಡದ ಪರಿಮಾಣವನ್ನು ನಿರ್ಣಯಿಸುವಾಗ, ದಂಡನೆ ನಿರ್ಧರಣಾ ಅಧಿಕಾರಿಯು ಪ್ರಕರಣ 49ರಲ್ಲಿ ನಿರ್ದಿಷ್ಟಪಡಿಸಿರುವ ಮಾರ್ಗಸೂಚಿಗಳಿಗೆ ಯುಕ್ತ ಗಮನ ನೀಡತಕ್ಕದ್ದು.

**69. ಅಪರಾಧಗಳನ್ನು ರಾಜೀ ಮಾಡಿಕೊಳ್ಳಲು ಅಧಿಕಾರ.–** (1) ಆಹಾರ ಸುರಕ್ಷತಾ ಆಯುಕ್ತನು, ಈ ಅಧಿನಿಯಮದ ವಿರುದ್ಧದ ಅಪರಾಧವನ್ನು ಅಥವಾ ಉಲ್ಲಂಘನೆಯನ್ನು ಮಾಡಿರುವನೆಂಬ ಸಕಾರಣ ಯುಕ್ತ ನಂಬಿಕೆಯು ಯಾರ ವಿರುದ್ಧ ಇದೆಯೋ, ಅಂಥ ಯಾವುದೇ ಆಹಾರ ಪದಾರ್ಥವನ್ನು ಸ್ವತಃ ತಯಾರಿಸುವ ಮತ್ತು ಮಾರಾಟ ಮಾಡುವ ಚಿಲ್ಲರೆ ತಯಾರಕರಿಂದ, ಚಿಲ್ಲರೆ ವ್ಯಾಪಾರಿಗಳಿಂದ, ಬೀದಿ ವ್ಯಾಪಾರಿಗಳಿಂದ, ಸಂಚಾರಿ ಮಾರಾಟಗಾರರಿಂದ, ತಾತ್ಕಾಲಿಕ ಅಂಗಡಿಗಳನ್ನು ಹೊಂದಿರುವವರಿಂದ, ಮಾಡಿರುವನೆಂದು ಅಂಥ ವ್ಯಕ್ತಿಯು ಶಂಕಿಸಲಾದ ಅಪರಾಧವನ್ನು ರಾಜೀ ಮಾಡುವ ಮೂಲಕ ಹಣದ ಸಂದಾಯವನ್ನು ಸ್ವೀಕರಿಸಲು ಗೊತ್ತುಪಡಿಸಿದ ಅಧಿಕಾರಿಗೆ ಆದೇಶದ ಮೂಲಕ ಅಧಿಕಾರ ನೀಡಬಹುದು.

(2) ಅಂಥ ಅಧಿಕಾರಿಗೆ ಅಂಥ ಹಣದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಶಂಕಿತ ವ್ಯಕ್ತಿಯು ಅಭಿರಕ್ಷೆಯಲ್ಲಿದ್ದರೆ, ಅವನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಆ ಅಪರಾಧಕ್ಕೆ ಸಂಬಂಧಿಸಿದಂತೆ ಅಂಥ ವ್ಯಕ್ತಿಯ ವಿರುದ್ಧ ಮುಂದಿನ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ.

(3) ಉಪಪ್ರಕರಣ (1)ರ ಮೇರೆಗೆ ರಾಜಿಯಾಗಿ ಅಂಗೀಕರಿಸಿದ ಅಥವಾ ಅಂಗೀಕರಿಸಲು ಒಪ್ಪಿದ ಹಣದ ಮೊತ್ತವು ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿರತಕ್ಕದ್ದಲ್ಲ ಮತ್ತು ಪ್ರಕರಣ 49ರಲ್ಲಿ ನಿರ್ದಿಷ್ಟಪಡಿಸಿದ ಮಾರ್ಗಸೂಚಿಗಳಿಗೆ ಯುಕ್ತ ಗಮನವನ್ನು ನೀಡತಕ್ಕದ್ದು:

ಪರಂತು, ಈ ಅಧಿನಿಯಮದ ಮೇರೆಗೆ ಯಾವ ಅಪರಾಧಕ್ಕೆ ಕಾರಾವಾಸ ಶಿಕ್ಷೆಯನ್ನು ನಿರ್ದಿಷ್ಟಪಡಿಸಲಾಗಿದೆಯೋ ಆ ಯಾವುದೇ ಅಪರಾಧವನ್ನು ರಾಜಿ ಮಾಡಿಕೊಳ್ಳತಕ್ಕದ್ದಲ್ಲ.

**70. ಆಹಾರ ಸುರಕ್ಷತಾ ಅಪೀಲು ನ್ಯಾಯಾಧಿಕರಣದ ಸ್ಥಾಪನೆ.–** (1) ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು, ಪ್ರಕರಣ 68ರ ಮೇರೆಗೆ ದಂಡನೆ ನಿರ್ಧರಣಾ ಅಧಿಕಾರಿಯು ನೀಡಿದ ತೀರ್ಮಾನಗಳ ವಿರುದ್ಧ ಹೂಡಿದ ಅಪೀಲುಗಳನ್ನು ವಿಚಾರಣೆ ಮಾಡುವುದಕ್ಕಾಗಿ ಆಹಾರ ಸುರಕ್ಷತಾ ಅಪೀಲು ನ್ಯಾಯಾಧಿಕರಣವೆಂದು ಕರೆಯಲಾಗುವ ಒಂದು ಅಥವಾ ಹೆಚ್ಚು ನ್ಯಾಯಾಧಿಕರಣಗಳನ್ನು ಅಧಿಸೂಚನೆಯ ಮೂಲಕ ಸ್ಥಾಪಿಸಬಹುದು.

(2) ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ನ್ಯಾಯಾಧಿಕರಣವು ಯಾವ ವಿಷಯಗಳಿಗೆ ಮತ್ತು ಪ್ರದೇಶಗಳಿಗೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬಹುದೋ ಆ ವಿಷಯಗಳನ್ನು ಮತ್ತು ಪ್ರದೇಶಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(3) ನ್ಯಾಯಾಧಿಕರಣವು, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ನೇಮಕ ಮಾಡುವಂಥ ಒಬ್ಬ ವ್ಯಕ್ತಿಯನ್ನು ಮಾತ್ರ (ಇನ್ನು ಮುಂದೆ ನ್ಯಾಯಾಧಿಕರಣದ ಪೀಠಾಸೀನ ಅಧಿಕಾರಿಯೆಂದು ಉಲ್ಲೇಖಿಸಲಾಗಿದೆ) ಒಳಗೊಂಡಿರತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು, ಅವನು ಜಿಲ್ಲಾ ನ್ಯಾಯಾಧೀಶನಾಗಿರುವ ಅಥವಾ ಜಿಲ್ಲಾ ನ್ಯಾಯಾಧೀಶನಾಗಿದ್ದ ಹೊರತು ನ್ಯಾಯಾಧಿಕರಣಕ್ಕೆ ಪೀಠಾಸೀನ ಅಧಿಕಾರಿಯಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(4) ಪೀಠಾಸೀನ ಅಧಿಕಾರಿಯ ಅರ್ಹತೆಗಳು, ನೇಮಕ, ಪದಾವಧಿ, ಸಂಬಳ ಮತ್ತು ಭತ್ಯೆಗಳು, ರಾಜೀನಾಮೆ ಮತ್ತು ಅವನನ್ನು ಪದದಿಂದ ತೆಗೆದುಹಾಕುವುದು ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

(5) ಅಪೀಲಿನ ಕಾರ್ಯವಿಧಾನ ಮತ್ತು ನ್ಯಾಯಾಧಿಕರಣದ ಅಧಿಕಾರಗಳು ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**71. ನ್ಯಾಯಾಧಿಕರಣದ ಕಾರ್ಯವಿಧಾನ ಮತ್ತು ಅಧಿಕಾರಗಳು.–** (1) ನ್ಯಾಯಾಧಿಕರಣವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ (1908ರ 5) ಹೇಳಲಾದ ಗೊತ್ತುಪಡಿಸಿದ ಕಾರ್ಯವಿಧಾನಕ್ಕೆ ಬದ್ಧವಾಗಿರತಕ್ಕದ್ದಲ್ಲ, ಆದರೆ ಸ್ವಾಭಾವಿಕ ನ್ಯಾಯದ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಈ ಅಧಿನಿಯಮದ ಇತರ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಒಳಪಟ್ಟು ನ್ಯಾಯಾಧಿಕರಣವು ತನ್ನ ಉಪವೇಶನಗಳನ್ನು ಯಾವ ಸ್ಥಳದಲ್ಲಿ ನಡೆಸಬೇಕೋ ಆ ಸ್ಥಳವೂ ಒಳಗೊಂಡಂತೆ ತನ್ನ ಸ್ವಂತ ಕಾರ್ಯ ವಿಧಾನವನ್ನು ವಿನಿಯಮಿಸುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ನ್ಯಾಯಾಧಿಕರಣವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ, ದಾವೆಯನ್ನು ಅಧಿವಿಚಾರಣೆ ಮಾಡುವಾಗ, ಸಿವಿಲ್ ಪ್ರಕಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸಿ ವಿಚಾರಣೆ ಮಾಡುವುದು;

(ಬಿ) ದಸ್ತಾವೇಜುಗಳನ್ನು ಅಥವಾ ಇತರ ವಿದ್ಯುನ್ಮಾನ ದಾಖಲೆಗಳನ್ನು ಶೋಧನೆ ಮಾಡಲು ಮತ್ತು ಹಾಜರುಪಡಿಸಲು ಅಗತ್ಯಪಡಿಸುವುದು;

(ಸಿ) ಅಫಿಡಾವಿತ್ತುಗಳ ಮೂಲಕ ಸಾಕ್ಷ್ಯಗಳನ್ನು ಸ್ವೀಕರಿಸುವುದು;

(ಡಿ) ಸಾಕ್ಷಿದಾರರ ವಿಚಾರಣೆಗಾಗಿ ಅಥವಾ ದಸ್ತಾವೇಜುಗಳ ಪರಿಶೀಲನೆಗಾಗಿ ಕಮೀಷನ್‌ಗಳನ್ನು ಹೊರಡಿಸುವುದು;

(ಇ) ತನ್ನ ತೀರ್ಮಾನಗಳನ್ನು ಪುನರವಲೋಕಿಸುವುದು;

(ಎಫ್) ತಪ್ಪಿದ್ದಕ್ಕಾಗಿ ಅರ್ಜಿಯನ್ನು ವಜಾ ಮಾಡುವುದು ಅಥವಾ ಅದನ್ನು ಏಕಪಕ್ಷೀಯವಾಗಿ ತೀರ್ಮಾನಿಸುವುದು;

(ಜಿ) ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಇತರ ಯಾವುದೇ ವಿಷಯ.

(3) ನ್ಯಾಯಾಧಿಕರಣದ ಮುಂದೆ ನಡೆಯುವ ಪ್ರತಿಯೊಂದು ವ್ಯವಹರಣೆಯನ್ನು ಭಾರತ ದಂಡ ಸಂಹಿತೆ, 1860 (1860ರ 45)ರ ಪ್ರಕರಣ 193 ಮತ್ತು ಪ್ರಕರಣ 228ರ ಅರ್ಥವ್ಯಾಪ್ತಿಯೊಳಗೆ ಮತ್ತು ಪ್ರಕರಣ 196ರ ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು. ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರಕರಣ 195ರ ಮತ್ತು XXVIನೇ ಅಧ್ಯಾಯದ ಎಲ್ಲ ಉದ್ದೇಶಗಳಿಗಾಗಿ ಅದನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(4) ಅಪೀಲುದಾರನು, ನ್ಯಾಯಾಧಿಕರಣದ ಮುಂದೆ ತನ್ನ ವಾದವನ್ನು ಮಂಡಿಸಲು ಖುದ್ದಾಗಿ ಹಾಜರಾಗಬಹುದು ಅಥವಾ ಒಬ್ಬ ಅಥವಾ ಹೆಚ್ಚು ಕಾನೂನು ವೃತ್ತಿಗರನ್ನು ಅಥವಾ ಅದರ ಯಾರೇ ಅಧಿಕಾರಿಗಳನ್ನು ಅಧಿಕೃತಗೊಳಿಸಬಹುದು.

(5) ಕಾಲಪರಿಮಿತಿ ಅಧಿನಿಯಮ, 1963 (1963ರ 36) ರ ಉಪಬಂಧಗಳು, ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ನ್ಯಾಯಾಧಿಕರಣಕ್ಕೆ ಸಲ್ಲಿಸಿದ ಅಪೀಲಿಗೆ ಅನ್ವಯವಾಗತಕ್ಕದ್ದು.

(6) ನ್ಯಾಯಾಧಿಕರಣದ ಯಾವುದೇ ತೀರ್ಮಾನದಿಂದ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ತನಗೆ ನ್ಯಾಯಾಧಿಕರಣದ ತೀರ್ಮಾನವು ಅಥವಾ ಆದೇಶವು ತಲುಪಿದ ದಿನಾಂಕದಿಂದ ಅರವತ್ತು ದಿನಗಳೊಳಗೆ, ಅಂಥ ಆದೇಶದಿಂದ ಉಂಟಾಗುವ ಸಂಗತಿಯ ಅಥವಾ ಕಾನೂನಿನ ಯಾವುದೇ ಪ್ರಶ್ನೆಯ ಬಗ್ಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣದಿಂದಾಗಿ ಅಪೀಲುದಾರನಿಗೆ ಅಡ್ಡಿ ಉಂಟಾಗಿತ್ತೆಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದರೆ, ಅರವತ್ತು ದಿನಗಳಿಗೆ ಮೀರದ ಇನ್ನೂ ಹೆಚ್ಚಿನ ಅವಧಿಯೊಳಗೆ ಅಪೀಲನ್ನು ಸಲ್ಲಿಸಲು ಅನುಮತಿಸಬಹುದು.

**72. ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲ.–** ಯಾವುದೇ ಸಿವಿಲ್ ನ್ಯಾಯಾಲಯವು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ, ಯಾವ ವಿಷಯದ ಬಗ್ಗೆ ನಿರ್ಧರಿಸಲು ದಂಡನೆ ನಿರ್ಧರಣಾ ಅಧಿಕಾರಿಗೆ ಅಥವಾ ನ್ಯಾಯಾಧಿಕರಣಕ್ಕೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಪುರಸ್ಕರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಮತ್ತು ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರದ ಅನುಸಾರವಾಗಿ ಕೈಗೊಂಡ ಅಥವಾ ಕೈಗೊಳ್ಳಲಾಗುವ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡತಕ್ಕದ್ದಲ್ಲ.

**73. ಪ್ರಕರಣಗಳನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡಲು ನ್ಯಾಯಾಲಯದ ಅಧಿಕಾರ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಒಳಗೊಂಡಿದ್ದರೂ, ವಿಶೇಷ ನ್ಯಾಯಾಲಯವು ಅಧಿವಿಚಾರಣೆ ಮಾಡುವಂಥವುಗಳಲ್ಲದ ಎಲ್ಲ ಅಪರಾಧಗಳನ್ನು ಮೊದಲ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಥವಾ ಮಹಾನಗರ ಮ್ಯಾಜಿಸ್ಟ್ರೇಟನು ಕ್ಷಿಪ್ರ ರೀತಿಯಲ್ಲಿ ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಸದರಿ ಸಂಹಿತೆಯ 262 ರಿಂದ 265ನೇ ಪ್ರಕರಣಗಳ (ಎರಡನ್ನೂ ಒಳಗೊಂಡು) ಉಪಬಂಧಗಳು ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅಂಥ ಅಧಿವಿಚಾರಣೆಗೆ ಅನ್ವಯಿಸತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗಿನ ಕ್ಷಿಪ್ರ ಅಧಿವಿಚಾರಣೆಯಲ್ಲಿ ಯಾವುದೇ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ, ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸ ಶಿಕ್ಷೆಯನ್ನು ವಿಧಿಸುವುದು ಮ್ಯಾಜಿಸ್ಟ್ರೇಟನಿಗೆ ಕಾನೂನುಬದ್ಧವಾಗಿರತಕ್ಕದ್ದು:

ಮತ್ತು ಪರಂತು, ಈ ಪ್ರಕರಣದ ಮೇರೆಗೆ ಕ್ಷಿಪ್ರ ಅಧಿವಿಚಾರಣೆಯ ಪ್ರಾರಂಭದಲ್ಲಿ ಅಥವಾ ಕ್ಷಿಪ್ರ ಅಧಿವಿಚಾರಣೆಯನ್ನು ನಡೆಸುವ ಅವಧಿಯಲ್ಲಿ, ಪ್ರಕರಣದ ಸ್ವರೂಪವು ಒಂದು ವರ್ಷಕ್ಕೆ ಮೀರಿದ ಅವಧಿಯ ಕಾರಾವಾಸ ಶಿಕ್ಷೆಯನ್ನು ವಿಧಿಸುವಂಥದ್ದಾಗಿದೆ ಎಂದು ಅಥವಾ ಇತರ ಯಾವುದೇ ಕಾರಣಕ್ಕಾಗಿ ಪ್ರಕರಣವನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡುವುದು ಅನಪೇಕ್ಷಿತವೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಮ್ಯಾಜಿಸ್ಟ್ರೇಟನು ಪಕ್ಷಕಾರರನ್ನು ವಿಚಾರಣೆ ಮಾಡಿದ ತರುವಾಯ ಆ ಮಟ್ಟಿಗೆ ಆದೇಶವನ್ನು ಅಭಿಲೇಖಿಸತಕ್ಕದ್ದು ಮತ್ತು ಆ ತರುವಾಯ ವಿಚಾರಣೆ ಮಾಡಿರಬಹುದಾದ ಯಾರೇ ಸಾಕ್ಷಿದಾರನನ್ನು ಮತ್ತೆ ಕರೆಸತಕ್ಕದ್ದು ಮತ್ತು ಸದರಿ ಸಂಹಿತೆಯಲ್ಲಿ ಉಪಬಂಧಿಸಿದ ರೀತಿಯಲ್ಲಿ ಪ್ರಕರಣವನ್ನು ವಿಚಾರಣೆ ಮಾಡಲು ಅಥವಾ ಮರು ವಿಚಾರಣೆ ಮಾಡಲು ಮುಂದುವರಿಯತಕ್ಕದ್ದು.

**74. ವಿಶೇಷ ನ್ಯಾಯಾಲಯಗಳು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್.–** (1) ಈ ಅಧಿನಿಯಮದಲ್ಲಿ ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಯಾವ ಅಪರಾಧಗಳಿಗೆ ಮೂರು ವರ್ಷಗಳಿಗೂ ಹೆಚ್ಚಿನ ಕಾರಾವಾಸ ಶಿಕ್ಷೆಯನ್ನು ಗೊತ್ತುಪಡಿಸಲಾಗಿದೆಯೋ ಅಂಥ, ಬಳಕೆದಾರನಿಗೆ ಉಂಟಾದ ತೀವ್ರತರವಾದ ಹಾನಿಗೆ ಅಥವಾ ಅವನ ಮರಣಕ್ಕೆ ಸಂಬಂಧಪಟ್ಟ ಅಪರಾಧಗಳ ಅಧಿವಿಚಾರಣೆಯ ಉದ್ದೇಶಗಳಿಗಾಗಿ, ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತ ಮತ್ತು ಅವಶ್ಯವೆಂದು ಪರಿಗಣಿಸಿದರೆ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕಾಗಿ ಅಥವಾ ಪ್ರದೇಶಗಳಿಗಾಗಿ ಮತ್ತು ಅಂಥ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವುದಕ್ಕಾಗಿ ಅವಶ್ಯಕವಾಗಬಹುದಾದಷ್ಟು ಸಂಖ್ಯೆಯ ವಿಶೇಷ ನ್ಯಾಯಾಲಯಗಳನ್ನು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಸಹಮತಿಯೊಂದಿಗೆ ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶಗಳಲ್ಲಿ ರಚಿಸಬಹುದು.

(2) ವಿಶೇಷ ನ್ಯಾಯಾಲಯವು, ಸ್ವ-ಪ್ರೇರಣೆಯಿಂದ ಅಥವಾ ಪಬ್ಲಿಕ್ ಪ್ರಾಸಿಕ್ಯೂಟರನು ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ತನ್ನ ಸಾಮಾನ್ಯ ಉಪವೇಶನದ ಸ್ಥಳವನ್ನು ಹೊರತುಪಡಿಸಿ ಯಾವುದೇ ಸ್ಥಳದಲ್ಲಿ ತನ್ನ ಯಾವುದೇ ವ್ಯವಹರಣೆಗಳಿಗಾಗಿ ಉಪವೇಶನ ನಡೆಸುವುದು ವಿಹಿತವೆಂದು ಅಥವಾ ಅಪೇಕ್ಷಣೀಯವೆಂದು ಅದು ಪರಿಗಣಿಸಿದರೆ, ಅದು ಹಾಗೆ ಮಾಡಬಹುದು.

(3) ಈ ಅಧಿನಿಯಮದ ಮೇರೆಗೆ ವಿಶೇಷ ನ್ಯಾಯಾಲಯದಿಂದ ಯಾವುದೇ ಅಪರಾಧದ ಅಧಿವಿಚಾರಣೆಗೆ ಇತರ ಯಾವುದೇ ನ್ಯಾಯಾಲಯದಲ್ಲಿ (ವಿಶೇಷ ನ್ಯಾಯಾಲಯವಾಗಿರದ) ಆಪಾದಿತನ ವಿರುದ್ಧದ ಇತರ ಯಾವುದೇ ಪ್ರಕರಣದ ಅಧಿವಿಚಾರಣೆಗಿಂತ ಮೊದಲ ಪ್ರಾಶಸ್ತ್ಯ ನೀಡತಕ್ಕದ್ದು ಮತ್ತು ಅಂಥ ಇತರ ಪ್ರಕರಣದ ಅಧಿವಿಚಾರಣೆಗಿಂತ ಮೊದಲ ಆದ್ಯತೆ ನೀಡಿ ಆ ಪ್ರಕರಣದ ವಿಚಾರಣೆಯನ್ನು ಮುಗಿಸತಕ್ಕದ್ದು ಮತ್ತು ತದನುಸಾರವಾಗಿ ಅಂಥ ಇತರ ಪ್ರಕರಣದ ಅಧಿವಿಚಾರಣೆಯನ್ನು ತಡೆಹಿಡಿಯತಕ್ಕದ್ದು.

(4) ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು, ಪ್ರತಿಯೊಂದು ವಿಶೇಷ ನ್ಯಾಯಾಲಯಕ್ಕೆ ಪಬ್ಲಿಕ್ ಪ್ರಾಸಿಕ್ಯೂಟರನನ್ನಾಗಿ ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು ಮತ್ತು ಒಬ್ಬನಿಗಿಂತ ಹೆಚ್ಚಿನ ವ್ಯಕ್ತಿಗಳನ್ನು ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರನ್ನಾಗಿ ನೇಮಕ ಮಾಡಬಹುದು:

ಪರಂತು, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಯಾವುದೇ ಪ್ರಕರಣ ಅಥವಾ ಪ್ರಕರಣಗಳ ವರ್ಗ ಅಥವಾ ಗುಂಪಿಗಾಗಿ, ಒಬ್ಬ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ನನ್ನು ಸಹ ನೇಮಕ ಮಾಡಬಹುದು.

(5) ಈ ಪ್ರಕರಣದ ಮೇರೆಗೆ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕಗೊಳ್ಳುವ ವ್ಯಕ್ತಿಯು, ಅವನು ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಗೆ ನ್ಯಾಯವಾದಿಯಾಗಿ ವೃತ್ತಿನಿರತನಾಗಿದ್ದ ಹೊರತು ಅಥವಾ ಕೇಂದ್ರ ಅಥವಾ ರಾಜ್ಯದ ಅಧೀನದಲ್ಲಿ, ಕಾನೂನಿನ ವಿಶೇಷ ಜ್ಞಾನವು ಅಗತ್ಯವಿರುವ, ಯಾವುದೇ ಹುದ್ದೆಯಲ್ಲಿ ಏಳು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ಪದಧಾರಣ ಮಾಡಿದ್ದ ಹೊರತು ಅರ್ಹನಾಗಿರತಕ್ಕದ್ದಲ್ಲ.

**75. ಪ್ರಕರಣಗಳನ್ನು ನಿಯತ ನ್ಯಾಯಾಲಯಗಳಿಗೆ ವರ್ಗಾಯಿಸಲು ಅಧಿಕಾರ.–** ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಂಡ ತರುವಾಯ, ವಿಶೇಷ ನ್ಯಾಯಾಲಯವು, ಆ ಅಪರಾಧವು ತಾನು ಅಧಿವಿಚಾರಣೆ ಮಾಡುವಂಥದಲ್ಲ ಎಂದು ಅಭಿಪ್ರಾಯಪಟ್ಟಲ್ಲಿ, ಅಂಥ ಅಪರಾಧವನ್ನು ಅಧಿವಿಚಾರಣೆ ಮಾಡುವ ಅಧಿಕಾರವ್ಯಾಪ್ತಿಯನ್ನು ತಾನು ಹೊಂದಿರದಿದ್ದರೂ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರ ಮೇರೆಗೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಯಾವುದೇ ನ್ಯಾಯಾಲಯಕ್ಕೆ ಅಂಥ ಅಪರಾಧದ ಅಧಿವಿಚಾರಣೆಗಾಗಿ ಆ ಪ್ರಕರಣವನ್ನು ವರ್ಗಾಯಿಸತಕ್ಕದ್ದು ಮತ್ತು ಯಾವ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾಯಿಸಲಾಯಿತೋ ಆ ನ್ಯಾಯಾಲಯವು, ಆ ಅಪರಾಧದ ಸಂಜ್ಞಾನವನ್ನು ತೆಗೆದುಕೊಂಡಿದ್ದರೆ ಹೇಗೋ ಹಾಗೆ ಅಪರಾಧದ ಅಧಿವಿಚಾರಣೆಯನ್ನು ಮುಂದುವರಿಸಬಹುದು.

**76. ಅಪೀಲು.–** (1) ವಿಶೇಷ ನ್ಯಾಯಾಲಯದ ತೀರ್ಮಾನದಿಂದ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಮತ್ತು ಈ ಅಧಿನಿಯಮದ ಮೇರೆಗೆ ದಂಡ, ನಷ್ಟ ಪರಿಹಾರ ಅಥವಾ ಹಾನಿ ಪರಿಹಾರದ ರೂಪದಲ್ಲಿ ಯಾವುದಾದರೂ ಮೊಬಲಗನ್ನು ವಿಧಿಸಿದ್ದರೆ, ಅದನ್ನು ಠೇವಣಿ ಇಟ್ಟ ತರುವಾಯ, ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ನಲವತ್ತೈದು ದಿನಗಳ ಒಳಗೆ, ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಅಪೀಲುದಾರನು ಸಾಕಷ್ಟು ಕಾರಣದಿಂದ ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸುವುದಕ್ಕೆ ಅಡ್ಡಿಯುಂಟಾಗಿತ್ತೆಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದರೆ, ಸದರಿ ನಲವತ್ತೈದು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಯಾವುದೇ ಅಪೀಲನ್ನು ಅದು ಅಂಗೀಕರಿಸಬಹುದು.

(2) ಈ ಪ್ರಕರಣದ ಮೇರೆಗೆ ಸಲ್ಲಿಸಿದ ಅಪೀಲನ್ನು ಇಬ್ಬರು ನ್ಯಾಯಾಧೀಶರಿಗಿಂತ ಕಡಿಮೆಯಿಲ್ಲದ ಉಚ್ಚ ನ್ಯಾಯಾಲಯದ ನ್ಯಾಯಪೀಠವು ಮಾಡತಕ್ಕದ್ದು.

**77. ಪ್ರಾಸಿಕ್ಯೂಷನ್‌ಗಳಿಗೆ ಕಾಲಮಿತಿ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಅಪರಾಧವನ್ನು ಮಾಡಿದ ದಿನಾಂಕದಿಂದ ಒಂದು ವರ್ಷದ ಅವಧಿಯು ಮುಕ್ತಾಯವಾದ ತರುವಾಯ, ಈ ಅಧಿನಿಯಮದ ಮೇರೆಗೆ ಯಾವುದೇ ನ್ಯಾಯಾಲಯವು ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಆಹಾರ ಸುರಕ್ಷತಾ ಆಯುಕ್ತನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಮೂರು ವರ್ಷಗಳವರೆಗೆ ವಿಸ್ತರಿಸಿದ ಅವಧಿಯೊಳಗೆ ಪ್ರಾಸಿಕ್ಯೂಷನ್‌ಗೆ ಅನುಮೋದನೆ ನೀಡಬಹುದು.

**78. ತಯಾರಕ, ಮೊದಲಾದವರನ್ನು ಪಕ್ಷಕಾರರನ್ನಾಗಿ ಸೇರಿಸಲು ನ್ಯಾಯಾಲಯದ ಅಧಿಕಾರ.–** ಯಾವುದೇ ಆಹಾರ ಪದಾರ್ಥದ ಆಮದುದಾರ, ತಯಾರಕ, ವಿತರಕ ಅಥವಾ ವ್ಯಾಪಾರಿಯಲ್ಲದ, ಯಾರೇ ವ್ಯಕ್ತಿಯು ಮಾಡಿರುವನೆಂದು ಆಪಾದಿಸಲಾದ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡುವ ಯಾವುದೇ ಕಾಲದಲ್ಲಿ, ಅಂಥ ಆಮದುದಾರ, ತಯಾರಕ, ವಿತರಕ ಅಥವಾ ವ್ಯಾಪಾರಿಯು ಆ ಅಪರಾಧಕ್ಕೆ ಸಹ ಸಂಬಂಧಪಟ್ಟವರೆಂದು ಅದರ ಮುಂದೆ ಒದಗಿಸಿದ ಸಾಕ್ಷ್ಯದಿಂದ ನ್ಯಾಯಾಲಯಕ್ಕೆ ಮನದಟ್ಟಾದರೆ, ಆಗ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರಕರಣ 319ರ ಉಪಪ್ರಕರಣ (3)ರಲ್ಲಿ ಅಥವಾ ಈ ಅಧಿನಿಯಮದ ಪ್ರಕರಣ 71ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಷನ್‌ನನ್ನು ಹೂಡಿದ್ದಾಗ್ಯೂ ಅವರ ವಿರುದ್ಧ ನ್ಯಾಯಾಲಯವು ಕ್ರಮಕೈಗೊಳ್ಳಲು ಮುಂದುವರೆಯಬಹುದು.

**79. ಹೆಚ್ಚಿನ ಶಿಕ್ಷೆಯನ್ನು ವಿಧಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರಕರಣ 29ರಲ್ಲಿ ಏನೇ ಒಳಗೊಂಡಿದ್ದರೂ, ಸದರಿ ಪ್ರಕರಣದ ಮೇರೆಗೆ ತನಗೆ ಇರುವ ಅಧಿಕಾರಕ್ಕಿಂತ ಹೆಚ್ಚಿಗೆಯಾಗಿ ಆರು ವರ್ಷಗಳಿಗೆ ಮೀರಿದ ಅವಧಿಯ ಕಾರಾವಾಸ ಶಿಕ್ಷೆ ವಿಧಿಸುವುದನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರಗೆ ಅಧಿಕೃತಗೊಳಿಸಿದ ಯಾವುದೇ ಶಿಕ್ಷೆಯನ್ನು ವಿಧಿಸಿ ಆದೇಶ ಹೊರಡಿಸುವುದು ಸಾಮಾನ್ಯ ಅಧಿಕಾರವ್ಯಾಪ್ತಿ ಹೊಂದಿರುವ ನ್ಯಾಯಾಲಯಕ್ಕೆ ಕಾನೂನುಬದ್ಧವಾಗಿರತಕ್ಕದ್ದು.

**80. ಈ ಅಧಿನಿಯಮದ ಮೇರೆಗಿನ ಪ್ರಾಸಿಕ್ಯೂಷನ್‌ನಲ್ಲಿ ಅನುಮತಿಸಬಹುದಾದ ಅಥವಾ ಅನುಮತಿಸಲಾಗದ ಪ್ರತಿರಕ್ಷೆಗಳು.–** (ಎ) ಜಾಹೀರಾತುಗಳ ಪ್ರಕಟಣೆಗೆ ಸಂಬಂಧಪಟ್ಟ ಪ್ರತಿರಕ್ಷೆ,–

(1) ಜಾಹೀರಾತಿನ ಪ್ರಕಟಣೆಗೆ ಸಂಬಂಧಪಟ್ಟ ಈ ಅಧಿನಿಯಮದ ಮೇರೆಗಿನ ಅಪರಾಧದ ಬಗೆಗಿನ ಯಾವುದೇ ವ್ಯವಹರಣೆಯಲ್ಲಿ ವ್ಯಕ್ತಿಯು ಜಾಹೀರಾತುಗಳನ್ನು ಪ್ರಕಟಿಸುವ ಅಥವಾ ಜಾಹಿರಾತುಗಳ ಪ್ರಕಟಣೆಗೆ ವ್ಯವಸ್ಥೆ ಮಾಡುವ ವ್ಯಾಪಾರ ವ್ಯವಹಾರವನ್ನು ನಡೆಸುತ್ತಿರುವನೆಂದು ಮತ್ತು ಅಂಥ ವ್ಯಾಪಾರ ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಪ್ರಶ್ನಿತ ಜಾಹೀರಾತನ್ನು ಆ ವ್ಯಕ್ತಿಯು ಅದನ್ನು ಪ್ರಕಟಿಸಿದ್ದನೆಂದು ಅಥವಾ ಪ್ರಕಟಣೆಗೆ ವ್ಯವಸ್ಥೆ ಮಾಡಿದ್ದಾನೆಂದು ರುಜುವಾತುಪಡಿಸುವುದು ಆ ವ್ಯಕ್ತಿಗೆ ಪ್ರತಿರಕ್ಷೆಯಾಗುತ್ತದೆ.

(2) ಯಾರೇ ವ್ಯಕ್ತಿಯು,–

(ಎ) ಜಾಹೀರಾತಿನ ಪ್ರಕಟಣೆಯು ಅಪರಾಧವಾಗಿತ್ತೆಂದು ಯುಕ್ತ ತಿಳುವಳಿಕೆಯನ್ನು ಹೊಂದಿದ್ದವನಾಗಿದ್ದರೆ; ಅಥವಾ

(ಬಿ) ಅಂಥ ಜಾಹೀರಾತಿನ ಪ್ರಕಟಣೆಯು ಒಂದು ಅಪರಾಧವಾಗುವುದೆಂದು ಸಂಬಂಧಪಟ್ಟ ಪ್ರಾಧಿಕಾರವು ಲಿಖಿತದಲ್ಲಿ ಈ ಹಿಂದೆಯೇ ಆ ವ್ಯಕ್ತಿಗೆ ತಿಳಿಸಿದ್ದರೆ; ಅಥವಾ

(ಸಿ) ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಾಗಿದ್ದರೆ ಅಥವಾ ಯಾವ ಆಹಾರ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಜಾಹೀರಾತುಗಳನ್ನು ಪ್ರಕಟಿಸಲಾಗಿತ್ತೊ ಆ ಆಹಾರ ವ್ಯಾಪಾರ ವ್ಯವಹಾರವನ್ನು ನಡೆಸುವ ಕಾರ್ಯದಲ್ಲಿ ಅನ್ಯಥಾ ತೊಡಗಿದ್ದರೆ

– (1)ನೇ ಖಂಡವು ಅನ್ವಯವಾಗುವುದಿಲ್ಲ.

(ಬಿ) ಯುಕ್ತ ಜಾಗರೂಕತೆಯ ಪ್ರತಿರಕ್ಷೆ,–

(1) ಅಪರಾಧಕ್ಕೆ ಸಂಬಂಧಿಸಿದ ಯಾವುವೇ ವ್ಯವಹರಣೆಗಳಲ್ಲಿ, ಅಂಥ ವ್ಯಕ್ತಿಯು, ಅಥವಾ ಆ ವ್ಯಕ್ತಿಯ ನಿಯಂತ್ರಣದಲ್ಲಿ ಬರುವ ಬೇರೆ ವ್ಯಕ್ತಿಯು ಅಪರಾಧ ಆಗದಂತೆ ತಡೆಯಲು ಎಲ್ಲ ಯುಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಆ ವ್ಯಕ್ತಿಯು ತೆಗೆದುಕೊಂಡಿದ್ದನೆಂದು ಮತ್ತು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ರುಜುವಾತುಪಡಿಸಿದರೆ, ಅದು ಪ್ರತಿರಕ್ಷೆಯಾಗುತ್ತದೆ.

(2) ಖಂಡ (1)ರ ಅಗತ್ಯತೆಗಳನ್ನು ವ್ಯಕ್ತಿಯು ಯಾವ ರೀತಿಯಲ್ಲಿ ಪೂರೈಸಬಹುದೋ ಆ ರೀತಿಗಳಿಗಷ್ಟೇ ಸೀಮಿತಗೊಳಿಸಿಕೊಳ್ಳದೆ ಆ ವ್ಯಕ್ತಿಯು,–

(ಎ) ಆ ಅಪರಾಧವು,–

(i) ಬೇರೊಬ್ಬ ವ್ಯಕ್ತಿಯ ಕೃತ್ಯ ಅಥವಾ ತಪ್ಪಿನ ಕಾರಣದಿಂದ; ಅಥವಾ

(ii) ಬೇರೊಬ್ಬ ವ್ಯಕ್ತಿಯು ಒದಗಿಸಿದ ಮಾಹಿತಿಯನ್ನು ಆಧರಿಸಿದ ಕಾರಣದಿಂದ

– ಸಂಭವಿಸಿರುವುದೆಂದು; ಮತ್ತು

(ಬಿ) (i) ವ್ಯಕ್ತಿಯು ಸಂಬಂಧಪಟ್ಟ ಆಹಾರ ಬಗ್ಗೆ ಎಲ್ಲ ಸನ್ನಿವೇಶಗಳಲ್ಲಿ ಯುಕ್ತವಾದದ್ದೆಂದು ಪರಿಗಣಿಸಲಾದಂಥ ಎಲ್ಲಾ ತಪಾಸಣೆಗಳನ್ನು ಮಾಡಿದ್ದಾನೆಂದು; ಅಥವಾ

(ii) ವ್ಯಕ್ತಿಗೆ ಅಂಥ ಆಹಾರವನ್ನು ಯಾರು ಸರಬರಾಜು ಮಾಡಿದನೋ ಆ ವ್ಯಕ್ತಿಯು ಮಾಡಿದ ತಪಾಸಣೆಗಳನ್ನು ಅವಲಂಬಿಸುವುದು ಎಲ್ಲಾ ಸನ್ನಿವೇಶಗಳಲ್ಲಿ ಯುಕ್ತವಾದುದಾಗಿತ್ತೆಂದು; ಮತ್ತು

(ಸಿ) ವ್ಯಕ್ತಿಯು ಆಹಾರವನ್ನು ಬೇರೆ ದೇಶದಿಂದ ತನ್ನ ಅಧಿಕಾರವ್ಯಾಪ್ತಿಯಿರುವ ಪ್ರದೇಶಕ್ಕೆ ಆಮದು ಮಾಡಿಕೊಂಡಿರಲಿಲ್ಲವೆಂದು; ಮತ್ತು

(ಡಿ) ಆಹಾರದ ಮಾರಾಟವನ್ನು ಒಳಗೊಳ್ಳುವ ಅಪರಾಧದ ಸಂದರ್ಭದಲ್ಲಿ,–

(i) ವ್ಯಕ್ತಿಯು ಆಹಾರ ಪದಾರ್ಥವನ್ನು ಖರೀದಿಸಿದಾಗಲೆಲ್ಲಾ, ಅದು ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಅದನ್ನು ಅವನು ಮಾರಾಟ ಮಾಡಿರುವನೆಂದು; ಅಥವಾ

(ii) ವ್ಯಕ್ತಿಯು, ಆಹಾರ ಪದಾರ್ಥವನ್ನು ಖರೀದಿಸುವಾಗ ಯಾವ ಸ್ಥಿತಿಯಲ್ಲಿತ್ತೋ ಅದಕ್ಕಿಂತ ಭಿನ್ನವಾದ ಸ್ಥಿತಿಯಲ್ಲಿ ಅದನ್ನು ಅವನು ಮಾರಾಟ ಮಾಡಿದ್ದಾನೆಂದು ಆದರೆ ಆ ಭಿನ್ನತೆಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ವಿನಿಯಮಗಳ ಯಾವುದೇ ಉಲ್ಲಂಘನೆಗೆ ಕಾರಣವಾಗಿರುವುದಿಲ್ಲವೆಂದು; ಮತ್ತು

(ಇ) ವ್ಯಕ್ತಿಯ ಕೃತ್ಯ ಅಥವಾ ಲೋಪವು ಸಂಬಂಧಿಸಿದ ಪ್ರಕರಣದ ಮೇರೆಗೆ ಅಪರಾಧವಾಗುವುದೆಂದು ಆಪಾದಿಸಲಾದ ಅಪರಾಧವು ಸಂಭವಿಸುವ ಕಾಲದಲ್ಲಿ ವ್ಯಕ್ತಿಗೆ ತಿಳಿದಿರಲಿಲ್ಲವೆಂದು ಮತ್ತು ಸಂಶಯಪಡಲು ಕಾರಣವಿರಲಿಲ್ಲವೆಂದು

– ಸಾಬೀತಾದರೆ, ಅಂಥ ಅಗತ್ಯತೆಗಳನ್ನು ವ್ಯಕ್ತಿಯು ಪೂರೈಸಿದಂತಾಗುತ್ತದೆ.

(3) ಖಂಡ (2)ರ (ಎ) ಉಪ ಖಂಡದಲ್ಲಿ,–

(ಎ) ಪ್ರತಿವಾದಿಯ ನೌಕರ ಅಥವಾ ಏಜೆಂಟ್ ಆಗಿರುವ; ಅಥವಾ

(ಬಿ) ಪ್ರತಿವಾದಿಯು ಕಂಪನಿಯಾಗಿರುವ ಸಂದರ್ಭದಲ್ಲಿ ಆ ಕಂಪನಿಯ ನಿರ್ದೇಶಕ, ನೌಕರ ಅಥವಾ ಏಜೆಂಟ್ ಆಗಿರುವ

– ವ್ಯಕ್ತಿ ಎಂಬ ಪದದಲ್ಲಿ ಬೇರೊಬ್ಬ ವ್ಯಕ್ತಿಯು ಸೇರುವುದಿಲ್ಲ.

(4) ಖಂಡ (1)ರ ಮತ್ತು (2)ನೇ ಖಂಡದ (ಬಿ)ಉಪ ಖಂಡದ (i)ನೇ ಬಾಬಿನ ಅಗತ್ಯತೆಗಳನ್ನು ವ್ಯಕ್ತಿಯು ಯಾವ ರೀತಿಯಲ್ಲಿ ಪೂರೈಸಬಹುದೋ ಆ ರೀತಿಗಳಿಗಷ್ಟೇ ಸೀಮಿತಗೊಳಿಸಿಕೊಳ್ಳದೆ, ಆ ವ್ಯಕ್ತಿಯು ಆ ಅಗತ್ಯತೆಗಳನ್ನು,–

(ಎ) ಯಾವ ಆಹಾರ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದಂತೆ ವಿನಿಯಮಗಳಿಗೆ ಅನುಸಾರವಾಗಿ ಆಹಾರ ಸುರಕ್ಷತಾ ಕಾರ್ಯಕ್ರಮವನ್ನು ಸಿದ್ಧಪಡಿಸುವುದು ಅಗತ್ಯವಿದೆಯೋ ಆ ಆಹಾರ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದ ಅಪರಾಧದ ಸಂದರ್ಭದಲ್ಲಿ, ವ್ಯಕ್ತಿಯು, ವಿನಿಯಮಗಳ ಅಗತ್ಯತೆಗಳನ್ನು ಪಾಲಿಸುವಂಥ ಆಹಾರ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದ ಆಹಾರ ಸುರಕ್ಷತಾ ಕಾರ್ಯಕ್ರಮವನ್ನು ಪಾಲಿಸಿದ್ದಾನೆಂದು; ಅಥವಾ

(ಬಿ) ಇತರ ಯಾವುದೇ ಸಂದರ್ಭದಲ್ಲಿ, ವ್ಯಕ್ತಿಯು,–

(i) ಆಹಾರ ಸುರಕ್ಷತಾ ಅಪಾಯಗಳನ್ನು ನಿಭಾಯಿಸಲು ರೂಪಿಸಿರುವ ಮತ್ತು ಆ ಉದ್ದೇಶಕ್ಕಾಗಿ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಾನಕಗಳನ್ನು, ಸಂಹಿತೆಗಳನ್ನು, ಅಥವಾ ಮಾರ್ಗದರ್ಶಿ ಸೂತ್ರಗಳನ್ನು ಆಧರಿಸಿರುವ; ಮತ್ತು

(ii) ಯಾವುದಾದರೊಂದು ರೀತಿಯಲ್ಲಿ ದಾಖಲು ಮಾಡಿಟ್ಟಿರುವ – ಯೋಜನೆಯನ್ನು (ಉದಾಹರಣೆಗೆ, ಗುಣಮಟ್ಟ ಖಾತ್ರಿ ಕಾರ್ಯಕ್ರಮ ಅಥವಾ ವ್ಯವಹಾರ ಉದ್ಯಮ ಪದ್ಧತಿ ಸಂಹಿತೆ) ಪಾಲಿಸಿದ್ದಾನೆಂದು ರುಜುವಾತುಪಡಿಸುವ ಮೂಲಕ ಆ ಅಗತ್ಯತೆಗಳನ್ನು ಪೂರೈಸಬಹುದು;

(ಸಿ) ತಪ್ಪುಗ್ರಹಿಕೆ ಮತ್ತು ಯುಕ್ತ ನಂಬಿಕೆಯ ಪ್ರತಿರಕ್ಷೆಯು ದೊರೆಯದಿರುವುದು,–

ಈ ಅಧಿನಿಯಮದ ಉಪಬಂಧಗಳ ಮೇರೆಗಿನ ಅಪರಾಧದ ಯಾವುವೇ ವ್ಯವಹರಣೆಗಳಲ್ಲಿ, ಪ್ರತಿವಾದಿಯು ತಪ್ಪುಗ್ರಹಿಕೆ ಹೊಂದಿದ್ದು ಆದರೆ ಅಪರಾಧ ಘಟಿಸುವುದಕ್ಕೆ ಕಾರಣವಾದ ಸಂಗತಿಗಳ ಬಗ್ಗೆ ಅವನು ಯುಕ್ತ ನಂಬಿಕೆಯನ್ನು ಹೊಂದಿದ್ದ ಎಂಬುದು ಪ್ರತಿರಕ್ಷೆಯಾಗುವುದಿಲ್ಲ;

(ಡಿ) ಆಹಾರ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತಿರಕ್ಷೆ.–

ಪ್ರಕರಣ 56ರ ಮೇರೆಗಿನ ಅಪರಾಧದ ವ್ಯವಹರಣೆಗಳಲ್ಲಿ ವ್ಯಕ್ತಿಯು, ಅಪರಾಧವು ಯಾವ ಆಹಾರಕ್ಕೆ ಸಂಬಂಧಿಸಿದೆಯೋ ಆ ಆಹಾರವನ್ನು ನಾಶ ಮಾಡಿಸಿದ್ದಾನೆಂದು ಅಥವಾ ಆಹಾರವು ಅಸುರಕ್ಷಿತವಾಗಬಹುದಾದಂಥ ರೀತಿಯಲ್ಲಿ ಅದನ್ನು ನಿರ್ವಹಿಸಿದ ಕೂಡಲೇ ಬೇರೆ ರೀತಿಯಲ್ಲಿ ವಿಲೇ ಮಾಡಿದ್ದಾನೆಂದು ರುಜುವಾತುಪಡಿಸಿದರೆ ಅದು ಪ್ರತಿರಕ್ಷೆಯಾಗುತ್ತದೆ;

(ಇ) ಆಹಾರದ ಸ್ವರೂಪ, ಸತ್ವ ಅಥವಾ ಗುಣಮಟ್ಟದ ಪ್ರಾಮುಖ್ಯತೆಯ ಪ್ರತಿರಕ್ಷೆಗಳು – ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕನಿಗೆ, ಅವನು ಮಾರಾಟ ಮಾಡಿದ ಆಹಾರದ ಸ್ವರೂಪ, ಸತ್ವ ಅಥವಾ ಗುಣಮಟ್ಟದ ಬಗ್ಗೆ ತಿಳುವಳಿಕೆ ಇರಲಿಲ್ಲವೆಂದು ಅಥವಾ ಯಾವುದೇ ಆಹಾರ ಪದಾರ್ಥವನ್ನು ವಿಶ್ಲೇಷಣೆಗಾಗಿ ಖರೀದಿಸಿದ ಖರೀದಿದಾರನಿಗೆ ಆ ಮಾರಾಟದಿಂದ ಯಾವುದೇ ತೊಂದರೆಯಾಗಿರಲಿಲ್ಲವೆಂದು ಮಾತ್ರವೇ ಆರೋಪಿಸುವುದು ಸುರಕ್ಷಿತವಲ್ಲದ ಅಥವಾ ತಪ್ಪಾಗಿ ಗುರುತು ಹಾಕಿದ ಆಹಾರ ಪದಾರ್ಥದ ಮಾರಾಟಕ್ಕೆ ಸಂಬಂಧಿಸಿದ ಅಪರಾಧದ ಬಗೆಗಿನ ಪ್ರಾಸಿಕ್ಯೂಷನ್‌ನಲ್ಲಿ ಪ್ರತಿರಕ್ಷೆಯಾಗತಕ್ಕದ್ದಲ್ಲ.

## ಅಧ್ಯಾಯ XI

## ಹಣಕಾಸು, ಲೆಕ್ಕಪತ್ರಗಳು, ಲೆಕ್ಕಪರಿಶೋಧನೆ ಮತ್ತು ವರದಿಗಳು

**81. ಆಹಾರ ಪ್ರಾಧಿಕಾರದ ಆಯವ್ಯಯ ಪತ್ರ.–** (1) ಆಹಾರ ಪ್ರಾಧಿಕಾರವು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ, ಪ್ರತಿ ಹಣಕಾಸಿನ ವರ್ಷದಲ್ಲಿ ಆಹಾರ ಪ್ರಾಧಿಕಾರದ ಅಂದಾಜು ಜಮೆಗಳನ್ನು ಮತ್ತು ವೆಚ್ಚಗಳನ್ನು ತೋರಿಸುವ, ಮುಂದಿನ ಹಣಕಾಸು ವರ್ಷದ ತನ್ನ ಆಯವ್ಯಯ ಪತ್ರವನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2) ಆಹಾರ ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ಪ್ರಾಧಿಕಾರದ ಆಯವ್ಯಯವನ್ನು ಕ್ರಮಬದ್ಧವಾಗಿ ಸಿದ್ಧಪಡಿಸುವುದಕ್ಕಾಗಿ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ಯಾವ ಹಣಕಾಸು ವಿನಿಯಮವು ವಿಶೇಷವಾಗಿ ಕಾರ್ಯ ವಿಧಾನವನ್ನು ನಿರ್ದಿಷ್ಟಪಡಿಸುತ್ತಿದ್ದೋ ಆ ಹಣಕಾಸು ವಿನಿಯಮವನ್ನು ಅಳವಡಿಸಿಕೊಳ್ಳತಕ್ಕದ್ದು.

**82. ಆಹಾರ ಪ್ರಾಧಿಕಾರದ ಹಣಕಾಸು.–** (1) ಕೇಂದ್ರ ಸರ್ಕಾರವು, ಸೂಕ್ತ ಹಂಚಿಕೆಯ ತರುವಾಯ, ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತಗಳ ಅನುದಾನಗಳನ್ನು ಆಹಾರ ಪ್ರಾಧಿಕಾರಕ್ಕೆ ಮಂಜೂರು ಮಾಡಬಹುದು.

(2) ಕೇಂದ್ರ ಸಲಹಾ ಸಮಿತಿಯ ಶಿಫಾರಸ್ಸಿನ ಮೇಲೆ ಆಹಾರ ಪ್ರಾಧಿಕಾರವು, ಲೈಸೆನ್ಸ್ ಹೊಂದಿದ ಆಹಾರ ವ್ಯಾಪಾರ ವ್ಯವಹಾರ ಪ್ರವರ್ತಕರಿಗೆ, ಮಾನ್ಯತೆ ಪಡೆದ ಪ್ರಯೋಗಾಲಯಗಳಿಗೆ ಅಥವಾ ಆಹಾರ ಸುರಕ್ಷತಾ ಲೆಕ್ಕಪರಿಶೋಧಕರಿಗೆ ಆಹಾರ ಸುರಕ್ಷತಾ ಆಯುಕ್ತರು ವಿಧಿಸಬೇಕಾದ ಶ್ರೇಣಿಕೃತ ಶುಲ್ಕವನ್ನು ನಿರ್ದಿಷ್ಟಪಡಿಸತಕ್ಕದ್ದು.

**83. ಆಹಾರ ಪ್ರಾಧಿಕಾರದ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಆಹಾರ ಪ್ರಾಧಿಕಾರವು ಭಾರತದ ಲೆಕ್ಕನಿಯಂತ್ರಕ – ಹಾಗೂ – ಮಹಾ ಲೆಕ್ಕಪರಿಶೋಧಕರೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿಯಮಿಸಬಹುದಾಂಥ ನಮೂನೆಯಲ್ಲಿ ಸಮರ್ಪಕ ಲೆಕ್ಕಪತ್ರಗಳನ್ನು ಮತ್ತು ಸುಸಂಗತ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರ ಪಟ್ಟಿಕೆಯನ್ನು ಸಿದ್ಧಪಡಿಸತಕ್ಕದ್ದು.

(2) ಲೆಕ್ಕ ನಿಯಂತ್ರಕ – ಹಾಗೂ – ಮಹಾ ಲೆಕ್ಕ ಪರಿಶೋಧಕನು ಮತ್ತು ಈ ಅಧಿನಿಯಮದ ಮೇರೆಗೆ ಆಹಾರ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಅವನು ನೇಮಕ ಮಾಡಿದ ಯಾರೇ ವ್ಯಕ್ತಿಯು ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ನಿಯಂತ್ರಕರು ಹಾಗೂ ಮಹಾ ಲೆಕ್ಕಪರಿಶೋಧಕರು ಹೊಂದಿರುವಂತಹವುವೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು ಸಂಬಂಧಪಟ್ಟ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯಿಸಲು ಮತ್ತು ಆಹಾರ ಪ್ರಾಧಿಕಾರದ ಯಾವುವೇ ಕಚೇರಿಗಳನ್ನು ತಪಾಸಣೆ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು.

(3) ಭಾರತದ ಲೆಕ್ಕನಿಯಂತ್ರಕ – ಹಾಗೂ – ಮಹಾ ಲೆಕ್ಕ ಪರಿಶೋಧಕನು ಅಥವಾ ಈ ಬಗ್ಗೆ ಅವನು ನೇಮಕ ಮಾಡಿದ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದಂಥ, ಆಹಾರ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಆಹಾರ ಪ್ರಾಧಿಕಾರವು ಪ್ರತಿ ವರ್ಷವು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಲೆಕ್ಕ ಪರಿಶೋಧನಾ ವರದಿಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡಿಸತಕ್ಕದ್ದು.

**84. ಆಹಾರ ಪ್ರಾಧಿಕಾರದ ವಾರ್ಷಿಕ ವರದಿ.–** (1) ಆಹಾರ ಪ್ರಾಧಿಕಾರವು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಕಾಲಗಳಲ್ಲಿ, ಪ್ರತಿ ವರ್ಷದಲ್ಲಿ ಒಂದು ಬಾರಿ ಹಿಂದಿನ ವರ್ಷದ ಅದರ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ವರದಿಯ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ ಕಳುಹಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಸ್ವೀಕರಿಸಿದ ವರದಿಯ ಪ್ರತಿಯನ್ನು, ಅದನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡಿಸತಕ್ಕದ್ದು.

## ಅಧ್ಯಾಯ XII

### ಸಂಕೀರ್ಣ

**85. ಆಹಾರ ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡಲು ಮತ್ತು ವರದಿಗಳನ್ನು ಮತ್ತು ವಿವರಪಟ್ಟಿಕೆಗಳನ್ನು ಪಡೆದುಕೊಳ್ಳಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಮೇಲೆ ಹೇಳಿದ, ಉಪಬಂಧಗಳಿಗೆ ಬಾಧಕವಾಗದಂತೆ, ಆಹಾರ ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ಅದರ ಅಧಿಕಾರಗಳನ್ನು ಚಲಾಯಿಸುವಾಗ ಮತ್ತು

ಪ್ರಕಾರ್ಯಗಳನ್ನು ನೆರವೇರಿಸುವಾಗ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದವುಗಳನ್ನು ಹೊರತುಪಡಿಸಿ, ಕಾರ್ಯನೀತಿಯ ಪ್ರಶ್ನೆಗಳ ಮೇಲೆ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಲಿಖಿತದಲ್ಲಿ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮುಂಚೆ, ಆಹಾರ ಪ್ರಾಧಿಕಾರಕ್ಕೆ, ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಅದರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ನೀಡತಕ್ಕದ್ದು.

(2) ಕೇಂದ್ರ ಸರ್ಕಾರ ಮತ್ತು ಆಹಾರ ಪ್ರಾಧಿಕಾರದ ನಡುವೆ ಪ್ರಶ್ನೆಯು ಕಾರ್ಯನೀತಿಯ ಪ್ರಶ್ನೆಯೇ ಅಥವಾ ಅಲ್ಲವೇ ಎಂಬ ಬಗ್ಗೆ ಯಾವುದೇ ವಿವಾದ ಉದ್ಭವಿಸಿದರೆ, ಆ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಕೋರಬಹುದಾದಂತೆ ಆಹಾರ ಪ್ರಾಧಿಕಾರವು, ತನ್ನ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂಥ ವಿವರಪಟ್ಟಿಕೆಗಳನ್ನು ಅಥವಾ ಇತರ ಮಾಹಿತಿಯನ್ನು ಅದು ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

86. **ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರವು, ಅದು ಅವಶ್ಯಕವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ರಾಜ್ಯ ಸರ್ಕಾರಕ್ಕೆ ನೀಡಬಹುದು ಮತ್ತು ರಾಜ್ಯ ಸರ್ಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

87. **ಆಹಾರ ಪ್ರಾಧಿಕಾರದ ಸದಸ್ಯರು, ಅಧಿಕಾರಿಗಳು ಮತ್ತು ಆಹಾರ ಸುರಕ್ಷತಾ ಆಯುಕ್ತರು ಲೋಕ ನೌಕರರಾಗಿರುವುದು.–** ಆಹಾರ ಪ್ರಾಧಿಕಾರದ ಸದಸ್ಯರು, ಅಧಿಕಾರಿಗಳು ಮತ್ತು ಆಹಾರ ಸುರಕ್ಷತಾ ಆಯುಕ್ತರು ಮತ್ತು ಅವರ ಅಧಿಕಾರಿಗಳು ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸಾರವಾಗಿ ಕಾರ್ಯನಿರ್ವಹಿಸುವಾಗ ಅಥವಾ ಕಾರ್ಯನಿರ್ವಹಿಸುವರೆಂದು ತಾತ್ಪರ್ಯವಾಗುವಾಗ, ಅವರನ್ನು ಭಾರತ ದಂಡ ಸಂಹಿತೆ (1860ರ 45) ಯ ಪ್ರಕರಣ 21ರ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

88. **ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಆಹಾರ ಪ್ರಾಧಿಕಾರದ ಮತ್ತು ಈ ಅಧಿನಿಯಮದ ಮೇರೆಗೆ ರಚಿಸಲಾದ ಇತರ ನಿಕಾಯಗಳ ಅಥವಾ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ಅಥವಾ ಅಂಥ ಪ್ರಾಧಿಕಾರದ ಯಾರೇ ಸದಸ್ಯನ, ಅಧಿಕಾರಿಯ ಅಥವಾ ಇತರ ನೌಕರನ ಮತ್ತು ಈ ಅಧಿನಿಯಮದ ಮೇರೆಗೆ, ಕಾರ್ಯನಿರ್ವಹಿಸುವ ನಿಕಾಯಗಳ ಅಥವಾ ಯಾರೇ ಇತರ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್‌ಅನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

89. **ಇತರ ಎಲ್ಲಾ ಆಹಾರಕ್ಕೆ ಸಂಬಂಧಿಸಿದ ಕಾನೂನುಗಳ ಮೇಲೆ ಈ ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಈ

ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಕಾನೂನಿನ ಬಲದಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ಲಿಖಿತಪತ್ರದಲ್ಲಿ, ಅದಕ್ಕೆ ಅಸಂಗತವಾಗಿರುವುದು ಏನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**90. ವಿವಿಧ ಆಹಾರ ಸಂಬಂಧಿತ ಅಧಿನಿಯಮಗಳನ್ನು ಅಥವಾ ಆದೇಶಗಳನ್ನು ಕಾರ್ಯಗತಗೊಳಿಸುವ ಕೇಂದ್ರ ಸರ್ಕಾರಿ ಏಜೆನ್ಸಿಗಳಲ್ಲಿ ಈಗಿರುವ ನೌಕರರನ್ನು ಆಹಾರ ಪ್ರಾಧಿಕಾರಕ್ಕೆ ವರ್ಗಾಯಿಸುವುದು.–** ಆಹಾರ ಪ್ರಾಧಿಕಾರವು ಸ್ಥಾಪನೆಯಾದ ದಿನಾಂಕದಂದು ಮತ್ತು ದಿನಾಂಕದಿಂದ, ಆ ದಿನಾಂಕದ ನಿಕಟಪೂರ್ವದಲ್ಲಿ ಆಹಾರ ಕಾನೂನುಗಳನ್ನು ಜಾರಿಗೊಳಿಸುವ ಕೇಂದ್ರ ಸರ್ಕಾರಿ ಏಜೆನ್ಸಿಗಳ ಅಧೀನದಲ್ಲಿ ಪದಧಾರಣ ಮಾಡಿರುವ ಪ್ರತಿಯೊಬ್ಬ ನೌಕರನು, ಆಹಾರ ಪ್ರಾಧಿಕಾರವು ಸ್ಥಾಪನೆಯಾಗಿರದಿದ್ದರೆ ಅಂಥ ಪದವನ್ನು ಅವನು ಧಾರಣ ಮಾಡಿದಿದ್ದರೆ ಹೇಗೋ ಹಾಗೆ ಅದೇ ಅವಧಿಗೆ ಮತ್ತು ಪರಿಶ್ರಮಧನ, ರಜೆ, ಭವಿಷ್ಯ ನಿಧಿ, ನಿವೃತ್ತಿ ಮತ್ತು ಇತರ ಸೇವಾಂತ್ಯ ಲಾಭಗಳು ಒಳಗೊಂಡಂತೆ ಅವೇ ಸೇವಾ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಆಹಾರ ಪ್ರಾಧಿಕಾರದಲ್ಲಿ ತನ್ನ ಪದವನ್ನು ಧಾರಣ ಮಾಡತಕ್ಕದ್ದು ಮತ್ತು ಆಹಾರ ಪ್ರಾಧಿಕಾರದ ನೌಕರನಾಗಿ ಅಥವಾ ಅಂಥ ನೌಕರನು ಆಹಾರ ಪ್ರಾಧಿಕಾರದ ನೌಕರನಾಗಿರಲು ಆಯ್ಕೆ ಮಾಡಿಕೊಳ್ಳದಿದ್ದರೆ ಆ ದಿನಾಂಕದಿಂದ ಆರು ತಿಂಗಳ ಅವಧಿಯು ಮುಕ್ತಾಯವಾಗುವವರೆಗೆ ಹಾಗೆ ಪದಧಾರಣ ಮಾಡಿರುವುದು ಮುಂದುವರೆಯತಕ್ಕದ್ದು.

**91. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಗಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:–

(ಎ) ಪ್ರಕರಣ 7ರ, ಉಪಪ್ರಕರಣ (2)ರ ಮೇರೆಗೆ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಅಧ್ಯಕ್ಷ ಮತ್ತು ಸದಸ್ಯರ ಸಂಬಳ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಉಪಪ್ರಕರಣ (3)ರ ಮೇರೆಗೆ ಪದದ ಮತ್ತು ಗೌಪ್ಯತೆಯ ಪ್ರಮಾಣ ವಚನಕ್ಕೆ ಸಹಿ ಮಾಡುವ ರೀತಿ;

(ಬಿ) ಪ್ರಕರಣ 37ರ ಉಪಪ್ರಕರಣ (1)ರ ಮೇರೆಗೆ ಆಹಾರ ಸುರಕ್ಷತಾ ಅಧಿಕಾರಿಯ ಅರ್ಹತೆಗಳು;

(ಸಿ) ಪ್ರಕರಣ 38ರ ಉಪ ಖಂಡ (8)ರ ಮೇರೆಗೆ ವಶಪಡಿಸಿಕೊಂಡ ದಸ್ತಾವೇಜುಗಳ ಉದ್ಧೃತ ಭಾಗವನ್ನು ತೆಗೆದುಕೊಳ್ಳುವ ರೀತಿ;

(ಡಿ) ಪ್ರಕರಣ 42ರ ಉಪಪ್ರಕರಣ (4)ರ ಮೇರೆಗೆ ಯುಕ್ತ ನ್ಯಾಯಾಲಯಗಳಿಗೆ ಒಪ್ಪಿಸುವುದಕ್ಕಾಗಿ ಪ್ರಕರಣಗಳನ್ನು ನಿರ್ಧರಿಸುವುದು ಮತ್ತು ಅಂಥ ನಿರ್ಧಾರಕ್ಕಾಗಿ ಕಾಲಮಿತಿ;

(ಇ) ಪ್ರಕರಣ 45ರ ಮೇರೆಗೆ ಆಹಾರ ವಿಶ್ಲೇಷಕರ ಅರ್ಹತೆಗಳು;

(ಎಫ್) ಪ್ರಕರಣ 47ರ ಉಪಪ್ರಕರಣ (1)ರ ಮೇರೆಗೆ ವಿಶ್ಲೇಷಣೆಗಾಗಿ ಮಾದರಿಯನ್ನು ಕಳುಹಿಸುವ ರೀತಿ ಮತ್ತು ಇದಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕಾರ್ಯವಿಧಾನದ ವಿವರಗಳು;

(ಜಿ) ಪ್ರಕರಣ 68ರ ಉಪಪ್ರಕರಣ (1)ರ ಮೇರೆಗೆ ಪ್ರಕರಣಗಳ ನ್ಯಾಯ ನಿರ್ಣಯಕ್ಕಾಗಿ ಅನುಸರಿಸಬೇಕಾದ ಕಾರ್ಯ ವಿಧಾನ;

(ಹೆಚ್) ಪ್ರಕರಣ 70ರ ಉಪಪ್ರಕರಣ (4)ರ ಮೇರೆಗೆ ಪೀಠಾಸೀನ ಅಧಿಕಾರಿಯ ಅರ್ಹತೆಗಳು, ಪದಾವಧಿ, ರಾಜೀನಾಮೆ, ಅವನನ್ನು ಪದದಿಂದ ತೆಗೆದುಹಾಕುವುದು ಮತ್ತು ಉಪಪ್ರಕರಣ (5)ರ ಮೇರೆಗೆ ಅಪೀಲಿನ ಕಾರ್ಯವಿಧಾನ ಮತ್ತು ನ್ಯಾಯಾಧಿಕರಣದ ಅಧಿಕಾರಗಳು;

(ಐ) ಪ್ರಕರಣ 71ರ ಉಪಪ್ರಕರಣ (2)ರ (ಜಿ)ಖಂಡದ ಮೇರೆಗೆ ನ್ಯಾಯಾಧಿಕರಣದ ಕಾರ್ಯವಿಧಾನ ಮತ್ತು ಅಧಿಕಾರಗಳಿಗೆ ಸಂಬಂಧಿಸಿದ ಇತರ ಯಾವುದೇ ವಿಷಯ;

(ಜೆ) ಪ್ರಕರಣ 76ರ ಉಪಪ್ರಕರಣ (1)ರ ಮೇರೆಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸುವುದಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕ;

(ಕೆ) ಪ್ರಕರಣ 81ರ ಉಪಪ್ರಕರಣ (1)ರ ಮೇರೆಗೆ ಆಯವ್ಯಯ ಪತ್ರವನ್ನು ಸಿದ್ಧಪಡಿಸುವ ನಮೂನೆ ಮತ್ತು ಕಾಲ;

(ಎಲ್) ಪ್ರಕರಣ 83ರ ಉಪಪ್ರಕರಣ (1)ರ ಮೇರೆಗೆ ಲೆಕ್ಕಪತ್ರಗಳ ನಮೂನೆ ಮತ್ತು ಲೆಕ್ಕಪತ್ರಗಳ ವಿವರಪತ್ರ;

(ಎಂ) ಪ್ರಕರಣ 84ರ ಉಪಪ್ರಕರಣ (1)ರ ಮೇರೆಗೆ ಆಹಾರ ಪ್ರಾಧಿಕಾರವು ವಾರ್ಷಿಕ ವರದಿಯನ್ನು ಸಿದ್ಧಪಡಿಸುವ ನಮೂನೆ ಮತ್ತು ಕಾಲ; ಮತ್ತು

(ಎನ್) ಕೇಂದ್ರ ಸರ್ಕಾರವು, ನಿಯಮಗಳ ಮೂಲಕ ಯಾವ ವಿಷಯವನ್ನು ನಿಯಮಿಸಬೇಕೋ ಅಥವಾ ನಿಯಮಿಸಬಹುದೋ ಅಥವಾ ಯಾವ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಬೇಕೋ ಆ ಯಾವುದೇ ಇತರ ವಿಷಯ.

**92. ವಿನಿಯಮಗಳನ್ನು ರಚಿಸಲು ಆಹಾರ ಪ್ರಾಧಿಕಾರದ ಅಧಿಕಾರ.–** (1) ಆಹಾರ ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಪಡೆದು ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸುಸಂಗತವಾಗುವಂಥ ವಿನಿಯಮಗಳನ್ನು ಅಧಿಸೂಚನೆ ಮೂಲಕ ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮಗಳಲ್ಲಿ ಈ ಕೆಳಗಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) ಪ್ರಕರಣ 9ರ ಉಪಪ್ರಕರಣ (3)ರ ಮೇರೆಗೆ ಆಹಾರ ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳಗಳು ಮತ್ತು ಇತರ ಸೇವಾ ಷರತ್ತುಗಳು;

(ಬಿ) ಪ್ರಕರಣ 11ರ ಉಪಪ್ರಕರಣ (5)ರ ಮೇರೆಗೆ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ಕಾರ್ಯ ವಿಧಾನ ನಿಯಮಗಳು;

(ಸಿ) ಪ್ರಕರಣ 12ರ ಉಪಪ್ರಕರಣ (2)ರ ಮೇರೆಗೆ ಕೇಂದ್ರ ಸಲಹಾ ಸಮಿತಿಯ ಇತರ ಪ್ರಕಾರ್ಯಗಳು;

(ಡಿ) ಪ್ರಕರಣ 15ರ ಉಪಪ್ರಕರಣ (4)ರ ಮೇರೆಗೆ ವೈಜ್ಞಾನಿಕ ಸಮಿತಿಯ ಮತ್ತು ತಂಡಗಳ ಕಾರ್ಯವಿಧಾನ;

(ಇ) ಪ್ರಕರಣ 16ರ ಉಪಪ್ರಕರಣ (2)ರ ಮೇರೆಗೆ ಮಾನವ ಸೇವನೆಗಾಗಿಯೇ ಇಟ್ಟಿರುವ ಆಹಾರ ಪದಾರ್ಥಗಳಿಗೆ ಸಂಬಂಧಪಟ್ಟಂತೆ ಗುಣಮಟ್ಟಗಳನ್ನು ಮತ್ತು ಮಾರ್ಗಸೂಚಿಗಳನ್ನು ಅಧಿಸೂಚಿಸುವುದು;

(ಎಫ್) ಪ್ರಕರಣ 17ರ ಉಪಪ್ರಕರಣ (1)ರ ಮೇರೆಗೆ ಆಹಾರ ಪ್ರಾಧಿಕಾರವು, ಅದರ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ಅನುಸರಿಸಬೇಕಾದ ಕಾರ್ಯವಿಧಾನ;

(ಜಿ) ಪ್ರಕರಣ 18ರ ಉಪಪ್ರಕರಣ (2)ರ (ಡಿ)ಖಂಡದ ಮೇರೆಗೆ ಆಹಾರ ಸುರಕ್ಷತೆ ಅಥವಾ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ತುರ್ತಿನ ದೃಷ್ಟಿಯಿಂದ ವಿನಿಯಮಗಳನ್ನು ರಚಿಸುವುದು ಅಥವಾ ತಿದ್ದುಪಡಿ ಮಾಡುವುದು.

(ಹೆಚ್) ಪ್ರಕರಣ 19ರ ಮೇರೆಗೆ ಆಹಾರ ಸಂಯೋಜಕಗಳ ಮಿತಿಗಳು;

(ಐ) ಪ್ರಕರಣ 20ರ ಮೇರೆಗೆ ಮಾಲಿನ್ಯಕಾರಕಗಳ, ವಿಷ ಪದಾರ್ಥದ ಮತ್ತು ಭಾರ ಲೋಹ, ಇತ್ಯಾದಿಗಳ ಪ್ರಮಾಣ ಮಿತಿಗಳು;

(ಜೆ) ಪ್ರಕರಣ 21ರ ಮೇರೆಗೆ ಕ್ರಿಮಿನಾಶಕಗಳು, ಪಶುವೈದ್ಯಕೀಯ ಔಷಧಗಳ ಉಳಿಕೆ, ಇತ್ಯಾದಿಗಳ ತಾಳಿಕೆಯ ಮಿತಿಗಳು;

(ಕೆ) ಪ್ರಕರಣ 23ರ ಮೇರೆಗೆ ಆಹಾರಗಳಿಗೆ ಗುರುತು ಮಾಡುವ ಮತ್ತು ಲೇಬಲ್ ಹಚ್ಚುವ ರೀತಿ;

(ಎಲ್) ಪ್ರಕರಣ 26ರ ಉಪಪ್ರಕರಣ (4)ರ ಮೇರೆಗೆ ಖಾತರಿಯನ್ನು ಯಾವ ನಮೂನೆಯಲ್ಲಿ ನೀಡಬೇಕೋ ಆ ನಮೂನೆ;

(ಎಂ) ಪ್ರಕರಣ 28ರ ಉಪಪ್ರಕರಣ (4)ರ ಮೇರೆಗೆ ಆಹಾರವನ್ನು ಹಿಂತೆಗೆದುಕೊಳ್ಳುವ ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ಷರತ್ತುಗಳು ಮತ್ತು ಮಾರ್ಗಸೂಚಿಗಳು;

(ಎನ್) ಪ್ರಕರಣ 29ರ ಉಪಪ್ರಕರಣ (5)ರ ಮೇರೆಗೆ ಆಹಾರ ಸುರಕ್ಷತಾ ಅಧಿಕಾರಿಯ ಕಾರ್ಯನಿರ್ವಹಣೆಗೆ ಸಂಬಂಧಪಟ್ಟ ವಿನಿಯಮಗಳು;

(ಒ) ನೋಂದಣಿ ಪ್ರಾಧಿಕಾರವನ್ನು ಅಧಿಸೂಚಿಸುವುದು ಮತ್ತು ನೋಂದಣಿಯ ರೀತಿ, ಲೈಸೆನ್ಸ್ ಪಡೆಯುವುದಕ್ಕಾಗಿ ಅರ್ಜಿಯನ್ನು ಸಲ್ಲಿಸುವ ರೀತಿ, ಅದಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕಗಳು ಮತ್ತು ಪ್ರಕರಣ 31ರ ಮೇರೆಗೆ ಯಾವ ಸಂದರ್ಭಗಳಲ್ಲಿ ಅಂಥ ಲೈಸೆನ್ಸನ್ನು ರದ್ದುಪಡಿಸಬಹುದೋ ಅಥವಾ ಮುಟ್ಟುಗೋಲು ಹಾಕಿಕೊಳ್ಳಬಹುದೋ ಆ ಸಂದರ್ಭಗಳು;

(ಪಿ) ಪ್ರಕರಣ 36ರ ಉಪಪ್ರಕರಣ (1)ರ ಮೇರೆಗೆ ಯಾವ ಯಾವ ಪ್ರದೇಶಗಳಲ್ಲಿ, ಗೊತ್ತುಪಡಿಸಿದ ಅಧಿಕಾರಿಯು ಆಹಾರ ಸುರಕ್ಷತಾ ನಿರ್ವಹಣೆಯ ಪ್ರಭಾರದಲ್ಲಿರಬೇಕೋ ಆಯಯಾ ಪ್ರದೇಶಗಳು;

(ಕ್ಯೂ) ಪ್ರಕರಣ 40ರ ಉಪಪ್ರಕರಣ (1)ರ ಮೇರೆಗೆ ಆಹಾರ, ವಿಶ್ಲೇಷಣೆ ಮಾಡಿಸಿ ಕೊಳ್ಳುವ ಕಾರ್ಯ ವಿಧಾನ, ಶುಲ್ಕಗಳು ಇತ್ಯಾದಿಗಳ ವಿವರ;

(ಆರ್) ಪ್ರಕರಣ 43ರ ಉಪಪ್ರಕರಣ (3)ರ ಮೇರೆಗೆ ಆಹಾರ ಪ್ರಯೋಗಾಲಯಗಳ ಪ್ರಕಾರ್ಯಗಳು ಅನುಸರಿಸಬೇಕಾದ  ಕಾರ್ಯವಿಧಾನ.

(ಎಸ್) ಪ್ರಕರಣ 47ರ ಉಪಪ್ರಕರಣ (6)ರ ಮೇರೆಗೆ ಅಧಿಕಾರಿಗಳು ಅನುಸರಿಸಬೇಕಾದ ಕಾರ್ಯವಿಧಾನ;

(ಟಿ) ಪ್ರಕರಣ 81ರ ಉಪಪ್ರಕರಣ (2)ರ ಮೇರೆಗೆ ಆಹಾರ ಪ್ರಾಧಿಕಾರವು, ಅದರ ಆಯವ್ಯಯವನ್ನು ಸಿದ್ಧಪಡಿಸುವಾಗ ಅಳವಡಿಸಿಕೊಳ್ಳಬೇಕಾದ ಹಣಕಾಸಿನ ವಿನಿಯಮಗಳು;

(ಯು) ಕೋಡೆಕ್ಸ್ ಸಭೆಗಳಲ್ಲಿ ಭಾಗವಹಿಸುವುದಕ್ಕಾಗಿ ಮಾರ್ಗಸೂಚಿಗಳನ್ನು ಅಥವಾ ನಿರ್ದೇಶನಗಳನ್ನು ನೀಡುವುದು ಮತ್ತು ಕೋಡೆಕ್ಸ್ ವಿಷಯಗಳಿಗೆ ಸಂಬಂಧಿಸಿದಂತೆ ಸಿದ್ಧತೆ; ಮತ್ತು

(ವಿ) ವಿನಿಯಮಗಳ ಮೂಲಕ ಯಾವ ವಿಷಯವನ್ನು ನಿರ್ದಿಷ್ಟಪಡಿಸಬೇಕೋ ಅಥವಾ ನಿರ್ದಿಷ್ಟಪಡಿಸಬಹುದೋ ಅಥವಾ ಯಾವ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಬೇಕೋ ಆ ಯಾವುದೇ ಇತರ ವಿಷಯ.

**93. ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ಆ ನಿಯಮವು ಅಥವಾ ವಿನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ವಿನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**94. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಅನುಕ್ರಮವಾಗಿ ನಿಯಮಗಳನ್ನು ಮತ್ತು ವಿನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಮತ್ತು ಆಹಾರ ಪ್ರಾಧಿಕಾರದ ಅಧಿಕಾರಗಳಿಗೆ ಒಳಪಟ್ಟು, ಆಹಾರ ಪ್ರಾಧಿಕಾರದ ಪೂರ್ವ ಪ್ರಕಟಣೆ ಮತ್ತು ಪೂರ್ವಾನುಮೋದನೆಯ ತರುವಾಯ, ರಾಜಪತ್ರದಲ್ಲಿ

ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ರಾಜ್ಯ ಸರ್ಕಾರಕ್ಕೆ ಮತ್ತು ರಾಜ್ಯ ಆಹಾರ ಸುರಕ್ಷತಾ ಆಯುಕ್ತನಿಗೆ ವಹಿಸಿಕೊಟ್ಟ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನೆರವೇರಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಅಂಥ ನಿಯಮಗಳಲ್ಲಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಪ್ರಕರಣ 30ರ ಉಪಪ್ರಕರಣ (2)ರ (ಎಫ್) ಖಂಡದ ಮೇರೆಗೆ ಆಹಾರ ಸುರಕ್ಷತಾ ಆಯುಕ್ತನ ಇತರ ಪ್ರಕಾರ್ಯಗಳು;

(ಬಿ) ನಿಧಿಯನ್ನು ಮೀಸಲಿಡುವುದು ಮತ್ತು ಪ್ರಕರಣ 95ರ ಮೇರೆಗೆ ಅಪರಾಧದ ಪತ್ತೆ ಅಥವಾ ಅಪರಾಧಿಯನ್ನು ದಸ್ತಗಿರಿ ಮಾಡುವಾಗ ನೆರವು ನೀಡುವ ವ್ಯಕ್ತಿಗೆ ಯಾವ ರೀತಿಯಲ್ಲಿ ಇನಾಮನ್ನು ನೀಡಬೇಕೋ ಆ ರೀತಿ;

(ಸಿ) ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಯಾವ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧವನ್ನು ಕಲ್ಪಿಸಬೇಕೋ ಆ ಯಾವುದೇ ಇತರ ವಿಷಯ;

(3) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ ಆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನ ಮಂಡಲವು ಒಂದು ಸದನವನ್ನು ಒಳಗೊಂಡಿರುವಲ್ಲಿ, ಆ ಒಂದು ಸದನದ ಮುಂದೆ ಮಂಡಿಸತಕ್ಕದ್ದು.

**95. ರಾಜ್ಯ ಸರ್ಕಾರದಿಂದ ಇನಾಮು.–** ರಾಜ್ಯ ಸರ್ಕಾರವು, ಅಪರಾಧದ ಪತ್ತೆ ಅಥವಾ ಅಪರಾಧಿಯನ್ನು ದಸ್ತಗಿರಿ ಮಾಡುವಲ್ಲಿ ನೆರವು ನೀಡಿದ ವ್ಯಕ್ತಿಗೆ ಅಂಥ ನಿಧಿಯಿಂದ ಮತ್ತು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಇನಾಮನ್ನು ನೀಡುವಂತೆ ಆದೇಶಿಸಲು ಆಹಾರ ಸುರಕ್ಷತಾ ಆಯುಕ್ತರಿಗೆ ಅಧಿಕಾರ ನೀಡಬಹುದು.

**96. ದಂಡ ವಸೂಲಿ.–** ಈ ಅಧಿನಿಯಮದ ಮೇರೆಗೆ ವಿಧಿಸಿದ ದಂಡವನ್ನು ಸಂದಾಯ ಮಾಡಿರದಿದ್ದರೆ, ಅದನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು ಮತ್ತು ದಂಡವನ್ನು ಸಂದಾಯ ಮಾಡುವವರೆಗೆ ತಪ್ಪಿತಸ್ಥರ ಲೈಸೆನ್ಸನ್ನು ಅಮಾನತ್ತಿನಲ್ಲಿ ಇಡತಕ್ಕದ್ದು;

**97. ನಿರಸನ ಮತ್ತು ಉಳಿಸುವಿಕೆಗಳು.–** (1) ಕೇಂದ್ರ ಸರ್ಕಾರವು ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿ ಮತ್ತು ಆದೇಶಗಳು ನಿರಸಿತವಾಗತಕ್ಕದ್ದು:

ಪರಂತು, ಅಂಥ ನಿರಸನವು,–

(i) ನಿರಸನಕ್ಕೆ ಒಳಪಟ್ಟಿರುವ ಮೇರೆಗಿನ ಅಧಿನಿಯಮಿತಿಯ ಮತ್ತು ಆದೇಶಗಳು ಹಿಂದಿನ ಕಾರ್ಯಚರಣೆಗಳಿಗೆ ಅಥವಾ ಅದರ ಮೇರೆಗೆ ಯುಕ್ತವಾಗಿ ಮಾಡಿದ ಅಥವಾ ಮಾಡಲು ಎಡೆಮಾಡಿ ಕೊಟ್ಟ ಯಾವುದೇ ವಿಷಯಕ್ಕೆ, ಅಥವಾ

(ii) ನಿರಸನಕ್ಕೆ ಒಳಪಟ್ಟಿರುವ ಯಾವುದೇ ಅಧಿನಿಯಮಿತಿಯ ಅಥವಾ ಆದೇಶಗಳ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕಿಗೆ, ವಿಶೇಧಿಕಾರಕ್ಕೆ, ಬಾಧ್ಯತೆಗೆ, ಅಥವಾ ಹೊಣೆಗಾರಿಕೆಗೆ; ಅಥವಾ

(iii) ನಿರಸನಕ್ಕೆ ಒಳಪಟ್ಟಿರುವ ಅಧಿನಿಯಮಿತಿಯ ಅಥವಾ ಆದೇಶಗಳ ವಿರುದ್ಧ ಎಸಗಿದ ಯಾವುವೇ ಅಪರಾಧಗಳಿಗೆ ಸಂಬಂಧಿಸಿದಂತೆ ವಿಧಿಸಿದ ಯಾವುದೇ ದಂಡಕ್ಕೆ, ಮುಟ್ಟುಗೋಲಿಗೆ ಅಥವಾ ಶಿಕ್ಷೆಗೆ; ಅಥವಾ

(iv) ಅಂಥ ಯಾವುದೇ ದಂಡಕ್ಕೆ, ಮುಟ್ಟುಗೋಲಿಗೆ ಅಥವಾ ಶಿಕ್ಷೆಗೆ ಸಂಬಂಧಿಸಿದಂತೆ ಯಾವುದೇ ತನಿಖೆಗೆ ಅಥವಾ ಪರಿಹಾರೋಪಾಯಕ್ಕೆ

– ಭಾದಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಅಂಥ ಯಾವುದೇ ತನಿಖೆಯನ್ನು ಪ್ರಾರಂಭಿಒಸಬಹುದು, ಕಾನೂನು ವ್ಯವಹರಣೆಗಳನ್ನು ಮುಂದುವರೆಸಬಹುದು ಅಥವಾ ಪರಿಹಾರೋಪಾಯವನ್ನು ಜಾರಿಗೊಳಿಸಬಹುದು ಮತ್ತು ಅಂಥ ಯಾವುದೇ ದಂಡವನ್ನು, ಮುಟ್ಟುಗೋಲನ್ನು ಅಥವಾ ಶಿಕ್ಷೆಯನ್ನು ಈ ಅಧಿನಿಯಮವನ್ನು ಅಂಗೀಕರಿಸಿರದಿದ್ದರೆ ಹೇಗೋ ಹಾಗೆ ವಿಧಿಸಬಹುದು.

(2) ಈ ಅಧಿನಿಯಮಕ್ಕೆ ಸಂವಾದಿಯಾಗಿ ಯಾವುದೇ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನು ಇದ್ದರೆ, ಈ ಅಧಿನಿಯಮವು ಪ್ರಾರಂಭವಾದ ಮೇಲೆ ಅದು ನಿರಸನವಾಗತಕ್ಕದ್ದು ಮತ್ತು ಅಂಥ ಪ್ರಕರಣದಲ್ಲಿ, ರಾಜ್ಯ ಕಾನೂನಿನ ಅಂಥ ಉಪಬಂಧಗಳನ್ನು ನಿರಸನಗೊಳಿಸಿದ್ದರೆ ಹೇಗೋ ಹಾಗೆ, ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ ಪ್ರಕರಣ 6ರ ಉಪಬಂಧಗಳು ಅನ್ವಯವಾಗತಕ್ಕದ್ದು.

(3) ಮೇಲೆ ಹೇಳಿದ ಅಧಿನಿಯಮಿತಿಗಳು ಮತ್ತು ಆದೇಶಗಳು ನಿರಸನಗೊಂಡಿದ್ದರೂ, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ಯಾವುದೇ ಅಂಥ ಅಧಿನಿಯಮಿತಿಯ ಅಥವಾ ಆದೇಶದ ಮೇರೆಗೆ ನೀಡಿದ ಲೈಸೆನ್ಸುಗಳು, ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಅವುಗಳನ್ನು ನೀಡಿದ್ದರೆ ಹೇಗೋ ಹಾಗೆ, ಎಲ್ಲ ಉದ್ದೇಶಗಳಿಗಾಗಿ ಅವು ಮುಕ್ತಾಯವಾಗುವ ದಿನಾಂಕದವರೆಗೆ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾವಾದ ತರುವಾಯ, ನಿರಸನಗೊಳಿಸಿದ ಅಧಿನಿಯಮ ಅಥವಾ ಆದೇಶಗಳ ಮೇರೆಗೆ ಯಾವುದೇ ನ್ಯಾಯಾಲಯವು ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**98. ಆಹಾರ ಗುಣಮಟ್ಟಗಳಿಗಾಗಿ ತಾತ್ಕಾಲಿಕ ಉಪಬಂಧಗಳು.–** ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಯು ಮತ್ತು ಆದೇಶಗಳು ನಿರಸನಗೊಂಡಿದ್ದರೂ, ಗುಣಮಟ್ಟಗಳು, ಸುರಕ್ಷತಾ ಅಗತ್ಯತೆಗಳು ಮತ್ತು ಅಧಿನಿಯಮದ ಇತರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ವಿನಿಯಮಗಳು ಮತ್ತು ಆ

ಅನುಸೂಚಿಯಲ್ಲಿ ಪಟ್ಟಿ ಮಾಡಿದ ಆದೇಶಗಳು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಅವು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ಹೊಸ ಗುಣಮಟ್ಟಗಳನ್ನು ನಿರ್ದಿಷ್ಟಪಡಿಸುವವರೆಗೆ ಪ್ರವರ್ತನೆಯಲ್ಲಿರತಕ್ಕದ್ದು:

ಪರಂತು, ನಿರಸನಕ್ಕೆ ಒಳಪಟ್ಟಿರುವ, ಅಧಿನಿಯಮಿತಿಯ ಮತ್ತು ಆದೇಶಗಳ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಿಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದಿಂದ ಅಥವಾ ಕೈಗೊಂಡ ಯಾವುದೇ ಕ್ರಮದಿಂದ ರದ್ದುಗೊಳಿಸಿದ ಹೊರತು ಮತ್ತು ರದ್ದುಗೊಳಿಸುವವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

**99. ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ, 1992ನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳು ಎಂದು ಭಾವಿಸತಕ್ಕದ್ದು.–** (1) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ, ಅವಶ್ಯಕ ಸರಕುಗಳ ಅಧಿನಿಯಮ, 1955 (1955ರ 10)ರ ಮೇರೆಗೆ ಹೊರಡಿಸಿದ ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ, 1992ನ್ನು, ಈ ಅಧಿನಿಯಮದ ಮೇರೆಗೆ ಆಹಾರ ಪ್ರಾಧಿಕಾರವು ಹೊರಡಿಸಿದ ಹಾಲು ಮತ್ತು ಹಾಲು ಉತ್ಪನ್ನಗಳ ವಿನಿಯಮಗಳು, 1992 ಎಂದು ಭಾವಿಸತಕ್ಕದ್ದು.

(2) ಆಹಾರ ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ಪೂರ್ವ ಪ್ರಕಟಣೆಯ ತರುವಾಯ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಉಪಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ವಿನಿಯಮಗಳನ್ನು ತಿದ್ದುಪಡಿ ಮಾಡಬಹುದು.

**100. ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಗಳ (ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 1992ಕ್ಕೆ ತಿದ್ದುಪಡಿಗಳು.–** ಅಧಿಸೂಚಿಸಿದ ದಿನದಿಂದ, ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಗಳ (ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 1992 (1992ರ 41)ರ ಉಪಬಂಧಗಳು (ಇದರಲ್ಲಿ ಮೂಲ ಅಧಿನಿಯಮವೆಂದು ಉಲ್ಲೇಖಿಸಿದೆ) ಈ ಕೆಳಕಂಡ ತಿದ್ದುಪಡಿಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದು, ಎಂದರೆ:–

(ಎ) ಮೂಲ ಅಧಿನಿಯಮದ ಆದ್ಯಂತ, "ಆಹಾರ ಕಲಬೆರಕೆ ನಿವಾರಣಾ ಅಧಿನಿಯಮ, 1954" ಎಂದು ಹೇಳಿರುವುದಕ್ಕೆ ಬದಲಾಗಿ "ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ ಅಧಿನಿಯಮ, 2006" ಎಂದು ಪ್ರತ್ಯಾಯೋಜಿಸತಕ್ಕದ್ದು;

(ಬಿ) ಮೂಲ ಅಧಿನಿಯಮದ ಪ್ರಕರಣ 12ರಲ್ಲಿ "ಆಹಾರ ಕಲಬೆರಕೆ ನಿವಾರಣಾ ಅಧಿನಿಯಮ, 1954 (1954ರ 37)ರ ಪ್ರಕರಣ 9ರ ಮೇರೆಗೆ ನೇಮಕ ಮಾಡಿದ ಯಾರೇ ಆಹಾರ ಪರಿಶೀಲಕ" ನಿಗೆ ಸಂಬಂಧಿಸಿದಂತೆ ಮಾಡಿದ ಉಲ್ಲೇಖವನ್ನು "ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ ಅಧಿನಿಯಮ, 2006ರ ಮೇರೆಗೆ ನೇಮಕ ಮಾಡಿದ ಯಾರೇ ಆಹಾರ ಸುರಕ್ಷತಾ ಅಧಿಕಾರಿಗೆ ಸಂಬಂಧಿಸಿದಂತೆ ಮಾಡಿದ" ಉಲ್ಲೇಖದ ಮೂಲಕ ಪ್ರತಿಯೋಜಿಸತಕ್ಕದ್ದು;

(ಸಿ) ಮೂಲ ಅಧಿನಿಯಮದ ಆದ್ಯಂತ "ಆಹಾರ ಪರಿವೀಕ್ಷಕ" ಎಂದು ಹೇಳಿರುವುದಕ್ಕೆ ಬದಲಾಗಿ "ಆಹಾರ ಸುರಕ್ಷತಾ ಅಧಿಕಾರಿ" ಎಂದು ಪ್ರತಿಯೋಜಿಸತಕ್ಕದ್ದು; ಮತ್ತು

(ಡಿ) ಮೂಲ ಅಧಿನಿಯಮದ ಪ್ರಕರಣ 21ರ ಉಪಪ್ರಕರಣ (1)ರ, (ಎ)ಖಂಡಕ್ಕೆ ಮಾಡಿರುವ ಉಲ್ಲೇಖವನ್ನು ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು, ಎಂದರೆ:–

¨(ಎ) ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ ಅಧಿನಿಯಮ, 2006ರ ಪ್ರಕರಣ 42ರ ಉಪಪ್ರಕರಣ (5)ರ ಮೇರೆಗೆ ನಿರ್ದೇಶಿಸಲಾದ ಗೊತ್ತುಪಡಿಸಿದ ಅಧಿಕಾರಿ ಅಥವಾ ಆಹಾರ ಸುರಕ್ಷತಾ ಅಧಿಕಾರಿ; ಅಥವಾ¨.

**101. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿ ಮಾಡುವಾಗ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ತೊಂದರೆಯ ನಿವಾರಣೆಗಾಗಿ, ತನಗೆ ಅಗತ್ಯವೆಂದು ಕಂಡುಬರಬಹುದಾದಂತೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

## ಮೊದಲನೇ ಅನುಸೂಚಿ

**[5(1) (ಇ) ಪ್ರಕರಣ ನೋಡಿ]**

**ವಲಯ – I**

1. ಆಂಧ್ರ ಪ್ರದೇಶ
2. ಗೋವಾ
3. ಕರ್ನಾಟಕ
4. ಕೇರಳ
5. ಮಹಾರಾಷ್ಟ್ರ
6. ಒರಿಸ್ಸಾ
7. ತಮಿಳುನಾಡು

**ವಲಯ – II**

1. ಹರಿಯಾಣ
2. ಹಿಮಾಚಲ ಪ್ರದೇಶ
3. ಜಮ್ಮು ಮತ್ತು ಕಾಶ್ಮೀರ
4. ಪಂಜಾಬ್
5. ಉತ್ತರಾಂಚಲ

6. ಉತ್ತರ ಪ್ರದೇಶ

**ವಲಯ– III**

1. ಬಿಹಾರ್
2. ಛತ್ತೀಸ್‌ಘಢ್
3. ಗುಜರಾತ್
4. ಜಾರ್ಖಂಡ್
5. ಮಧ್ಯ ಪ್ರದೇಶ
6. ರಾಜಸ್ತಾನ
7. ಪಶ್ಚಿಮ ಬಂಗಾಳ

**ವಲಯ – IV**

1. ಅರುಣಾಚಲ ಪ್ರದೇಶ
2. ಅಸ್ಸಾಂ
3. ಮಣಿಪುರ
4. ಮೇಘಾಲಯ
5. ಮಿಜೋರಾಂ
6. ನಾಗಾಲ್ಯಾಂಡ್
7. ಸಿಕ್ಕಿಂ
8. ತ್ರಿಪುರ

**ವಲಯ – V**

1. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು
2. ಚಂಡೀಘಢ್
3. ದಾದ್ರಾ ಮತ್ತು ನಗರ್ ಹವೇಲಿ
4. ದಾಮನ್ ಮತ್ತು ದಿಯು
5. ದೆಹಲಿ
6. ಲಕ್ಷದ್ವೀಪ
7. ಪುದುಚೆರಿ

## ಎರಡನೇ ಅನುಸೂಚಿ

**(ಪ್ರಕರಣ 97ನ್ನು ನೋಡಿ)**

1. ಆಹಾರ ಕಲಬೆರಕೆ ನಿವಾರಣಾ ಅಧಿನಿಯಮ, 1954 (1954ರ 37)
2. ಹಣ್ಣು ಉತ್ಪನ್ನಗಳ ಆದೇಶ, 1955.
3. ಮಾಂಸಾಹಾರ ಉತ್ಪನ್ನಗಳ ಆದೇಶ, 1973.
4. ವನಸ್ಪತಿ ತೈಲ ಉತ್ಪನ್ನಗಳ (ವಿನಯಮನ) ಆದೇಶ, 1947.
5. ಖಾದ್ಯ ತೈಲಗಳ ಪ್ಯಾಕೇಜಿಂಗ್ (ವಿನಿಯಮನ) ಆದೇಶ, 1998.
6. ಸಾಲ್ವೆಂಟ್ ಎಕ್ಸ್ಟ್ರಾಕ್ಟಡ್ ಆಯಿಲ್, ಡಿ–ಆಯಿಲ್ಡ್ ಮೀಲ್, ಮತ್ತು ಎಡಿಬಲ್ ಪ್ಲೋರ್ (ವಿನಿಯಮನ) ಆದೇಶ, 1967.
7. ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ, 1992.
8. ಅವಶ್ಯಕ ಸರಕುಗಳ ಅಧಿನಿಯಮ, 1955 (1955ರ 10)ರ ಮೇರೆಗೆ ಆಹಾರಕ್ಕೆ ಸಂಬಂಧಿಸಿದಂತೆ ಹೊರಡಿಸಿದ ಯಾವುದೇ ಇತರ ಆದೇಶ.